Editor: S.Y.GURUSHANTH Publisher: G.N.NAGARAJ RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ-19 | ಸಂಚಿಕೆ-17 | ಏಪ್ರಿಲ್ 21-27, 2025 | ಪುಟ 16 | ರೂ.10/-
Volume-19 | Issue-17 | April 21-27, 2025 | Pages:16 | Price: 10/-



ವಕ್ಫ್ ತಿದ್ದುಪಡಿ ಕಾಯ್ದೆ ಹಿಂದಿರುವ ಹುನ್ನಾರಗಳು

ಹುಬ್ಬಳ್ಳಿ ಎನ್ ಕೌಂಟರ್: ಅಗ್ಗದ ಜನಪ್ರಿಯತೆಯೋ? ಕಾನೂನು ಪಾಲನೆಯೋ?





ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಲ್ಲಿಸುವ ನಿಜ ಗೌರವ

`ಸೌಜನ್ಯ' ಪ್ರಕರಣ: ಮರೀಚಿಕೆಯಾದ ನ್ಯಾಯ

ಮೇ 20, 2025 ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ

ಪ್ರತಿರೋಧದ ಹೋರಾಟ ಮತ್ತಷ್ಟು ಮುಗಿಲೆತ್ತರಕ್ಕೆ

ಭೂಮಿಯಿಂದ ಓಡಿಸಲ್ಪಟ್ಟ ರೈತರ ಗತಿ ಏನಾಯಿತು?

ಬ್ರಿಟನ್‌ನಲ್ಲಿ 15ನೇ ಶತಮಾನದ ಕೊನೆಯಲ್ಲಿ ಹಾಗೂ 16ನೇ ಶತಮಾನದ ಕೊನೆಯ ಭಾಗದವರೆಗೆ ಊರೊಟ್ಟಿನ ಲಕ್ಷಗಟ್ಟಲೆ ಭೂಮಿಗಳಂದ ಒಕ್ಕಲೆಬ್ಬಿಸುವಿಕೆಯ ಫಲವಾಗಿ ಅಲ್ಲಿನ ಬಿಳಿಯ ರೈತರು, ಕೂಲಿಕಾರರನ್ನು ಗುಲಾಮರನ್ನಾಗಿ ಮಾಡಿಕೊಂಡ ಸನ್ನಿವೇಶನವನ್ನು ಜಿ.ಎನ್. ನಾಗರಾಜ್ ಇಲ್ಲಿ ವಿವರಿಸಿದ್ದಾರೆ. ಹಿಂದಿನ ಲೇಖನದ ಮುಂದುವರಿದ ಭಾಗ.



ಭಾಗ 22

ಜಿ.ಎನ್. ನಾಗರಾಜ್

"ಅವನಿಗೆ ಚೆನ್ನಾಗಿ ಚಾಟಿಯಿಂದ ಬಾರಿಸಿ. ಬಂಡಿ ಅಥವಾ ಚಕ್ಕಡಿಯ ಹಿಂಭಾಗಕ್ಕೆ ಕಟ್ಟಿ ಹೊಡೆಯಿರಿ. ಅವನ ಮೈಯಿಂದ ಧಾರೆಯಾಗಿ ರಕ್ತ ಹರಿಯುವವರೆಗೆ ಹೊಡೆಯಿರಿ. ನಂತರ ಅವರು ತಮ್ಮ ಹುಟ್ಟಿದ ಹಳ್ಳಿಗಳಿಗೆ ಹಿಂದಿರುಗಬೇಕು. ಇಲ್ಲದಿದ್ದರೆ ಅವರು ಹಿಂದಿನ ಮೂರು ವರ್ಷಗಳಿಂದ ವಾಸವಾಗಿದ್ದ ಜಾಗಕ್ಕೆ. ಅಲ್ಲಿ ದುಡಿಮೆ ಮಾಡಿ ಜೀವಿಸಬೇಕು. ಹಾಗೆ ಮಾಡದೆ ಮತ್ತೆ ಅಲೆಮಾರಿಯಾಗಿ ಅಲೆದಾಡುತ್ತಿದ್ದರೆ, ಭಿಕ್ಷೆ ಬೇಡುತ್ತಾ ಮತ್ತೆ ಎರಡನೇ ಬಾರಿಗೆ ಸಿಕ್ಕಿಬಿದ್ದರೆ ಅವನಿಗೆ ಮತ್ತೆ ಚಾಟಿಯಿಂದ ಚೆನ್ನಾಗಿ ಬಾರಿಸಿ ಮತ್ತು ಅರ್ಧ ಕಿವಿಯನ್ನು ಕತ್ತರಿಸಿ ಬಿಡಿ. ಮೂರನೇ ಬಾರಿ ಸಿಕ್ಕಿಬಿದ್ದರೆ ಕ್ರಿಮಿನಲ್‌ಗಳಂತೆ ಪರಿಗಣಿಸಿ ಕೊಂದೇ ಹಾಕಿಬಿಡಿ."

ಇದು ಬ್ರಿಟನ್ ರಾಜನ 1530 ರ ಆಜ್ಞೆ. ಯಾವ ರೈತರು, ಕೃಷಿ ಕೂಲಿಕಾರರನ್ನು ಲಕ್ಷಗಟ್ಟಲೆ ಭೂಮಿಯಿಂದ ನಿಷ್ಕರುಣೆಯಿಂದ ಹೊರಹಾಕಿದರಲ್ಲಾ ಆ ರೈತರು, ಕೂಲಿಕಾರರಿಗೆ ವಿಧಿಸಿದ ಶಿಕ್ಷೆ ಇದು. ಹೀಗೆ 15ನೇ ಶತಮಾನದ ಕೊನೆಯಲ್ಲಿ ಹಾಗೂ 16ನೇ ಶತಮಾನದ ಕೊನೆಯ ಭಾಗದವರೆಗೆ ಭರದಿಂದ ನಡೆದ ಈ ಒಕ್ಕಲೆಬ್ಬಿಸುವಿಕೆಯ ಫಲವಾಗಿ ಲಕ್ಷಾಂತರ ರೈತರು, ಕೂಲಿಕಾರರು ಕೆಲಸ ಹುಡುಕಿಕೊಂಡು ಅಲೆಯಲಾರಂಭಿಸಿದರು. ಸಿಕ್ಕ ಸಿಕ್ಕ ಕೆಲಸಗಳನ್ನು ಮಾಡಿ ಹೊಟ್ಟೆ ಹೊರೆಯಲು ಪ್ರಯತ್ನಿಸಿದರು. ಆ ಸಮಯದಲ್ಲಿ ಬ್ರಿಟನ್ ಇನ್ನೂ ಕೈಗಾರಿಕಾ ಕ್ರಾಂತಿಯ ಯುಗಕ್ಕೆ ಕಾಲಿಟ್ಟರಲಿಲ್ಲ. ನಗರಗಳು ಇನ್ನೂ ಸಣ್ಣವಾಗಿದ್ದವು. ಉದ್ಯೋಗಗಳು ಅಲಭ್ಯವಾಗಿದ್ದವು. ಅಂತಹ ಸಮಯದಲ್ಲಿ ಅವರುಗಳು ಕೆಲಸ ಸಿಗದಿದ್ದಾಗ ಭಿಕ್ಷೆ ಬೇಡುವುದಕ್ಕೆ, ಕಳ್ಳತನ ಮಾಡುವುದಕ್ಕೆ ಇಳಿಯಬೇಕಾಯಿತು.

ರಾಜ ಅದಕ್ಕೆ ಹುಡುಕಿದ ಪರಿಹಾರ ಇದು. ಸಾವಿರಾರು ವರ್ಷಗಳಿಂದ ಯಾವ ಭೂಮಿಯಲ್ಲಿ ಶ್ರಮಿಸುತ್ತಾ ಬದುಕಿದ್ದರೊ ಆ ಹಳ್ಳಿಗಳಿಂದ, ಆ ಭೂಮಿಗಳಿಂದ ಓಡಿಸಿದ್ದರು. ಆಗಲೇ ಬೇಲಿ ಹಾಕಿ ವಶ ಪಡಿಸಿಕೊಂಡ ಆ ಭೂಮಿಯನ್ನು ಹಿಂದಿರುಗಿಸುವ ಮಾತು ಮಾತ್ರ ಇಲ್ಲ. ಹೀಗೆ ಹಳ್ಳಿಗಳಿಂದ ಹೊರಗಟ್ಟುವುದು, ಮತ್ತೆ ಹಳ್ಳಿಗಳಿಗೆ ಮರಳದಿದ್ದರೆ ಸಾವೇ ಗತಿ ಎಂದು ಬೆದರಿಕೆ ಹಾಕಿ ಅಟ್ಟುವುದು. ಇದು ರಾಜ ದರ್ಬಾರು ಇವರ ಮೇಲೆ ಎಸಗುತ್ತಿದ್ದ ಕ್ರೂರ ವ್ಯಂಗ್ಯ.

ಇಂತಹ ಕಾನೂನುಗಳು ಒಂದಲ್ಲ, ಸರಮಾಲೆಯಂತೆ ಒಂದರ ಹಿಂದೊಂದು ಕ್ರೌರ್ಯದಲ್ಲಿ ಒಂದಕ್ಕಿಂತ ಒಂದು ಮೀರಿಸುತ್ತಾ ಸಂಕಟದಲ್ಲಿರುವ ಈ ಸಮುದಾಯವನ್ನು ಆವರಿಸಿದವು. ಇಂತಹ ಒಬ್ಬನನ್ನು ಸೋಮಾರಿ ಎಂದು ಖಂಡನೆಗೆ ಗುರಿ ಮಾಡಿದರೆ ಅವನು ಗುಲಾಮನಾಗಿರಬೇಕು. ಅವನನ್ನು ಹಾಗೆ ಸೋಮಾರಿ ಎಂದು ಯಾರು ಖಂಡಿಸಿದರೋ ಆ ವ್ಯಕ್ತಿಯ ಗುಲಾಮನಾಗಿರಬೇಕು. ಈ ಯಜಮಾನ ಗುಲಾಮನಿಗೆ ಒಂದಿಷ್ಟು ಕನಿಷ್ಠ ಆಹಾರ ನೀಡಿ ದುಡಿಸಿಕೊಳ್ಳಬಹುದು. ಅವನಿಗೆ ಎಷ್ಟೇ ಅಸಹ್ಯಕರವಾದ ಕೆಲಸವನ್ನಾದರೂ ಕೊಡಬಹುದು. ಚಾಟಿ ಬೀಸಿ ಮತ್ತು ಸರಪಳಿಯಲ್ಲಿ ಕಟ್ಟಿ ಹಾಕಿ ಕೆಲಸ ಮಾಡಿಸಿಕೊಳ್ಳಬಹುದು. ಇಂತಹ ಗುಲಾಮ 15 ದಿನಗಳ ಕಾಲ ಕೆಲಸಕ್ಕೆ ಗೈರುಹಾಜರಾದರೆ ಅವನನ್ನು ಜೀವಮಾನ ಪರ್ಯಂತ ಗುಲಾಮ ಎಂದು ಘೋಷಿಸಿ ಅವನ ಹಣೆ ಅಥವಾ ಬೆನ್ನಿನ ಮೇಲೆ 'ಗು' (ಇಂಗ್ಲಿಷಿನ ಎಸ್) ಎಂದು ಗುರುತಿನ ಬರೆ ಹಾಕಬಹುದು. ಮೂರು ಬಾರಿ ಗೈರು ಹಾಜರಾದರೆ ಅಂತಹ ಗುಲಾಮನನ್ನು ಹತ್ಯೆ ಮಾಡಬಹುದು.

ಇಂತಹ ಗುಲಾಮನನ್ನು ಯಜಮಾನ ಒಂದು ದನದಂತೆ ಮಾರಬಹುದು, ತನ್ನ ವಾರಸುದಾರರಿಗೆ ವರ್ಗಾಯಿಸಬಹುದು, ಬಾಡಿಗೆಗೆ ಕೊಡಬಹುದು. ಗುಲಾಮ ತಿರುಗಿ ಬಿದ್ದರೆ ಅವನನ್ನು ಕೊಲ್ಲಬಹುದು. ಗುಲಾಮರು ತಪ್ಪಿಸಿಕೊಂಡರೆ ಅಲ್ಲಿಯ ನ್ಯಾಯಾಧಿಕಾರಿಗಳು ಅವರನ್ನು ಅಟ್ಟಿಸಿಕೊಂಡು ಹೋಗಿ ಹಿಡಿಯಬಹುದು. (ನೆನಪಿಡಿ, ಇವರು ಮುಂದೆ ಒಂದು ಶತಮಾನದ ನಂತರ ಆಫ್ರಿಕಾದ ಗುಲಾಮ ವ್ಯಾಪಾರದ ನಂತರ ಅಸ್ತಿತ್ವಕ್ಕೆ ಬಂದ ಕಪ್ಪುಜನರ ಗುಲಾಮಗಿರಿಯಲ್ಲ. ಬ್ರಿಟನ್‌ನ ಬಿಳಿಯ ರೈತರು, ಕೂಲಿಕಾರರು.)

ಯಾರಾದರೂ ಮೂರು ದಿನಗಳ ಕಾಲ ಕೆಲಸವಿಲ್ಲದೆ ಅಲೆದಾಡುತ್ತಿದ್ದಾರೆ ಎಂದು ಈ ಅಧಿಕಾರಿಗಳಿಗೆ ಕಂಡು ಬಂದರೆ ಅವರನ್ನು ಅವರ ಊರಿಗೆ ಕರೆದುಕೊಂಡು ಹೋಗಬೇಕು. ಅವರ ಎದೆಯ ಮೇಲೆ ಭಿಕಾರಿ ಎಂದು ಬರೆ ಹಾಕಬೇಕು. ಅವರನ್ನು ಅಲ್ಲಿ ಬೀದಿಗಳಲ್ಲಿ ಕೆಲಸಕ್ಕೆ ಹಚ್ಚಬೇಕು. ಅವರೇನಾದರೂ ತಮ್ಮ ಸ್ವಂತ ಸ್ಥಳದ ಬಗ್ಗೆ ಸುಳ್ಳು ಹೇಳಿದರೆ ಅವರು ಹೇಳಿದ ಸ್ಥಳಕ್ಕೆ ಕರೆದುಕೊಂಡು ಹೋಗಬೇಕು. ಅವರು ಅಲ್ಲಿ ಜೀವಮಾನ ಪರ್ಯಂತ ಗುಲಾಮರಾಗಿ ದುಡಿಯಬೇಕು. ಅವರ ಎದೆಯ ಮೇಲೆ ಗುಲಾಮ ಎಂದು ಬರೆ ಹಾಕಬೇಕು.

ಇಂತಹ ಭಿಕಾರಿಗಳ ಮಕ್ಕಳನ್ನು ಯಾರು ಬೇಕಾದರೂ ತಮ್ಮ ಜೊತೆ ಒಯ್ದು ತಮ್ಮ ಸಹಾಯಕರನ್ನಾಗಿ ದುಡಿಸಿಕೊಳ್ಳಬಹುದು. ಹುಡುಗರಾದರೆ 24 ವರ್ಷಗಳವರೆಗೆ, ಹುಡುಗಿಯರಾದರೆ 20 ವರ್ಷದವರೆಗೆ. ಅವರೇನಾದರೂ ಮಧ್ಯೆ ಓಡಿಹೋದರೆ ಅವರು ಆ ವಯಸ್ಸಿಗೆ ಬರುವವರೆಗೆ ಗುಲಾಮರಾಗಿರಬೇಕು. ಅವರನ್ನು ಚಾಟಿಯಲ್ಲಿ ಚೆನ್ನಾಗಿ ಬಾರಿಸಬಹುದು, ಸರಪಳಿ ಹಾಕಿ ಕಟ್ಟಿ ಹಾಕಬಹುದು.

14 ವರ್ಷ ಮೀರಿದ ಲೈಸೆನ್ಸ್ ಇಲ್ಲದ ಭಿಕ್ಷುಕರನ್ನು ಯಾರಾದರೂ ಎರಡು ವರ್ಷಗಳವರೆಗೆ ಕೆಲಸಕ್ಕೆ ತೆಗೆದುಕೊಳ್ಳದಿದ್ದರೆ ಅಲ್ಲಿಯವರೆಗೂ ಅವರನ್ನು ಚಾಟಿಯಲ್ಲಿ ಬಾರಿಸಬಹುದು. ಎಡ ಕಿವಿಯ ಮೇಲೆ ಬರೆ ಹಾಕಬಹುದು. ಅವರನ್ನು ಜೈಲಿಗೆ ಕಳಿಸಬಹುದು. ಅಲ್ಲಿಯೂ ಮನ ಬಂದಂತೆ ಹೊಡೆಯಬಹುದು. ಭಿಕ್ಷೆ ಬೇಡುವುದು ಮರುಕಳಿಸಿದರೆ ಕೊಲ್ಲಬಹುದು. ಎಲ್ಲ ಗುಲಾಮರ ಕತ್ತಿನ ಸುತ್ತ, ಕೈ ಹಾಗೂ ಕಾಲುಗಳ ಸುತ್ತ ಕಬ್ಬಿಣದ ಉಂಗುರಗಳಿಂದ ಬಂಧಿಸಬಹುದು. ಬಡವರಿಗೆ ಊಟ ನೀಡಬಲ್ಲ ಯಾರಾದರೂ ಕೂಡಾ ಅವರನ್ನು ಕೆಲಸಕ್ಕೆ ಇಟ್ಟುಕೊಳ್ಳಬಹುದು. ಇದೂ ಒಂದು ರೀತಿಯ ಗುಲಾಮತನ.

ಒಟ್ಟಿನಲ್ಲಿ ಕಸಿದುಕೊಂಡ ರೈತರ ಹಾಗೂ ಊರೊಟ್ಟಿನ ಭೂಮಿ ಕೃಷಿ ಬಂಡವಾಳಗಾರರ ಪಾಲಾಯಿತು. ಆದಿಮ ಬಂಡವಾಳ ಸಂಗ್ರಹಣೆಯ ಸಾಧನವಾಯಿತು. ಮತ್ತೊಂದು ದಿಕ್ಕಿನಲ್ಲಿ ತಮ್ಮದೇ ಭೂಮಿಯಲ್ಲಿ ಸ್ವತಂತ್ರವಾಗಿ ದುಡಿವ ಹೆಮ್ಮೆಯಿಂದ ಜೀವಿಸುತ್ತಿದ್ದ ರೈತರು, ಕೂಲಿಕಾರರು ಅಗ್ಗವಾಗಿ, ವಿಧೇಯ ಗುಲಾಮರಾಗಿ ದುಡಿಯುವುದಕ್ಕೆ ಪಳಗಿಸಲು ಪ್ರಭುತ್ವ ತನ್ನ ಪೋಲಿಸ್ ಹಾಗೂ ಕಾನೂನಿನ ಶಕ್ತಿಯನ್ನೆಲ್ಲಾ ಬಳಸಿತು. ಇದೂ ಕೂಡ ಆಗ ಉದಯವಾಗುತ್ತಿದ್ದ ಕೈಗಾರಿಕಾ ಬಂಡವಾಳಶಾಹಿಗೆ ಶ್ರಮಿಕರನ್ನು ಒದಗಿಸುವ ಸಾಧನವಾಯಿತು. ಇದೂ ಕೂಡಾ ಬಂಡವಾಳ ಸಂಗ್ರಹಣೆಗೆ ದಾರಿಯಾಯಿತು.

ನಮ್ಮ ಹಳ್ಳಿಗಳಲ್ಲಿ ಬೆಳೆಯುತ್ತಿರುವ ಹೋರಿಗರುಗಳು ಹಳ್ಳಿಯ ಬಾಲಕ, ಬಾಲಕಿಯರ ಜೊತೆ ಚೆನ್ನಾಟವಾಡುತ್ತಾ ಇರುತ್ತಿದ್ದವು. ಅವುಗಳನ್ನು ನೇಗಿಲಿಗೆ, ಚಕ್ಕಡಿ ಬಂಡಿಗಳಿಗೆ ಹೂಡಲು ತಯಾರು ಮಾಡುವುದಕ್ಕೆ ಆ ಹೋರಿಗರುಗಳಿಗೆ, ಬಾಯಿಗೆ ಕುಕ್ಕೆಗಳನ್ನು ಕಟ್ಟಿ ಹೆಗಲ ಮೇಲೆ ನೊಗ ಏರಿಸಿ ಓಡಾಡಿಸುತ್ತಾರೆ. ನೊಗಗಳನ್ನು ಕಿತ್ತೆಸೆದು ಓಡಬಯಸುವ ಆ ಹೋರಿಗರುಗಳಿಗೆ ಮುಳ್ಳುಗೋಲಿನಿಂದ ಚೆನ್ನಾಗಿ ಬಡಿದು ಪಳಗಿಸುತ್ತಾರೆ. ಮುಂದೆ ಅವು ನೊಗ ಕಂಡ ಕೂಡಲೆ ತಾವಾಗಿಯೇ ತಲೆ ತಗ್ಗಿಸಿ ಅದಕ್ಕೆ ಕತ್ತನ್ನು ಒಡ್ಡಬೇಕು. ಅಲ್ಲಿಯವರೆಗೆ ಈ ಪಳಗಿಸುವಿಕೆ ನಡೆಯುತ್ತದೆ. ಹಾಗೆ ಪಳಗಲು ಬಗ್ಗದ ಹೋರಿಗರುಗಳು ಕೆಲವು ಇದ್ದೇ ಇರುತ್ತವೆ. ಅಂತಹವುಗಳಿಗೆ ಏನು ಗತಿ ಗೊತ್ತೇ! ಕಸಾಯಿಖಾನೆಗೆ ಮಾರುವುದು. ಅದನ್ನೇ ಬ್ರಿಟಿಷ್ ಪ್ರಭುತ್ವ ಮಾಡಿದ್ದು. ಪಳಗಿಸುವುದು ಇಲ್ಲವೇ ಕೊಲ್ಲುವುದು. ಹೀಗೇ ರೈತರು, ಕೂಲಿಕಾರರನ್ನು ಪಶು ದುಡಿಮೆಗೆ, ದಿನವೆಲ್ಲ ದುಡಿಯುವ ಕೈಗಾರಿಕಾ ಶಿಸ್ತಿಗೆ ಪಳಗಿಸಲು ಎರಡು ಶತಮಾನ ಕಾಲ ಪ್ರಭುತ್ವ ಶಕ್ತಿಯನ್ನು ಬಳಸಲಾಯಿತು.

ಎಡಪಂಥೀಯ ಒಗ್ಗಟ್ಟಿನ ಜಾಗತಿಕ ಸಮಾವೇಶದ ಕೇಂದ್ರವಾಗಿ ಹೊರಹೊಮ್ಮಿದ ಸಿಪಿಐ(ಎಂ)ನ 24ನೇ ಮಹಾಧಿವೇಶನ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ 24ನೇ ಮಹಾಧಿವೇಶನವು ವಿಶ್ವಾದ್ಯಂತ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳಿಗೆ ಒಂದು ಸಮಾವೇಶದ ಕೇಂದ್ರವಾಗಿತ್ತು. ತಮಿಳುನಾಡಿನ ಮದುರೈನಲ್ಲಿ, 'ಸೀತಾರಾಮ್ ಯೆಚೂರಿ ನಗರ'ದಲ್ಲಿ ನಡೆದ ಮಹಾಧಿವೇಶನಕ್ಕೆ 30ಕ್ಕೂ ಹೆಚ್ಚು ಸಹೋದರ ಸಂಘಟನೆಗಳು ಒಗ್ಗಟ್ಟಿನ ಸಂದೇಶಗಳನ್ನು ಕಳುಹಿಸಿವೆ. ಏಪ್ರಿಲ್ 2ರಿಂದ 6ರವರೆಗೆ ನಡೆದ ಈ ಮಹಾಧಿವೇಶನವು ಭಾರತದ ರಾಜಕೀಯದಲ್ಲಿ ಸಿಪಿಐ(ಎಂ)ನ ನಿರಂತರ ಪ್ರಭಾವ ಮತ್ತು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಅದರ ಮಹತ್ವವನ್ನು ಎತ್ತಿ ತೋರಿಸಿದೆ.

ಕಾರ್ಮಿಕರ ಹಕ್ಕುಗಳು, ಜಾತ್ಯತೀತ ಮೌಲ್ಯಗಳು ಮತ್ತು ಸಮಾಜವಾದಿ ಆದರ್ಶಗಳಿಗೆ ಸಿಪಿಐ(ಎಂ)ನ ಶತಮಾನಗಳ ಬದ್ಧತೆಯನ್ನು ಬೀಜಿಂಗ್‌ನಿಂದ ಕ್ಯಾರಕಾಸ್‌ವರೆಗೆ ಕಮ್ಯುನಿಸ್ಟ್ ಪಕ್ಷಗಳು ಶ್ಲಾಘಿಸಿವೆ. ಚೀನಾ ಕಮ್ಯುನಿಸ್ಟ್ ಪಕ್ಷವು ತನ್ನ ಸಂದೇಶದಲ್ಲಿ ಚೀನಾ–ಭಾರತಗಳ ಬಲಿಷ್ಠವಾದ ಸಂಬಂಧಗಳ ಮಹತ್ವವನ್ನು ಒತ್ತಿಹೇಳಿದರೆ, ಸಿಪಿಐ(ಎಂ)ನ ಪ್ರಜಾಪ್ರಭುತ್ವ ಮತ್ತು ಅಲ್ಪಸಂಖ್ಯಾತ ಹಕ್ಕುಗಳ ರಕ್ಷಣೆಯನ್ನು ವಿಯೆಟ್ನಾಂನ ಕಮ್ಯುನಿಸ್ಟರು ಶ್ಲಾಘಿಸಿದರು. ಫ್ರೆಂಚ್ ಮತ್ತು ಪೋರ್ಚುಗೀಸ್ ಕಮ್ಯುನಿಸ್ಟ್ ಪಕ್ಷಗಳು ಸೇರಿದಂತೆ ಯುರೋಪಿಯನ್ ಕಾಮ್ರೇಡ್‌ಗಳು ಬಲಪಂಥೀಯ ಶಕ್ತಿಗಳ ಜಾಗತಿಕ ಏರಿಕೆಯತ್ತ ಗಮನ ಸೆಳೆದರು ಮತ್ತು ಭಾರತದ ಬಿಜೆಪಿ ಸರ್ಕಾರವನ್ನು ಈ ಅಪಾಯಕಾರಿ ಪ್ರವೃತ್ತಿಗೆ ಸ್ಪಷ್ಟವಾಗಿ ಜೋಡಿಸಿದರು.

ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಖಂಡಿಸಲು ಮಹಾಧಿವೇಶನ ಒಂದು ವೇದಿಕೆಯಾಗಿಯೂ ಕಾರ್ಯನಿರ್ವಹಿಸಿದೆ. ಪ್ಯಾಲೆಸ್ಟೈನ್ ನಿಂದ ದಕ್ಷಿಣ ಆಫ್ರಿಕಾವರೆಗಿನ ಕಮ್ಯೂನಿಸ್ಟ್ ಪಕ್ಷಗಳ ಸಂದೇಶಗಳು ಗಾಜಾದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ಖಂಡಿಸಿದವು. ಎಲ್ಲೆಡೆ ದಮನಿತ ಜನರ ಹೋರಾಟಗಳ ನಡುವೆ ಸಮಾನಾಂತರಗಳನ್ನು ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷವು ಚಿತ್ರಿಸಿತು. ಈ ಪ್ರದೇಶದಲ್ಲಿ ಧಾರ್ಮಿಕ ಉಗ್ರವಾದದ ಹರಡುವಿಕೆಯ ಬಗ್ಗೆ ವಿಶೇಷವಾಗಿ ಕಟುವಾದ ಎಚ್ಚರಿಕೆಗಳನ್ನು ಬಾಂಗ್ಲಾದೇಶದ ಕಮ್ಯುನಿಸ್ಟ್ ಪಕ್ಷಗಳು ನೀಡಿದವು. ಭಾರತದ ಜಾತ್ಯತೀತ ಅಡಿಪಾಯವನ್ನು ದುರ್ಬಲಗೊಳಿಸುವುದಕ್ಕಾಗಿ ಬಿಜೆಪಿಯ ನೀತಿಗಳನ್ನು ನೇರವಾಗಿ ಅದು ಟೀಕಿಸಿತು.

ಕೇರಳದ ಎಡ–ನೇತೃತ್ವದ ಸರ್ಕಾರವನ್ನು ಪ್ರಗತಿಪರ ಆಡಳಿತದ ಮಾದರಿಯಾಗಿ ಹಲವಾರು ಅಂತರರಾಷ್ಟ್ರೀಯ ಸಂದೇಶಗಳು ಎತ್ತಿ ತೋರಿಸಿದವು. ಸಾಮೂಹಿಕ ಚಳುವಳಿಗಳು ಮತ್ತು ಚುನಾವಣಾ ರಾಜಕೀಯದಲ್ಲಿ ಸಿಪಿಐ(ಎಂ)ನ ಕೆಲಸವು ಜಾಗತಿಕವಾಗಿ ಸಂಗಾತಿಗಳನ್ನು ↗

ಸಂಪಾದಕೀಯ

ಹುಬ್ಬಳ್ಳಿ ಎನ್ ಕೌಂಟರ್: ಅಗ್ಗದ ಜನಪ್ರಿಯತೆಯೋ? ಕಾನೂನು ಪಾಲನೆಯೋ?

ಏಪ್ರಿಲ್ 13, 2025 ರಂದು ಹುಬ್ಬಳ್ಳಿ ಮಹಾನಗರದಲ್ಲಿ ಐದು ವರ್ಷದ ಬಾಲಕಿಯ ಮೇಲೆ ನಡೆದಿದೆ ಎಂದು ವರದಿಯಾಗಿರುವ ಅತ್ಯಾಚಾರ ಮತ್ತು ಕೊಲೆಯ ಪ್ರಕರಣ ಎಲ್ಲರನ್ನೂ ಬೆಚ್ಚಿ ಬೀಳಿಸಿದೆ. ಇದೊಂದು ಅತ್ಯಂತ ಹೇಯ, ಅಮಾನವೀಯ, ಖಂಡನೀಯ ದುಷ್ಕೃತ್ಯವಾಗಿದೆ. ಇಂತಹ ಕೃತ್ಯ ಎಸಗಿದವರಿಗೆ ಎಷ್ಟೆಲ್ಲಾ ಶಿಕ್ಷೆಗಳನ್ನು ವಿಧಿಸಿದರೂ, ಕಾನೂನುಗಳನ್ನು ಬಲಗೊಳಿಸಿದರೂ ಮಹಿಳೆಯರು ಮತ್ತು ಮಕ್ಕಳ ಮೇಲೆ ಈ ರೀತಿಯ ಕೃತ್ಯಗಳು ಪುನರಾವರ್ತನೆ ಆಗುತ್ತಿರುವುದು ದಿಗ್ಭ್ರಮೆ ಹುಟ್ಟಿಸುತ್ತದೆ. ಮಾತ್ರವಲ್ಲ, ನಾಗರೀಕ ಎನಿಸಿಕೊಂಡ ನಮ್ಮ ಸಮಾಜ ವ್ಯವಸ್ಥೆ, ಅದರ ಮೌಲ್ಯಗಳು ತಲುಪಿರುವ ಅಧಃಪತನದ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಹುಬ್ಬಳ್ಳಿಯಲ್ಲಿ 2024 ರಲ್ಲಿ ಎರಡು ತಿಂಗಳ ಅಂತರದಲ್ಲಿಯೇ ವಿದ್ಯಾರ್ಥಿನಿ ನೇಹಾ ಹಿರೇಮಠ್, ಬಳಿಕ ಅಂಜಲಿ ಅಂಬಿಗೇರವರ ಮೇಲಿನ ದೌರ್ಜನ್ಯ ಮತ್ತು ಹತ್ಯೆಗಳು ನಡೆದಿದ್ದವು. ಈ ಕಹಿ ನೆನಪುಗಳು ಮಾಸುವ ಮೊದಲೇ ಬಾಲಕಿಯ ಹತ್ಯೆಯ ಘಟನೆ ನಡೆದಿದೆ. ಇಂತಹ ಸನ್ನಿವೇಶದಲ್ಲಿ ಸಾರ್ವಜನಿಕರ ಆತಂಕ, ಆಕ್ರೋಶ ಸಿಡಿಯುವುದು ಅತ್ಯಂತ ಸಹಜವಾಗಿದೆ. ಕೃತ್ಯವನ್ನು ಖಂಡಿಸಿ, ಕೃತ್ಯದ ಬಗ್ಗೆ ಆಳ ತನಿಖೆ ನಡೆಸಲು ಮತ್ತು ಕೃತ್ಯ ಎಸಗಿದವರ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಲು ನಾಗರೀಕರು, ಸಂಘ ಸಂಸ್ಥೆಗಳು ಪ್ರತಿಭಟಿಸುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ಆದರೆ ಎಲ್ಲಾ ಸಂದರ್ಭಗಳಲ್ಲಿಯೂ ಹೀಗೆಯೇ ವ್ಯಕ್ತವಾಗುವುದಿಲ್ಲ. ಪದೇ ಪದೇ ಇಂತಹ ಘಟನೆಗಳು ಯಾಕೆ ನಡೆಯುತ್ತಿವೆ? ಇದರ ಮೂಲ ಎಲ್ಲಿದೆ ಎಂಬ ಬಗ್ಗೆ ಆಳವಾಗಿ ಯೋಚಿಸುವ, ಪರಿಹಾರಕ್ಕಾಗಿ ಶ್ರಮಿಸುವ ಮನೋಭಾವ ಸಾಮಾನ್ಯವಾಗಿ ಇರುವುದಿಲ್ಲ. ಆಗ 'ಅಪರಾಧಿ' ಎಂದು ಆರೋಪಿಸಲಾದವರ ಮೇಲೆ ಕ್ರಮ ಜರುಗಿಸಿ 'ಕ್ಷಿಪ್ರ ನ್ಯಾಯದಾನ' ಮಾಡಲು ಒತ್ತಡ ಬರುತ್ತದೆ. ಬಹುತೇಕ ಬಾರಿ 'ಗುಂಡಿಕ್ಕಿ ಹತ್ಯೆ' ನಡೆಸಲು ಸಾರ್ವಜನಿಕರು, ಬಾಧಿತ ಕುಟುಂಬದವರು ಆಗ್ರಹಿಸುತ್ತಾರೆ. ಪೊಲೀಸರಿಗೆ ಹೀಗೆ ಮಾಡುವ ಅಪರಿಮಿತವಾದ ಅಧಿಕಾರ ಇದೆ ಎಂಬ ತಪ್ಪು ಕಲ್ಪನೆಯೂ ಜನರಲ್ಲಿ ಇರಬಹುದು. ಮುಖ್ಯವಾಗಿ, ನ್ಯಾಯದಾನದಲ್ಲಿನ ವಿಳಂಬ ಮತ್ತು ಅಪರಾಧಿ 'ಎಲ್ಲವನ್ನೂ ಬಳಸಿ' ತಪ್ಪಿಸಿಕೊಳ್ಳುತ್ತಾರೆ ಎಂಬ ಅಭಿಪ್ರಾಯ ಇದರ ಹಿಂದಿದೆ. ಆದರೆ ಇಂತಹ 'ಕ್ಷಿಪ್ರ ನ್ಯಾಯದಾನ'ವನ್ನು ಯಾರು ಮಾಡಬೇಕು ಎನ್ನುವಲ್ಲಿ ತನಿಖಾ ಏಜನ್ಸಿಯಾಗಿರುವ ಪೊಲೀಸ್ ಇಲಾಖೆ, ಕರ್ತವ್ಯದಲ್ಲಿರುವ ಪೊಲೀಸರೇ ಮಾಡಿ ಮುಗಿಸಬೇಕು ಎನ್ನುವ ನಿರೀಕ್ಷೆಗಳಿವೆ. ಅಂದರೆ ನ್ಯಾಯ ನಿರ್ಣಯಕ್ಕೆ ಸಹಾಯಕವಾಗುವ ಅಪರಾಧದ ಎಲ್ಲ ಮಗ್ಗಲುಗಳ ತನಿಖೆ ನಡೆಸಿ, ವಿಸ್ತೃತವಾಗಿ ಸಾಕ್ಷ್ಯಗಳನ್ನು ಸಂಗ್ರಹಿಸುವ ಪೊಲೀಸರೇ, ಅಪಾಯಕಾರಿಯಾದ ಸನ್ನಿವೇಶದಲ್ಲಿ ರಕ್ಷಣೆಗಾಗಿ ಅನಿವಾರ್ಯ ಬಳಸಬಹುದಾದ ಪಿಸ್ತೂಲ್, ಬಂಧೂಕುಗಳನ್ನು 'ಕ್ಷಿಪ್ರ ನ್ಯಾಯದಾನ' ಕ್ಕೆ ಬಳಸಬೇಕು ಎಂಬ ನಿರೀಕ್ಷೆ. ಈ ವಿಧಾನವನ್ನೇ ಅನುಸರಿಸಿದರೆ ಪರಿಸ್ಥಿತಿ ಏನಾದೀತು? ಎನ್ ಕೌಂಟರ್ ಹೆಸರಿನಲ್ಲಿ ನಡೆಯುವ ಇಂತಹ ಹತ್ಯೆಗಳ ಸತ್ಯಗಳೇನು, ಅನುಭವ ಏನು? ಪಿತೂರಿ, ಕುತಂತ್ರ, ದ್ವೇಷಗಳ ಆಧಾರದಲ್ಲಿ ನಿರಪರಾಧಿಗಳ ಮೇಲೆ ಆರೋಪ ಹೊರಿಸಿ ಅವರು ಬಲಿಯಾದರೇ ಹೇಗೆ? ಈ ಪ್ರಶ್ನೆ ಇದ್ದೇ ಇದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದಲ್ಲೂ, ಬೇರೆ ದೇಶಗಳಲ್ಲಿಯೂ ಅಸ್ತಿತ್ವದಲ್ಲಿರುವ ವಿಧಾನಗಳೆನು ಎಂಬುದೂ ಸಹ ಪರಿಶೀಲಿಸಬೇಕು.

ಹುಬ್ಬಳ್ಳಿಯ ಈ ಘಟನೆಯಲ್ಲಿ 'ನಾಗರೀಕರು' ಆರೋಪಿಯನ್ನು ಪತ್ತೆ ಹಚ್ಚಿ 'ಎನ್ ಕೌಂಟರ್' ಮಾಡುವಂತೆ ಆಗ್ರಹಿಸಿದ ಬೆನ್ನಲ್ಲೇ ಪೊಲೀಸರು ಘಟನೆ ನಡೆದ ಎರಡು ಗಂಟೆಯೊಳಗೆ ಶಂಕಿತ ಆರೋಪಿಯನ್ನು 'ಎನ್ ಕೌಂಟರ್'ನಲ್ಲಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ಪೊಲೀಸರ ಈ 'ಕ್ಷಿಪ್ರ ನ್ಯಾಯದಾನ', ಎನ್ ಕೌಂಟರ್ ಮಾಡಿದ ಮಹಿಳಾ ಪೊಲೀಸ್ ಅಧಿಕಾರಿಣಿ ಸಾರ್ವಜನಿಕರ ತತ್ ಕ್ಷಣದ ಪ್ರಶಂಸೆಗೂ ಪಾತ್ರವಾಗಿದ್ದಾರೆ. ಕರ್ನಾಟಕದ ಮಾನ್ಯ ಗೃಹ ಸಚಿವ ಜಿ.ಪರಮೇಶ್ವರ ರವರು ಪೊಲೀಸರ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ. ಈ ಕ್ಷಣದಲ್ಲಿ ಚೇತೋಹಾರಿಯಾಗಿ ಕಾಣುವ ಎನ್ ಕೌಂಟರ್ ಎಂಬ ಘಟನೆಯ ವಿಧಾನವೇ ಸೂಕ್ತ ಎನ್ನುವುದಾದರೆ ನಮ್ಮ ಕಾನೂನು ಪಾಲನೆ, ನ್ಯಾಯ ನಿರ್ಣಯದ ವಿಧಾನ, ನ್ಯಾಯ ಪದ್ಧತಿಗಳೇ ಬುಡಮೇಲು ಆದಂತೆ ಎಂಬ ಬಗ್ಗೆ ಯೋಚಿಸುತ್ತಿಲ್ಲ. ಹುಬ್ಬಳ್ಳಿಯಲ್ಲಿ ಕೊಲೆಗೀಡಾದ ಬಾಲಕಿಯ ಮೇಲೆ ಅತ್ಯಾಚಾರ ನಡೆದ ಬಗ್ಗೆ, ಕೊಲೆಗಾರನ ಬಗ್ಗೆ ಇನ್ನೂ ಖಚಿತ ಮಾಹಿತಿಗಳು, ಸಾಕ್ಷ್ಯಗಳ ಬಗ್ಗೆ ಖಾತ್ರಿ ಇಲ್ಲ. ನಡೆಸುವವರು ಯಾರೋ, ಬಲಿಯಾಗುವವರು ಯಾರೋ, ವಿಐಪಿ ಅತ್ಯಾಚಾರಿಗಳ ರಕ್ಷಣೆಗೆ ಇನ್ಯಾರೋ ಬಲಿ, ಧರ್ಮಸ್ಥಳದ ಸೌಜನ್ಯಳ ಪ್ರಕರಣದಲ್ಲಿನ ಶಂಕಾಸ್ಪದ ಆರೋಪಿತರನ್ನು ಏನು ಮಾಡಬೇಕು ಎಂಬಿತ್ಯಾದಿ ಪ್ರಶ್ನೆಗಳು ಮೆಲ್ಲನೇ ಸಾರ್ವಜನಿಕರ ನಡುವೆ ಏಳುತ್ತಿವೆ. ಈ ಪ್ರಕರಣದಲ್ಲೂ ಸರ್ಕಾರ ಉತ್ತರಿಸಬೇಕಾದ ಹಲವು ಪ್ರಶ್ನೆಗಳು ಇವೆ.

ಹುಬ್ಬಳ್ಳಿ ಪ್ರಕರಣದಲ್ಲಿ ಆರೋಪಿ ಬಡ ಕೂಲಿಕಾರ, ವಲಸೆ ಕಾರ್ಮಿಕ. ಅಂತಹುದೇ ಅಥವಾ ಅದಕ್ಕಿಂತಲೂ ಘೋರ ಪ್ರಕರಣಗಳಲ್ಲಿ ಭಾಗಿಯಾದ ಶ್ರೀಮಂತ ವಿ.ಐ.ಪಿ. ಆರೋಪಿಗಳ ಬಗ್ಗೆ ಸಿದ್ದರಾಮಯ್ಯನವರ ಸರ್ಕಾರ ಅದೇ ರೀತಿ ನಡೆದುಕೊಳ್ಳುತ್ತದೆಯೇ ಎಂಬ ಪ್ರಶ್ನೆಗೆ ಏನು ಉತ್ತರ ಇದೆ? ಇದೇ ಗೃಹ ಮಂತ್ರಿಗಳು ಕಾನೂನು ಪ್ರಕಾರ ನಡೆಯುತ್ತದೆ ಎಂದು ಹೇಳುವಾಗ ನ್ಯಾಯ ತಕ್ಕಡಿಯ ಮುಳ್ಳು ಎತ್ತವಾಲಿರುತ್ತದೆ ಎಂಬುದು ನೆನಪಾಗುವುದೇ?

ಅಪರಾಧಗಳನ್ನು ಪತ್ತೆ ಹಚ್ಚುವ, ಶಿಕ್ಷೆ ವಿಧಿಸುವ ತತ್ವ, ಪದ್ಧತಿಗಳು ಚಾರಿತ್ರಿಕವಾಗಿ ರೂಪಿತಗೊಂಡಿವೆ. "ತಪ್ಪಿತಸ್ಥರೆಂದು ಸಾಬೀತಾಗುವವರೆಗೂ ನಿರಪರಾಧಿ" ಎಂಬ ತತ್ವವು ಭಾರತ ಸೇರಿದಂತೆ ವಿಶ್ವಾದ್ಯಂತ ನ್ಯಾಯ ವ್ಯವಸ್ಥೆಗಳ ಮೂಲಾಧಾರವಾಗಿದೆ. ಆದ್ದರಿಂದಲೇ ತನಿಖೆ ನಡೆಸುವ ಪೊಲೀಸ್ ವ್ಯವಸ್ಥೆ, ಸಾಕ್ಷಿಗಳನ್ನು, ಪ್ರಕರಣದ ಎಲ್ಲ ಮಗ್ಗಲುಗಳನ್ನು ಪರಿಶೀಲಿಸಿ ನ್ಯಾಯ ನಿರ್ಣಯಿಸುವ ನ್ಯಾಯಾಂಗ ವ್ಯವಸ್ಥೆ ಇದೆ.

ವಿಚಾರಣೆಯಿಲ್ಲದೆ ಆರೋಪಿಯನ್ನು ಗುಂಡಿಕ್ಕಿ ಕೊಲ್ಲುವಂತಹ ಕಾನೂನುಬಾಹಿರ ಕ್ರಮಗಳನ್ನು ಕಾನೂನುಬದ್ಧವಾಗಿ ಅನುಮೋದಿಸಲಾಗುವುದಿಲ್ಲ. ಅದು ಕಾನೂನಿನ ನಿಯಮವನ್ನು ದುರ್ಬಲಗೊಳಿಸುತ್ತದೆ. ಕ್ಷಿಪ್ರ ನ್ಯಾಯಕ್ಕಾಗಿ ಆಗ್ರಹಿಸಲು ಕಾರಣವಾಗುವ ಸಾರ್ವಜನಿಕ ಆಕ್ರೋಶದ ನಿದರ್ಶನಗಳು ಇದ್ದರೂ, ತಪ್ಪು ಶಿಕ್ಷೆಯನ್ನು ತಡೆಗಟ್ಟಲು ಕಾನೂನು ಹಕ್ಕುಗಳ ರಕ್ಷಣೆಯೊಂದಿಗೆ ನ್ಯಾಯದ ಅಗತ್ಯವನ್ನು ಸಮತೋಲನಗೊಳಿಸುವುದು ಬಹಳ ಮುಖ್ಯ.

ಅತ್ಯಾಚಾರದ ಆರೋಪಿಗಳು ಎನ್ ಕೌಂಟರ್‌ಗಳಲ್ಲಿ ಪ್ರಾಣ ಕಳೆದುಕೊಳ್ಳುವ ಹಲವು ಘಟನೆಗಳಿವೆ. 2019 ರಲ್ಲಿ ಹೈದ್ರಾಬಾದ್‌ನ ವೈದ್ಯೆಯೊಬ್ಬರ ಮೇಲೆ ನಡೆದ ಅತ್ಯಾಚಾರ ಮತ್ತು ಕಗ್ಗೊಲೆಯ ಪ್ರಕರಣದಲ್ಲಿ ಆರೋಪಿತರಾದ ನಾಲ್ವರನ್ನು ಎನ್ ಕೌಂಟರ್ ಮಾಡಿ ಸಾಯಿಸಲಾಯ್ತು. ಆಗ ಮಾಧ್ಯಮಗಳು, ಜನರು ಕೊಂಡಾಡಿದರು. ಆದರೆ ಆ ಘಟನೆ ವಿಷಯದಲ್ಲಿ, ಮಾನವ ಹಕ್ಕುಗಳ ಉಲ್ಲಂಘನೆ ಆದ ಬಗ್ಗೆ ಮೊಕದ್ದಮೆ ಹೂಡಲ್ಪಟ್ಟು ವಿಚಾರಣೆ ನಡೆಸಲಾಗಿ, ಅವು ಯೋಜಿತ ಹತ್ಯೆಗಳು ಎಂದು ಸಾಬೀತಾದ ಹಿನ್ನೆಲೆಯಲ್ಲಿ ಸುಪ್ರಿಂಕೋರ್ಟ್ ಎನ್ ಕೌಂಟರ್ ನಲ್ಲಿ ಭಾಗಿಯಾದ ಪೊಲೀಸ್ ಅಧಿಕಾರಿಗಳು, ಪೇದೆಗಳನ್ನು ಜೈಲಿಗೆ ತಳ್ಳಿದೆ.

ಹುಬ್ಬಳ್ಳಿಯ ಎನ್ ಕೌಂಟರ್ ಪ್ರಕರಣದಲ್ಲೂ ಪೊಲೀಸರು ಹೇಳುವ ಹೇಳಿಕೆಯ 'ಕಥೆ' ಎಂದಿನಂತೆ ಆರೋಪಿಯೇ ಪೊಲೀಸ್ ಪಡೆಯ ಮೇಲೆ ಮಾರಣಾಂತಿಕ ಧಾಳಿ ಮಾಡಿದ್ದರಿಂದ ಆತ್ಮರಕ್ಷಣೆಗಾಗಿ ಗುಂಡು ಹಾರಿಸಬೇಕಾಯ್ತು ಎನ್ನುವುದು. ಇದನ್ನು ಮೇಲ್ನೋಟದಲ್ಲೇ ನಂಬುವುದು ಕಷ್ಟ. ಅಂತಹ ಗಂಭೀರ ಪ್ರಕರಣದ ಆರೋಪಿಯ ಕೈಗೆ ಕೈಕೋಳ ತೊಡಿಸಲಾಗಿತ್ತೇ? ಪೊಲೀಸ್ ಪೇದೆಯ ಎಡಗೈಗೆ ಇನ್ನೊಂದು ಬದಿ ಹಾಕಲಾಗಿತ್ತೇ? ಹಾಗಿದ್ದಲ್ಲಿ ತಪ್ಪಿಸಿಕೊಳ್ಳಲು ಸಾಧ್ಯವಾದರೂ ಎಲ್ಲಿತ್ತು? ಎಷ್ಟು ಅಂತರದಿಂದ ಗುಂಡು ಹಾರಿಸಲಾಗಿದೆ? ಗುಂಡು ಎಲ್ಲಿಂದ ಹೊಡೆಯಲಾಗಿದೆ, ಬೆನ್ನ ಹಿಂದಿನಿಂದಲೋ ಅಥವಾ ಮುಂದಿನಿಂದಲೋ, ಹೃದಯ ಭಾಗಕ್ಕೆ ಗುಂಡು ಹೊಡೆದ ಉದ್ದೇಶ ಏನು? ಮುಂತಾದ ತೀಕ್ಷ್ಣ ಪ್ರಶ್ನೆಗಳಿಗೆ ಗುಂಡು ಹೊಡೆದ ಇನ್ಸ್‌ಪೆಕ್ಟರ್ ಒಳಗೊಂಡು ಕರ್ತವ್ಯದಲ್ಲಿದ್ದ ಎಲ್ಲರೂ ಉತ್ತರ ಹೇಳಬೇಕಾಗುತ್ತದೆ. ನ್ಯಾಯಾಂಗದ ತನಿಖೆಯಲ್ಲಿ ಸಮರ್ಪಕವಾದ ಕಾರಣ, ಸಾಕ್ಷ್ಯ ಕೊಡಲಾಗದೇ ಹೋದರೆ 'ಲೇಡಿ ಸಿಂಗಂ' ಒಳಗೊಂಡು ಈ ಎಲ್ಲರೂ ಜೈಲು ಪಾಲಾಗಬೇಕಾಗುತ್ತದೆ. ಈಗ ಬೆನ್ನು ಚಪ್ಪರಿಸಿ ಚಪ್ಪಾಳೆ ತಟ್ಟಿದ ಯಾರೂ ಆಗ ಇರುವುದಿಲ್ಲ. ಒಂದು ವೇಳೆ ಗುರುತಿಸಿದ ಆರೋಪಿತ ವ್ಯಕ್ತಿಯು, ನಿರಪರಾಧಿ ಎಂದಾದರೆ, ಕೃತ್ಯವು ಬೇರೆಯವರಿಂದ ನಡೆದಿದೆ ಎಂದಾದರೆ ಶಿಕ್ಷೆಯೂ ತೀವ್ರ. ಅಷ್ಟರಲ್ಲಿ ಹೋದ ಜೀವ ಮರಳಲಾರದು.

ಈ ರಾಜ್ಯದಲ್ಲಿ ಕಳೆದ ಮುವ್ವತ್ತು ವರ್ಷಗಳ ಬಳಿಕ ನಡೆದ ಎನ್ ಕೌಂಟರ್. ಹುಸಿ ಪ್ರಚಾರ ಮತ್ತು ಅಗ್ಗದ ಜನಪ್ರಿಯತೆಗೆ ಮರುಳಾದಂತೆ ಸರ್ಕಾರ ವರ್ತಿಸುತ್ತಿದೆ. ಆದರೆ ನಾಗರೀಕ ನಡವಳಿಕೆ, ಸಂವಿಧಾನ, ಕಾನೂನು ಉಲ್ಲಂಘಿಸುವ ತಪ್ಪು ಹೆಜ್ಜೆ ಇರಿಸಿದೆ. ತನಿಖೆ ನಡೆದು, ಸೂಕ್ತ ಕಾನೂನಾತ್ಮಕ ಕ್ರಮ ವಹಿಸದೇ ಪೊಲೀಸರೇ ನ್ಯಾಯ ನಿರ್ಣಯ ಮಾಡಿ ನ್ಯಾಯಾಂಗೇತರ ಶಕ್ತಿಗಳೇ ಶಿಕ್ಷೆ ವಿಧಿಸುವುದೇ ನಿಯಮ ಎಂದಾದರೆ ಪರಿಸ್ಥಿತಿ ಏನಾದೀತು ಎಂಬ ಎಚ್ಚರ ಈ ಸರ್ಕಾರಕ್ಕೆ, ಸಮಾಜಕ್ಕೆ ಇರಬೇಕು. ಅಂತಹ ಅಧಿಕಾರಕ್ಕೆ ಅನುಮೋದನೆ ದೊರೆತರೆ ಮುಂದೆ ಯಾರ ಮೇಲೂ ಸೇಡಿನ ಆಧಾರದಲ್ಲಿ ದುರ್ಬಳಕೆ ಆಗುವುದಿಲ್ಲ ಎಂಬ ಗ್ಯಾರಂಟಿ ಏನು? ಟಾಡಾ–ಭಯೋತ್ಪಾದನೆಯಂತಹ ಆರೋಪಿತರು ನ್ಯಾಯಾಂಗ ವಿಚಾರಣೆಯಲ್ಲಿ ನಿರಪರಾಧಿಗಳೆಂದು ಖುಲಾಸೆ ಆದ ಹಲವಾರು ನಿದರ್ಶನಗಳಿವೆ. ಪ್ರಭುತ್ವ ನಡೆಸುವ ಸೇಡಿನ ಕೃತ್ಯಗಳಿಗೆ ಎಂದೂ ಅವಕಾಶ ಇರಬಾರದು. ದಂಡ ಹಿಡಿದವನ ತೀರ್ಮಾನವೇ ನ್ಯಾಯ ಎನ್ನುವಂತಾಗಬಾರದು. ಹಾಗಾದರೆ ಇಲ್ಲಿ ಜಾರಿಗೆ ಬರುವುದು ಸಂವಿಧಾನಾತ್ಮಕ ಕಾನೂನು ನ್ಯಾಯ ನಿರ್ಣಯವಲ್ಲ. ಬದಲಾಗಿ ಅರಣ್ಯ ನ್ಯಾಯ ಅಥವಾ ಬುಲ್ಡೋಜ್ ನ್ಯಾಯ. ನಮ್ಮ ಸಂವಿಧಾನ, ಕಾನೂನು ಪಾಲನೆ ಮುಕ್ಕಾಗದಂತೆ ಜಾಗೃತಿ ವಹಿಸಬೇಕಾದ ಹೊಣೆ ಸರ್ಕಾರದ್ದು. ಈ ಪ್ರಕರಣದಲ್ಲಿ ಸರ್ಕಾರ ಮುಗ್ಗರಿಸಿದೆ. ಕೆಟ್ಟ ಸಂಪ್ರದಾಯಕ್ಕೆ ಅಡಿ ಇಟ್ಟಿದೆ.

ಹೇಗೆ ಪ್ರೇರೇಪಿಸುತ್ತದೆ ಎಂಬುದನ್ನು ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷವು ಗಮನಿಸಿತು. ಕೇರಳ ಮತ್ತು ವಿಯೆಟ್ನಾಂ ನಡುವಿನ ಸಂಬಂಧವನ್ನು ಬಲಪಡಿಸುವ ಅಗತ್ಯವನ್ನು ವಿಯೆಟ್ನಾಂ ಕಮ್ಯುನಿಸ್ಟ್ ಪಕ್ಷ ಒತ್ತಿ ಹೇಳಿದೆ. ತಮ್ಮ ಪಕ್ಷವು ಪ್ರಮುಖವಾಗಿ ಭಾಗವಹಿಸಿದ್ದ ಕೇರಳ ರಾಜ್ಯದ ಸರ್ಕಾರವು ಬಡತನದ ವಿರುದ್ಧದ ಹೋರಾಟದಲ್ಲಿ, ಆರೋಗ್ಯ ಮತ್ತು ಶಿಕ್ಷಣದಲ್ಲಿನ ಸುಧಾರಣೆಗಳಲ್ಲಿ ಪರ್ಯಾಯಗಳನ್ನು ತೋರಿಸುತ್ತಿದೆ ಎಂದು ಜರ್ಮನ್ ಕಮ್ಯುನಿಸ್ಟ್ ಪಕ್ಷ ಹೇಳಿದೆ. ಸಮಗ್ರ ಅಭಿವೃದ್ಧಿಯ ಪರ್ಯಾಯ ಪಥವನ್ನು ಪ್ರದರ್ಶಿಸಿದ್ದಕ್ಕಾಗಿ ಕೇರಳದ ಎಲ್‌ಡಿಎಫ್ ಸರ್ಕಾರವನ್ನು ಐರ್ಲೆಂಡ್ ಕಮ್ಯುನಿಸ್ಟ್ ಪಕ್ಷ ಶ್ಲಾಘಿಸಿತು. ಭಾರತೀಯ ಮತ್ತು ಅಂತರರಾಷ್ಟ್ರೀಯ ಕಮ್ಯುನಿಸಂ ಎರಡಕ್ಕೂ ಸಿಪಿಐ(ಎಂ) ನಾಯಕ ದಿವಂಗತ ಸೀತಾರಾಮ್ ಯೆಚೂರಿ ಅವರ ಕೊಡುಗೆಗಳನ್ನು ಸ್ಮರಿಸುತ್ತಾ ಯೆಚೂರಿಯವರಿಗೆ ಅನೇಕ ಗೌರವಗಳು ಹರಿದುಬಂದವು.

ಹೊಸ ರಾಜಕೀಯ ನಿರ್ಣಯವನ್ನು ಅಳವಡಿಸಿಕೊಳ್ಳುವುದು ಮತ್ತು ಹೊಸ ನಾಯಕತ್ವವನ್ನು ಆಯ್ಕೆ ಮಾಡುವುದನ್ನು ಒಳಗೊಂಡ ಮಹಾಧಿವೇಶನದ ಕಾರ್ಯಸೂಚಿಯ ಮೂಲಕ ಪ್ರತಿನಿಧಿಗಳು ಕೆಲಸ ಮಾಡುತ್ತಿರುವಾಗ, ಅಗಾಧವಾದ ಅಂತರರಾಷ್ಟ್ರೀಯ ಬೆಂಬಲವು ಸಿಪಿಐ(ಎಂ)ನ ನಿರಂತರ ಪ್ರಸ್ತುತತೆಯನ್ನು ಒತ್ತಿಹೇಳುತ್ತದೆ. ನವ ಉದಾರವಾದವನ್ನು ವಿರೋಧಿಸಲು ವೆನೆಜುವೆಲಾದ ಕಮ್ಯುನಿಸ್ಟ್ ಪಕ್ಷದ ಕರೆಯಿಂದ ಹಿಡಿದು, ಟ್ರಂಪ್‌ರ ಮೆಗಾ ಚಲನೆ (MAGA movement) ಮತ್ತು ಮೋದಿಯವರ ಬಿಜೆಪಿ ನಡುವಿನ ಅಪಾಯಕಾರಿ ಮೈತ್ರಿಯ ಬಗ್ಗೆ ಯುಎಸ್‌ಎ ಕಮ್ಯುನಿಸ್ಟ್ ಪಕ್ಷದ ಎಚ್ಚರಿಕೆಯವರೆಗೆ ಬಂದ ಸಂದೇಶಗಳು ಒಟ್ಟಾಗಿ ಹೆಚ್ಚುತ್ತಿರುವ ಸರ್ವಾಧಿಕಾರದ ವಿರುದ್ಧ ಏಕತೆಯನ್ನು ಬಯಸುವ ಜಾಗತಿಕ ಎಡ ಚಳುವಳಿಯ ಚಿತ್ರಣವನ್ನು ಚಿತ್ರಿಸುತ್ತವೆ.

24ನೇ ಮಹಾಧಿವೇಶನವು ಒಂದು ರಾಷ್ಟ್ರೀಯ ಘಟನೆಯಾಗಿ ಮಾತ್ರವಲ್ಲ, ಇದು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಒಗ್ಗಟ್ಟಿನ ಕ್ಷಣವಾಗಿದೆ, ಸಿಪಿಐ(ಎಂ) ಭಾರತದ ಕಾರ್ಮಿಕ ವರ್ಗ ಮತ್ತು ವಿಶ್ವಾದ್ಯಂತದ ಪ್ರಗತಿಪರ ಶಕ್ತಿಗಳ ನಡುವಿನ ನಿರ್ಣಾಯಕ ಕೊಂಡಿಯಾಗಿ ಸ್ಥಾನ ಪಡೆದಿದೆ.



‘ಸೌಜನ್ಯ’ ಪ್ರಕರಣ: ನ್ಯಾಯ ಇನ್ನೂ ಮರೀಚಿಕೆ.. ‘ಧರ್ಮಸ್ಥಳ’ದಲ್ಲಿ ಅತ್ಯಾಚಾರ-ಅನ್ಯಾಯ-ಕಗ್ಗೊಲೆಗಳ ಸರಣಿಗೆ ಕೊನೆಯೆಲ್ಲಿ?



ನ್ಯಾಯಕ್ಕಾಗಿ ಕೂಗು–ಕ್ರೂರ ಸಾಮಾಜಿಕ ವ್ಯವಸ್ಥೆಯಲ್ಲಿ ಭೀಕರ ದೌರ್ಜನ್ಯಕ್ಕೆ ತುತ್ತಾದ ಮುಗ್ಧೆ ಸೌಜನ್ಯ.

ಹನ್ನೆರಡು ವರ್ಷಗಳು ಉರುಳಿ ಹೋದರೂ ಮುಗ್ಧ ವಿದ್ಯಾರ್ಥಿನಿ ಸೌಜನ್ಯ–ಅತ್ಯಾಚಾರ–ಕೊಲೆ ಪ್ರಕರಣದಲ್ಲಿ ನಿಜವಾದ ಅಪರಾಧಿಗಳನ್ನು ಪತ್ತೆ ಮಾಡಲಿಲ್ಲ. ಸಂತೋಷ ರಾವ್ ನಿರಪರಾಧಿ ಮಾತ್ರವಲ್ಲ, ಪ್ರಾಥಮಿಕ ಸಾಕ್ಷ್ಯಗಳೂ ಇಲ್ಲದೇ ಪ್ರಕರಣದಲ್ಲಿ ಆತನನ್ನು ಸಿಲುಕಿಸಿ, ತನಿಖೆಯನ್ನು ಹಳ್ಳ ಹಿಡಿಸಲಾಗಿದೆ, ಸಾಕ್ಷ್ಯಗಳನ್ನು ಸಂರಕ್ಷಿಸದೇ ನಾಶ ಮಾಡಲಾಗಿದೆ ಎಂದು ಸಿಬಿಐ ನ್ಯಾಯಾಲಯವೇ ತನಿಖೆ ಕುರಿತು ಕಟುವಾಗಿ ಟೀಕಿಸಿದೆ. ಇಷ್ಟಾದರೂ ಇಂದಿಗೂ ನ್ಯಾಯ ಮರೀಚಿಕೆಯಾಗಿದೆ. ಏನು ನಡೆಯುತ್ತಿದೆ ಅಲ್ಲಿ. ಆ ಪ್ರಕರಣ ಮತ್ತು ಅಲ್ಲಿ ಘಟಿಸಿದ ಒಟ್ಟು ವಿದ್ಯಮಾನಗಳ ಬಗ್ಗೆ ವಿವರಣಾತ್ಮಕ ನೋಟ ಈ ಪುಟಗಳಲ್ಲಿ. ನ್ಯಾಯಾಲಯದ ನಿರ್ದೇಶನಗಳನ್ನು ಲಕ್ಷ್ಯದಲ್ಲಿರಿಸಿ.

ಆರ್. ರಾಮಕೃಷ್ಣ

ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕಿನಲ್ಲಿರುವ ‘ಧರ್ಮಸ್ಥಳ’ ಎಂಬುದು ರಾಜ್ಯದ ದೊಡ್ಡ ಧಾರ್ಮಿಕ ಕೇಂದ್ರ. ಮುಗ್ಧ ಭಕ್ತರ ಪಾಲಿನ ‘ಪುಣ್ಯಕ್ಷೇತ್ರ’–ಧರ್ಮಸ್ಥಳದ ಮಹಿಮೆ, ಸತ್ಯವಂತಿಕೆಗಳ ವಿಚಾರಗಳೂ ‘ಜನಜನಿತ’. ಧರ್ಮಸ್ಥಳದಲ್ಲಿ ಸುಳ್ಳು ಹೇಳಬಾರದು, ಕಳ್ಳತನ–ಅನ್ಯಾಯ, ಯಾವುದೇ ಪಾಪಕೃತ್ಯ ಮಾಡಬಾರದು, ಮಾಡಿದರೆ, ಅವರಿಗೆ ಅಲ್ಲಿಯೇ ಕ್ರೂರ ಶಿಕ್ಷೆ ಕಾದಿರುತ್ತದೆ ಎಂಬುದು ಅದರಲ್ಲಿ ಒಂದು ನಂಬಿಕೆ.

ಇಂತಹ ‘ದಂತಕತೆ’ಗಳಿಗೆ ತದ್ವಿರುದ್ಧವಾಗಿ ಕಳೆದ ನಾಲ್ಕಾರು ದಶಕಗಳಲ್ಲಿ ಧರ್ಮಸ್ಥಳದಲ್ಲಿ ವರದಿಯಾಗಿರುವ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರಗಳು, ಹೋರಾಟಗಾರರ ಸಜೀವ ದಹನ, ಅಮಾಯಕರ ಕ್ರೂರ ಕೊಲೆಗಳು, ನೂರಾರು ಆತ್ಮಹತ್ಯೆಗಳು ಮತ್ತು ‘ಆತ್ಮಹತ್ಯೆ’ ಎಂಬ ಹೆಸರಿನ ಅಸಹಜ ಸಾವುಗಳು ಇಲ್ಲಿಯ ಕುರಿತು ಬೇರೆಯದೇ ಆದ ‘ಸತ್ಯ’ವನ್ನು ಸಾರುತ್ತಿವೆ. ವಿವಿಧ ಮೂಲಗಳಲ್ಲಿರುವ ಸುದ್ದಿಗಳು, ಅಭಿಪ್ರಾಯಗಳು ಹಾಗೂ ಇತರೆ ಸಂಗತಿಗಳನ್ನು ಆಧರಿಸಿ ಸ್ಥೂಲವಾಗಿ ನೀಡಲಾಗುತ್ತಿದೆ.

‘ಸೌಜನ್ಯ’ ಪ್ರಕರಣ: ನ್ಯಾಯ ಇನ್ನೂ ಮರೀಚಿಕೆ

2012 ರಲ್ಲಿ ಧರ್ಮಸ್ಥಳ ಸಮೀಪದ ಉಜಿರೆಯ ಎಸ್.ಡಿ.ಎಂ. ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದ 17 ವರ್ಷದ ಸೌಜನ್ಯ ಎಂಬ ಮುಗ್ಧ ಯುವತಿಯ ಮೇಲೆ ಅಮಾನುಷ ಅತ್ಯಾಚಾರ ಹಾಗೂ ಭೀಕರ ಕೊಲೆ ನಡೆಯಿತು. ಈ ಸಂಬಂಧ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಎಸ್.ಎಫ್.ಐ., ಡಿ.ವೈ.ಎಫ್.ಐ. ಕರ್ನಾಟಕ ಪ್ರಾಂತ ರೈತ ಸಂಘ, ಸಿಪಿಐ(ಎಂ) ಸೇರಿದಂತೆ ಹಲವು ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಸುದೀರ್ಘ ಹೋರಾಟವೂ ನಡೆಯಿತು. ಇತ್ತೀಚೆಗೆ ಹೊರಬಂದ ವಿಡಿಯೋ ಒಂದು ಮತ್ತೆ ಈ ವಿಷಯಗಳ ಕುರಿತು ಚರ್ಚೆ ಹುಟ್ಟುಹಾಕಿದೆ.

ಈ ಧರ್ಮಸ್ಥಳದ ವಿಷಯದಲ್ಲಿ ಒಬ್ಬ ಪ್ರಭಾವಿ ವ್ಯಕ್ತಿಯು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ, ಈ ಪ್ರಕರಣದ ವಿಷಯವಾಗಿ ಮಾಧ್ಯಮಗಳಲ್ಲಿ ತಮ್ಮ ಬಗ್ಗೆ ‘ಮಾನಹಾನಿಕರ’ ಮಾತುಗಳನ್ನು ಆಡದಂತೆ, ತಮ್ಮ ಹೆಸರನ್ನು ಉಲ್ಲೇಖಿಸದಂತೆ 2023 ರಲ್ಲಿ ಆದೇಶವನ್ನು ಪಡೆದುಕೊಂಡಿದ್ದಾರೆ.

ವ್ಯವಸ್ಥಿತ ಸಾಕ್ಷ್ಯ ನಾಶ–ಮುಗ್ಧರಿಗೆ ‘ಪಾಶ’?

ಕಾಲೇಜಿನಿಂದ ಮರಳಿ ಮನೆ ಸಮೀಪಿಸುತ್ತಿದ್ದ ಸೌಜನ್ಯ ಕಾಣೆಯಾಗಿದ್ದು 9, ಅಕ್ಟೋಬರ್ 2012 ರ ಸಂಜೆ. ಮರುದಿನ ಸೌಜನ್ಯಳ ಮೃತ ದೇಹ ಸಿಗುತ್ತದೆ. ಮೇಲ್ನೋಟಕ್ಕೇ ಕ್ರೂರವಾಗಿ ಅತ್ಯಾಚಾರ–ಹಲ್ಲೆ ಮಾಡಿ ಕೊಂದಿರುವುದು ಗೊತ್ತಾಗುತ್ತದೆ. ಹಿಂದೆಯೇ ತೀವ್ರ ಜನಾಕ್ರೋಶವೂ ವ್ಯಕ್ತವಾಗುತ್ತದೆ. ಅದಾದ ಮರುದಿನವೇ ಸ್ಥಳೀಯ ಬಾಹುಬಲಿ ಬೆಟ್ಟದಲ್ಲಿದ್ದ ‘ಸಂತೋಷ ರಾವ್’ ಎಂಬ ಒಬ್ಬ ಮಾನಸಿಕ ಖಿನ್ನತೆಯಿದ್ದ ಒಬ್ಬ ವ್ಯಕ್ತಿಯನ್ನು ‘ಐವರು ಸ್ಥಳೀಯರು’ ಹಿಡಿದು ಪೋಲಿಸರಿಗೆ ಒಪ್ಪಿಸುತ್ತಾರೆ.

ಸಂತೋಷ ರಾವ್ ನಿಜವಾದ ಅಪರಾಧಿಯಲ್ಲ, ಆತನನ್ನು ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ, ಧರ್ಮಸ್ಥಳ ಟ್ರಸ್ಟ್‌ನ ಉದ್ಯೋಗಿಗಳ ಮಕ್ಕಳೂ ಹಾಗೂ ಪ್ರಭಾವಿಯ ಸಹೋದರನ ಮಗನ ಸ್ನೇಹಿತರೂ ಆದ ಮಲಿಕ್ ಜೈನ್, ಉದಯ್ ಜೈನ್ ಮತ್ತು ಧೀರಜ್ ಜೈನ್ ಎಂಬ ಮೂವರು(‘ಐವರು ಸ್ಥಳೀಯ’ರಲ್ಲಿ ಇವರು ಮೂವರು) ಈ ಕೃತ್ಯಕ್ಕೆ ಹೊಣೆ, ಅವರ ವಿಚಾರಣೆ ಆಗಬೇಕು ಎಂದು ಸೌಜನ್ಯಳ ತಂದೆ, ತಾಯಿಯರು ಮೊದಲಿನಿಂದಲೂ ಹೇಳುತ್ತಲೇ ಬಂದರು. ಸೌಜನ್ಯಳ ತಾಯಿ ಕುಸುಮಾವತಿ ಹೇಳಿದ ಮತ್ತೊಂದು ವಿಚಾರವೂ ಗಂಭೀರ. ವಿಚಾರಣೆಗೆಂದು ಮನೆಗೆ ಬಂದ ಪೋಲಿಸರು ಸೌಜನ್ಯಳ ಒಳ ಉಡುಪನ್ನು ತೆಗೆದುಕೊಂಡು ಹೋದರು. ಮತ್ತು ಅದನ್ನು ಅತ್ಯಾಚಾರ ಪ್ರಕರಣದಲ್ಲಿ ಸಾಕ್ಷಿಯಾಗಿ ತೋರಿಸಿದ್ದಾರೆ! ಆದರೆ ಅತ್ಯಾಚಾರ–ಕೊಲೆಯಾಗಿ ಬಿದ್ದಿದ್ದ ಸೌಜನ್ಯಳ ಮೈಮೇಲೆ ಒಳ ಉಡುಪು ಇರಲೇ ಇಲ್ಲ.!!

ಈ ಹಂತದಲ್ಲಿ ರಾಜ್ಯದಲ್ಲಿ ಬಿಜೆಪಿ ಸರಕಾರವಿತ್ತು. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರವಿತ್ತು. ಪ್ರಕರಣದ ಕುರಿತ ದಕ್ಷವಾದ ತನಿಖೆ ನಡೆಯುತ್ತಿಲ್ಲ, ನ್ಯಾಯ ಸಿಗುವ ಲಕ್ಷಣ ಇಲ್ಲ ಎಂಬುದು ನಿಚ್ಚಳವಾದಾಗ ಜನಪರ ಚಳುವಳಿಗಳು ಸಿ.ಬಿ.ಐ. ತನಿಖೆಗೆ ಒತ್ತಾಯ ಮುಂದಿಟ್ಟವು. ನಂತರದ ಬದಲಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಪ್ರಕರಣವನ್ನು ಸಿ.ಬಿ.ಐ.ಗೆ ಒಪ್ಪಿಸಿತು. ನಂತರ 2014 ರಲ್ಲಿ ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಸರಕಾರ ಅಧಿಕಾರಕ್ಕೆ ಬಂದಿತು. ಸಿ.ಬಿ.ಐ. ತನಿಖೆಯಲ್ಲಿಯೂ ಆರಂಭದಲ್ಲಿ ವಿಳಂಬ ಪ್ರವೃತ್ತಿಯೇ ಕಂಡು ಬಂದಿತು. ನ್ಯಾಯಾಲಯ ಮತ್ತು ಸಿಬಿಐ ತನಿಖೆಗಳಲ್ಲಿ ಏನೇ ಕೊರತೆಗಳಿದ್ದರೂ ಒಂದು ವಿಷಯ ನಿಸ್ಸಂಶಯವಾಗಿ ಸಾಬೀತಾಯಿತು. ಅದೇನೆಂದರೆ ಸಂತೋಷರಾವ್ ಈ ಪ್ರಕರಣದ ಅಪರಾಧಿಯಲ್ಲ. ಆತ ನಿರಪರಾಧಿ. ಹೀಗಾಗಿ ನಿಜವಾದ ಅಪರಾಧಿಗಳು ಯಾರು ಎಂಬ ಪ್ರಶ್ನೆ ಮೂಡಿತು. ಈ ಪ್ರಕರಣದ ಸ್ವರೂಪವನ್ನು ನೋಡಿದಾಗ ಒಬ್ಬ ವ್ಯಕ್ತಿಗೆ ಬದಲಾಗಿ ಒಂದು ತಂಡ ಈ ಕೃತ್ಯವನ್ನು ಎಸಗಿದಂತಿದೆ ಎಂದು ನ್ಯಾಯಾಲಯಗಳೂ ಗುರುತಿಸಿದವು.

ಅಘಾತಕಾರಿ ಸಾಮ್ಯತೆಗಳು!!

ಸೌಜನ್ಯ ಪ್ರಕರಣದಲ್ಲೂ, ಧರ್ಮಸ್ಥಳದಲ್ಲಿ ನಡೆಯುತ್ತಾ ಬಂದಿರುವ ಹಲವು ಘೋರಾತಿಘೋರ ಪ್ರಕರಣಗಳಲ್ಲೂ ಹಲವು ಅನುಮಾನಗಳು, ಅಘಾತಕಾರಿ ಸಾಮ್ಯತೆಗಳು ಈಗ ದೊರೆತಿರುವ ಮಾಹಿತಿಗಳಂತೆ ಕಾಣುತ್ತವೆ. ಅವೇನೆಂದರೆ..

1. ಪೊಲೀಸರು ಅಪರಾಧಿಗಳನ್ನು ಹಿಡಿಯಲು ತುರ್ತು ಕ್ರಮವಹಿಸುವುದಿಲ್ಲ. ಎಷ್ಟೋ ಪ್ರಕರಣಗಳಲ್ಲಿ ಹಲವಾರು ದಿನ ದೂರನ್ನೇ ದಾಖಲಿಸಿಕೊಳ್ಳುವುದಿಲ್ಲ.
2. ಅಪರಾಧ ಕೃತ್ಯಗಳ ಸಂಬಂಧ ಸಾಕ್ಷ್ಯ ಸಂಗ್ರಹ ಮಾಡಿ, ಸರಿಯಾದ ತನಿಖೆ ಮಾಡುವುದನ್ನು ಬೇಕೆಂದೇ ತಪ್ಪಿಸಲಾಗುತ್ತದೆ. ಅಥವಾ ಅನಗತ್ಯ ವಿಳಂಬ ಮಾಡಲಾಗುತ್ತದೆ.
3. ಎಂತಹ ಘೋರ ಪ್ರಕರಣಗಳಾದರೂ ಅಪರಾಧಿಗಳು ಪೋಲಿಸರ ಕೈಗೆ ಸಿಗುವುದಿಲ್ಲ. ಬದಲಿಗೆ ಹಲವು ಪ್ರಕರಣಗಳಲ್ಲಿ ಸಂತ್ರಸ್ತರಿಗೆ ನೇರವಾಗಿ ಸಂಬಂಧವಿಲ್ಲದ, ಅಂದರೆ ಅವರ ಸ್ನೇಹಿತರೋ, ಬಂಧುಗಳೋ ಅಲ್ಲದ, ಕೆಲವು ‘ಸ್ಥಳೀಯರು’ ಸೇರಿಕೊಂಡು ಯಾರನ್ನೋ ‘ಅಪರಾಧಿ’ಗಳು ಎಂದು ಹಿಡಿದು ತಂದು ಕೊಡುತ್ತಾರೆ. ಇಂತವರ ಮೇಲೆ, ಯಾವ ಕನಿಷ್ಟ ಸಾಕ್ಷ್ಯಾಧಾರಗಳ ಬಲವೂ ಇಲ್ಲದೇ, ಪ್ರಾಥಮಿಕ ಪರಿಶೀಲನೆಗಳನ್ನೂ ನಡೆಸದೇ ಅಪರಾಧಗಳ ಆರೋಪ ಹೊರಿಸಿ ಜೈಲಿಗಟ್ಟಲಾಗುತ್ತದೆ.
4. ಹಲವು ಪ್ರಕರಣಗಳಲ್ಲಿ ದೂರು ಕೊಡಲು ಹೋದ ಸಂತ್ರಸ್ತರನ್ನೇ ಆರೋಪಿಗಳನ್ನಾಗಿ ಮಾಡಿ ಆರೋಪಗಳನ್ನು ಒಪ್ಪಿಕೊಳ್ಳುವಂತೆ

ಪುಟ 7 ಕ್ಕೆ

ಇತಿಹಾಸದ ಪುಟಗಳಲ್ಲಿ ಕೆಲವು ಕರಾಳ ಅಧ್ಯಾಯಗಳು

ಕೇವಲ ಸೌಜನ್ಯ ಪ್ರಕರಣ ಮಾತ್ರವಲ್ಲ. 1960 ರ ದಶಕದ ಭೂಮಿ ಹೋರಾಟದ ನಾಯಕ ಕಾಂ.ಕೆ.ವಿ.ರಾವ್‌ರ ಸಜೀವ ದಹನದ ಯತ್ನ, 1980 ದಶಕದಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಪಂಚಾಯತ್ ಚುನಾವಣೆಯಲ್ಲಿ ನಿಂತಿದ್ದಕ್ಕಾಗಿ ಕಾಂ. ದೇವಾನಂದರ ಮಗಳು ಪದ್ಮಲತ ಅಪಹರಣ–ಅತ್ಯಾಚಾರ–ಕೊಲೆ, ಬಡ್ತಿಯಲ್ಲಿ ಆದ ಅನ್ಯಾಯ ಪ್ರಶ್ನಿಸಿದ ಶಿಕ್ಷಕಿ ವೇದವಲ್ಲಿಯ ಮೇಲೆ ಅತ್ಯಾಚಾರ–ಸಜೀವ ದಹನ ಮುಂತಾದ ಯಾವ ಹಳೆಯ ಪ್ರಕರಣಗಳಲ್ಲೂ ಅಪರಾಧಿಗಳು ಸಿಕ್ಕಿಲ್ಲ. ಶಿಕ್ಷೆಯಾಗಿಲ್ಲ. ಇದೇ ‘ಪರಂಪರೆ’ಯೇ ಈಗಲೂ ಮುಂದುವರಿಯುತ್ತಿದ್ದು ಈ ಅನ್ಯಾಯವನ್ನು ಪ್ರತಿಭಟಿಸಬೇಕಿದೆ.

(ವಿವರಣಾತ್ಮ ನೋಟ 4,5,6 ನೇ ಪುಟಗಳಲ್ಲಿ.)



ದುರಂತ ಕತೆಯಾದಳು ಸೌಜನ್ಯ... ವೇದವಲ್ಲಿ, ಪದ್ಮಾವತಿ, ಸಾಲಿನಲ್ಲಿ

ಸೌಜನ್ಯ ಸಾವಿನ ಕುರಿತು ತನಿಖೆಯು ಸಿಬಿಐಗೆ ಹಸ್ತಾಂತರ ಆದ ಮೇಲೆ ಈ ಸೌಜನ್ಯ ಪ್ರಕರಣದಲ್ಲಿ ಸಾಕ್ಷಿಯಾಗಬಹುದಾಗಿದ್ದ, ಸೌಜನ್ಯಳನ್ನು ಆಕೆ ನಾಪತ್ತೆಯಾದ ದಿನ ನೋಡಿದ್ದ, ಮಾತನಾಡಿಸಿದ್ದ, ಅವಳೊಂದಿಗೆ ಕಾಣಿಸಿಕೊಂಡಿದ್ದ ಮತ್ತು ಈ ಪ್ರಕರಣದಲ್ಲಿ ಆರೋಪಿಗಳಾಗಿ ತನಿಖೆ ಎದುರಿಸಬೇಕಾಗಿದ್ದ ಹಲವರು ನಾನಾ ರೀತಿಯಲ್ಲಿ ಪ್ರಾಣಗಳನ್ನು ಕಳೆದುಕೊಂಡಿರುವ ಘಟನೆಗಳ ವಿವರಗಳನ್ನು ನೋಡಿದರೆ ಅಘಾತವಾಗುತ್ತದೆ.

ಸಾಕ್ಷಿಗಳು–ಪ್ರತಿಭಟನಾಕಾರರಿಗೆ 'ಅಪಘಾತ' ಭಾಗ್ಯ? ಕಟಕಟೆಯಲ್ಲಿ ನಿಲ್ಲಬೇಕಿದ್ದವರು ಮಸಣಕ್ಕೆ!!

1. ಸೌಜನ್ಯಗಳ ಹಿಂದೆ ವ್ಯಕ್ತಿಯೊಬ್ಬ ನಡೆದು ಹೋಗುತ್ತಿದ್ದುದನ್ನು ನೋಡಿದ್ದ 'ಹರೀಶ್ ಮಡಿವಾಳ' ಎಂಬ ವ್ಯಕ್ತಿಯು, ತಾನು ಮನೆಗೆ ಹೋಗುವಾಗ ಕಾರು ಗುದ್ದಿ ದಾರಿಯಲ್ಲಿ ಸಾಯುತ್ತಾನೆ. ಈ ಬಗೆಗೆ 'ಮೂರನೇ ವ್ಯಕ್ತಿ' ಪೋಲಿಸರಿಗೆ ದೂರು ಕೊಡುತ್ತಾನೆ. ಇಲ್ಲಿ ಕಾರು ಗುದ್ದಿದ ವ್ಯಕ್ತಿ ಇಲ್ಲಿಯವರೆಗೂ ಪೋಲಿಸರಿಗೆ ಸಿಕ್ಕಿಯೇ ಇಲ್ಲ.
2. ಮೊದಲ ಹಂತದ ತನಿಖೆಯಲ್ಲಿ ಸಂತೋಷ ರಾವ್ ನಿಜವಾದ ಅಪರಾಧಿ ಅಲ್ಲ ಎಂಬ ಅಂಶ ಪ್ರಬಲವಾಗಿ ಕಂಡು ಬಂದು, ನಂತರ ಸಿಬಿಐ ತನಿಖೆ ಆರಂಭವಾದ ಮೇಲೆ 'ಐವರು ಸ್ಥಳೀಯ'ರ ತಂಡದಲ್ಲಿದ್ದ ಒಬ್ಬನಾದ 'ರವಿ ಪೂಜಾರಿ' 'ಆತ್ಮಹತ್ಯೆ' ಮಾಡಿಕೊಂಡಿದ್ದಾನೆ.
3. ಸೌಜನ್ಯಳನ್ನು 'ಧಣಿ'ಗಳ ಕಡೆಯ ಕೆಲವರೊಂದಿಗೆ ಸಮೀಪದ ಫಾರ್ಮ್ ಹೌಸ್‌ವೊಂದರಲ್ಲಿ ನೋಡಿದ್ದಾಗಿ ಹೇಳಿದ್ದ, ಅಲ್ಲಿನ ಕೆಲಸಗಾರ್ತಿ 'ವಾರಿಜ'ಳ ಮೃತ ದೇಹವು ಫಾರ್ಮ್ ಹೌಸ್ ಸಮೀಪದ ಬಾವಿಯಲ್ಲಿ ತೇಲುತ್ತದೆ.
4. 'ಐವರು ಸ್ಥಳೀಯ'ರ ತಂಡದಲ್ಲಿದ್ದ ಮತ್ತೊಬ್ಬ 'ಗೋಪಾಲ ಕೃಷ್ಣ', ಅನಾರೋಗ್ಯದಿಂದ ಸತ್ತ ಎನ್ನಲಾಗಿದೆ. 'ಸ್ಲೋ ಪಾಯ್ಸನ್' ನಿಂದ ಸತ್ತ ಎಂಬ ವರದಿಯೂ ಇದೆ.
5. ಸೌಜನ್ಯ ಪ್ರಕರಣದಲ್ಲಿ ದೂರು ನೀಡಲು ಪ್ರಯತ್ನ ಮಾಡಿದ್ದ ಎನ್ನಲಾದ ಮತ್ತು ಸೌಜನ್ಯ ಪ್ರಕರಣದ ಪ್ರತಿಭಟನೆಗಳಲ್ಲಿ ನಿರಂತರವಾಗಿ ಭಾಗಿಯಾಗುತ್ತಿದ್ದ 'ದಿನೇಶ್ ಕುಮಾರ್' ಎಂಬ ವ್ಯಕ್ತಿ ಮೇಲೆ 'ಬೊಲೆರೋ ಕಾರು' ಗುದ್ದಿ ಸಾಯುತ್ತಾನೆ. ಜನರ ತೀವ್ರ ಪ್ರತಿಭಟನೆಯ ನಂತರವಷ್ಟೆ, ಕಾರು ಓಡಿಸುತ್ತಿದ್ದ, ಅದೇ ಪ್ರತಿಷ್ಠಿತರ ಹಣಕಾಸು ಸಂಸ್ಥೆಯ ಮೇನೇಜರ್ ಬಾಲಕೃಷ್ಣ ಪೂಜಾರಿಯ ಮೇಲೆ ಕೊಲೆ ಪ್ರಕರಣ ದಾಖಲಾಗುತ್ತದೆ.

ಸೌಜನ್ಯ ಪ್ರಕರಣ ಕೆಲವೇ ದಿನಗಳ ಹಿಂದೆ ನಡೆದಿರುವ ಜೋಡಿ ಕೊಲೆಯ ಪ್ರಕರಣವನ್ನು ಗಮನಿಸಿ.

ಮಾವುತ ನಾರಾಯಣ ಮತ್ತು ಸಹೋದರಿ ಯಮುನಾ ಕೊಲೆ

ಸುಮಾರು 60 ವರ್ಷದ ನಾರಾಯಣ ಧರ್ಮಸ್ಥಳ ಕ್ಷೇತ್ರದಲ್ಲಿ ಮಾವುತರಾಗಿದ್ದವರು. ಅವರ ತಂದೆ, ತಾತ ಎಲ್ಲರೂ ಸುದೀರ್ಘ ಕಾಲದಿಂದ ಮಾವುತರಾಗಿಯೇ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತ ಬಂದವರು. ನಾರಾಯಣ ಅವರ ತಂದೆಯವರ ಕಾಲದಲ್ಲಿ ಈಗಿನ ಪ್ರಮುಖರ ತಂದೆಯವರು, ಆ ಕುಟುಂಬವು ಸಲ್ಲಿಸಿದ ದೀರ್ಘ ಸೇವೆಗಾಗಿ ಸುಮಾರು 4 ಎಕರೆ ಜಮೀನನ್ನು ನೀಡುತ್ತಾರೆ. ತಂದೆಯ ಮರಣಾನಂತರ ಆ ಜಮೀನು ನಾರಾಯಣ ಅವರ ಕೈಗೆ ಬರುತ್ತದೆ.

ಈಗ ಆ ಜಮೀನಿನ ಸಮೀಪ ಒಂದು ಮುಖ್ಯವಾದ ರಸ್ತೆ ಹಾದು ಹೋಗುತ್ತಿರುವ ಕಾರಣಕ್ಕೆ ಈಗಿನ ಪ್ರತಿಷ್ಠಿತರಿಗೆ ಆ ಜಮೀನಿನ ಮೇಲೆ 'ಮನಸ್ಸಾಗುತ್ತದೆ'. ಆದರೆ ನಾರಾಯಣರು ಒಪ್ಪುವುದಿಲ್ಲ. ಜಮೀನು ಕೊಡುವುದಿಲ್ಲ. ಪ್ರತಿಷ್ಠಿತರು ಸುಮ್ಮನೆ ಬಿಟ್ಟಾರೆಯೇ. ನಾರಾಯಣರ ಮನೆಗೆ ನಲ್ಲಿ ನೀರು ಬಂದ್, ವಿದ್ಯುತ್ ಸರಬರಾಜು ಬಂದ್, ಚರಂಡಿ ನೀರು ಹೊರಗೆ ಹೋಗುವುದಿಲ್ಲ– ಬಂದ್, ಸುತ್ತ ಮುತ್ತಲ ಪ್ರದೇಶದ ಕಸವೆಲ್ಲಾ ನಾರಾಯಣರ ಮನೆ ಮುಂದೆ ಬಂದು ಬೀಳುತ್ತದೆ. ಆದರೂ ನಾರಾಯಣರು ಜಾಗ ಬಿಟ್ಟು ಕದಲುವುದಿಲ್ಲ. ಆದರೆ ನಾರಾಯಣರ ಹೆಂಡತಿ ಮತ್ತು ಮಕ್ಕಳು ಮನೆಯಿಂದ ದೂರವಾಗುತ್ತಾರೆ. ನಾರಾಯಣ ಮತ್ತು ಸಹೋದರಿ ಯಮುನಾ ಮಾತ್ರವೇ ಉಳಿಯುತ್ತಾರೆ. ಸೆಪ್ಟೆಂಬರ್ 21, 2012 ರಂದು ರಾತ್ರಿ ಮನೆಗೆ ನುಗ್ಗಿದ ಒಂದು ಗುಂಪು ನಾರಾಯಣ ಮತ್ತು ಯಮುನಾರ ತಲೆಯ ಮೇಲೆ ಕಲ್ಲು ಎತ್ತಿ ಹಾಕಿ ಅವರನ್ನು ಕೊಂದು ಹಾಕುತ್ತದೆ. ಪೋಲಿಸರು ಕಳ್ಳತನದ ಪ್ರಯತ್ನದಲ್ಲಿ ನಡೆದ ಕೊಲೆ ಎಂದು ಪ್ರಕರಣ ದಾಖಲಿಸುತ್ತಾರೆ. ಆದರೆ ನಾರಾಯಣರ ಮನೆಯಿಂದ ಕಳ್ಳತನ ಆಗಿದ್ದು ಅವರ ಜಮೀನಿನ ಕಾಗದ ಪತ್ರ ಮಾತ್ರ. ಈಗ ಆ ಜಮೀನಿನಲ್ಲಿ ದೊಡ್ಡ ಹೋಟೆಲೊಂದು ಥಳಥಳಿಸುತ್ತಾ ನಿಂತಿದೆ. ಎಂದಿನಂತೆ ಕಳ್ಳತನ ಮತ್ತು ಕೊಲೆಗಳನ್ನು ಮಾಡಿದ ಅಪರಾಧಿಗಳು ಇಲ್ಲಿಯವರೆಗೆ ಸಿಕ್ಕಿಲ್ಲ.

ಏನಿದು? ಯಾಕಿದು?

ಇವು ಕೇವಲ ಯಾರೋ ಕೆಲವು ಘೋಷಿತ 'ಗೂಂಡಾ'ಗಳ ಅನೈತಿಕ ಮತ್ತು ಅಪರಾಧ ಕೃತ್ಯಗಳಲ್ಲ. ಅಥವಾ ಇವು ಕೆಲವು ಬಿಡಿ ಬಿಡಿ ಕಾನೂನು ಬಾಹಿರ ಕೃತ್ಯಗಳ ಪ್ರಕರಣಗಳೂ ಅಲ್ಲ. ಇದು ಸಮಾಜದಲ್ಲಿ ಬಹಳ 'ಗೌರವಾನ್ವಿತರು' ಅನಿಸಿಕೊಂಡವರು ಮತ್ತು ಅವರ ಆಪ್ತರ ತಂಡ ಹಿಂದೆ ಇರುವ ದೊಡ್ಡ ಜಾಲ. ಇದೊಂದು ಯೋಜಿತ 'ವ್ಯವಸ್ಥೆ'. ಇದರಲ್ಲಿ ಭೂಮಾಫಿಯಾ ಇದೆ. ದುಬಾರಿ ಬಡ್ಡಿಯ ಸುಲಿಗೆ ಮಾಫಿಯಾ ಇದೆ. ಶಿಕ್ಷಣ ವ್ಯಾಪಾರೀಕರಣದ ದಂಧೆ ಇದೆ. ಮುಗ್ಧ ಜನರ ಭಕ್ತಿಭಾವವನ್ನು ದುರ್ಬಳಕೆ ಮಾಡಿಕೊಳ್ಳುವ ಷಡ್ಯಂತ್ರಗಳಿವೆ. ಹೆಣ್ಣು ಮಕ್ಕಳನ್ನು ಬೇಕಾದಂತೆ ಬಳಸಿ, ಕೊಂದು ಬಿಸಾಡುವ ದುಷ್ಟತನ ಇದೆ. ಇವೆಲ್ಲದ್ದಕ್ಕೆ ಪೂರಕವಾಗಿ–ಇರುವ ರಾಜಕೀಯ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಮತ್ತು ಬೆಳೆಸಿಕೊಂಡು ಹೋಗುವ ಹುನ್ನಾರವಿದೆ. ಇತ್ತೀಚಿನ ದಿನಮಾನಗಳಲ್ಲಿ ಸ್ವತಃ ಇಲ್ಲಿನ ಪ್ರಭಾವಿಗಳು ರಾಜಕೀಯವಾಗಿ ಮೇಲೆ ಮೇಲೆ ಹೋಗುತ್ತಿರುವುದನ್ನು ನೋಡಬಹುದಾಗಿದೆ. ಕೇಂದ್ರ ಸರಕಾರ ರಾಜ್ಯ ಸರಕಾರಗಳು ಇಂತಹ ಶಕ್ತಿಗಳ ವಿರುದ್ಧ ತಾವೇ ತಾವಾಗಿ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಅಪರಾಧಿಗಳನ್ನು ಶಿಕ್ಷಿಸುತ್ತಾರೆ ಎಂದು ಕಾಯುವುದು ತುಂಬಾ ದುಬಾರಿಯಾಗುತ್ತದೆ.

ಭಾರತದ ಮತ್ತು ಜಗತ್ತಿನ ಚರಿತ್ರೆಯ ಪುಟಗಳಲ್ಲಿ ಇಂತಹ ಎಷ್ಟು ಕ್ರೂರ ವ್ಯವಸ್ಥೆಗಳನ್ನು 'ಸುವರ್ಣ ಯುಗ' ಎಂಬ ಪರದೆ ಹೊದಿಸಿ ಮರೆ ಮಾಡಲಾಗಿದೆಯೋ? ಆಗೆಲ್ಲಾ ಶಾಸಕರು–ಶೋಷಕರು ಎಲ್ಲವೂ ಬಹುಮಟ್ಟಿಗೆ ಅವರೇ ಆಗಿದ್ದರು. ಈಗ ಶೋಷಣೆಯ ರೂಪ ಸಾಕಷ್ಟು ಬದಲಾಗಿದೆ. ಇಪ್ಪತ್ತನೇ ಶತಮಾನ–ಇಪ್ಪತ್ತೊಂದನೆ ಶತಮಾನದಲ್ಲಿ, ಪ್ರಜಾಪ್ರಭುತ್ವ ಎನ್ನಲಾಗುವ ಈ ಕಾಲದಲ್ಲಿ ಇಂತಹ ಪಾಳೆಯಗಾರಿ ಕ್ರೌರ್ಯವನ್ನು ಸಹಿಸಲಾಗದು. ಈ ದುಷ್ಟ ವ್ಯವಸ್ಥೆಯನ್ನು ಬೇರು ಸಮೇತ ನಿರ್ಮೂಲನೆ ಮಾಡಬೇಕು. ಧರ್ಮಸ್ಥಳದ ಉಸಿರುಗಟ್ಟಿಸುವ ಪರಿಸರದಲ್ಲಿ ಸ್ವಾತಂತ್ರ್ಯ, ಪ್ರಜಾಪ್ರಭುತ್ವದ ಹೊಸ ಗಾಳಿ ಬೀಸಬೇಕು. ಅನ್ಯಾಯಗಳನ್ನು ಪ್ರತಿಭಟಿಸುವವರಿಗೆ ರಕ್ಷಣೆ ಬೇಕು. ಅಲ್ಲಿನ ಜನರು ಪ್ರಜಾಪ್ರಭುತ್ವದ ಎಲ್ಲ ಕಾನೂನುಬದ್ಧ ಹಕ್ಕುಗಳನ್ನು–ಅವಕಾಶಗಳನ್ನು ಬಳಸಿ ಘನತೆಯ ಮತ್ತು ನೆಮ್ಮದಿಯ ಬದುಕು ಸಾಗಿಸುವ ಅವಕಾಶ ದೊರೆಯಬೇಕು. ಅತ್ಯಾಚಾರ–ಹಲ್ಲೆ–ಕೊಲೆಗಳ 'ಘೋರ'ವನ್ನು ನಿವಾರಿಸಬೇಕು. ಈಗಾಗಲೇ ನಡೆದು ಹೋಗಿರುವ ಪ್ರಕರಣಗಳಲ್ಲಿ ನಿರ್ದಾಕ್ಷಿಣ್ಯ ಮರು ತನಿಖೆ ನಡೆದು ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಇದಾಗಬೇಕೆಂದರೆ ಜನ ಜಾಗೃತಿ–ಜನ ಚಳುವಳಿಯೊಂದೇ ಉಳಿದಿರುವ ದಾರಿ.



ಇನ್ಸ್‌ಪೆಕ್ಟರ್ ಯೋಗೀಶ್‌ನನ್ನು ಬಂಧಿಸಿ ಪ್ರಕರಣಗಳ ಸಮಗ್ರ ತನಿಖೆ ನಡೆಸಿ

ಸೌಜನ್ಯ ಪ್ರಕರಣದಲ್ಲಿ ವೀರ್ಯ ಮಾದರಿಯನ್ನು ವಿಪರೀತ ವಿಳಂಬವಾಗಿ ಪ್ರಯೋಗಾಲಯಕ್ಕೆ ಕಳುಹಿಸುವ ಮೂಲಕ ಬೇಕೆಂದೇ ತನಿಖೆಯನ್ನು ಹಳ್ಳ ಹಿಡಿಸಿರುವ ಇನ್ಸ್‌ಪೆಕ್ಟರ್ ಯೋಗೀಶನನ್ನು ಬಂಧಿಸಿ ತನಿಖೆ ನಡೆಸಬೇಕು. ಈ ಪ್ರಕರಣದಲ್ಲಿ ತನಿಖಾ ಸಂಸ್ಥೆಗಳು, ಹಲವು ಮಿತಿಗಳ ನಡುವಿನಲ್ಲೂ ನ್ಯಾಯಾಲಯಗಳು ಗುರುತಿಸಿರುವ ಲೋಪಗಳ ಅಂಶಗಳನ್ನು ಗಮನಿಸಿ ಮರು ತನಿಖೆಗೆ ಮುಂದಾಗಬೇಕು. ಇನ್ನೂ ಇರಬಹುದಾದ ಸಾಕ್ಷಿಗಳನ್ನು ಸಂಗ್ರಹಿಸಿ ತನಿಖೆ ಮುಂದುವರಿಸಬೇಕು. ಇಂತಹ ನಿರ್ದಿಷ್ಟ ಬೇಡಿಕೆಗಳನ್ನು ಮುಂದಿಟ್ಟು ಆಂದೋಲನಕ್ಕೆ ಮತ್ತೆ ಬಲ ತುಂಬ ಬೇಕಿದೆ.

ಸಂತೋಷ ರಾವ್ ಒಬ್ಬ ನಿರಪರಾಧಿ ಎಂದು ಸಾಬೀತಾದದ್ದು ಹೇಗೆ? ಸಂತೋಷ ರಾವ್‌ನ ಮೇಲೆ ಪೋಲಿಸರು ಸೌಜನ್ಯ ಪ್ರಕರಣ ಮಾತ್ರವಲ್ಲ, ನಾರಾಯಣ ಮತ್ತು ಯಮುನಾರ ಜೋಡಿ ಕೊಲೆ ಆರೋಪವನ್ನೂ ಹೊರಿಸಿದ್ದರು. ಆದರೆ ಈ ಜೋಡಿ ಕೊಲೆ ನಡೆದ ದಿನ ಸಂತೋಷ ರಾವ್ ಶೃಂಗೇರಿಯಲ್ಲಿದ್ದದ್ದು ತನಿಖೆಯಿಂದ ಖಚಿತವಾಯಿತು. ಇದಲ್ಲದೆಯೂ ಹಲವು ವಿಧಾನಗಳಲ್ಲಿ ಆತನ ನಿರಪರಾಧಿತನ ಸಾಬೀತಾಯಿತು. ಇದರಿಂದ ತಿಳಿದು ಬರುವದೇನೆಂದರೆ ಪೋಲಿಸರು ಯಾವ ಪ್ರಾಥಮಿಕ ಸಾಕ್ಷ್ಯಗಳು ಇಲ್ಲದೆಯೂ ಅಮಾಯಕನ ಮೇಲೆ ಕೊಲೆ ಕೇಸುಗಳನ್ನು ಜಡಿದಿದ್ದಾರೆ!!! ಹಾಗಿದ್ದರೆ ಪ್ರಕರಣದಲ್ಲಿ ತೋರಿರುವ ಬೇಜವಾಬ್ದಾರಿತನಕ್ಕಾಗಿ ಪೋಲಿಸ್ ಅಧಿಕಾರಿ ವಿಚಾರಣೆ ನಡೆದಿದೆಯೇ ಅಥವಾ ನಿಜವಾದ ಆರೋಪಿಗಳನ್ನು ರಕ್ಷಿಸುವ ದುರುದ್ದೇಶದಿಂದ ನಿರಪರಾಧಿಯ ಮೇಲೆ ಕೊಲೆ ಆರೋಪ ಹೊರಿಸಿದ ಸಂಚಿನ ಆರೋಪದ ಮೇಲೆ ಸಂಬಂಧಿತ ಪೋಲಿಸ್ ಅಧಿಕಾರಿಗಳ ಮೇಲೆ ತನಿಖೆ ನಡೆದಿದೆಯೇ? ಇಂತಹ ನಡೆದಿರಬಹುದಾದ ಸಂಚಿನ ಹಿಂದೆ ಯಾರೆಲ್ಲಾ ಇದ್ದಾರೆ? ಆಳುವ ಸರಕಾರಗಳನ್ನೇ ತಮ್ಮ ಕೈಬೆರಳಂಚಿನಲ್ಲಿ ಕುಣಿಸುವವರ ಶಕ್ತಿಯ ಮೂಲ ಯಾವುದು? ಈ ಕುರಿತು ತನಿಖೆ ಆಗಿದೆಯೇ?

ಇವೆಲ್ಲದರ ಒಟ್ಟು ಅರ್ಥವೇನೆಂದರೆ ಧರ್ಮಸ್ಥಳದ ಈ ಒಟ್ಟು 'ಕರ್ಮಕಾಂಡ'ಗಳ ಕುರಿತು ವಿಶೇಷ ತನಿಖಾ ದಳ(ಎಸ್.ಐ.ಟಿ.)ಯಿಂದ ಒಂದು ಸಮಗ್ರ ತನಿಖೆಯೇ ನಡೆಯಬೇಕಾಗಿದೆ. ಬಿಡಿ ಬಿಡಿ ಪ್ರಕರಣಗಳಾಗಿ ಅಷ್ಟೆ ಅಲ್ಲ., ಹಳೆಯ ಹೊಸ ಪ್ರಕರಣಗಳೆಲ್ಲವೂ ಸೇರಿದಂತೆ ಒಟ್ಟಾಗಿ. ಅಂತಹ ದಿನಗಳನ್ನು ಸಾಧ್ಯವಾದಷ್ಟೂ ಬೇಗ ಬರಲಿ.





ಪದ್ಮಲತ, ವೇದವಲ್ಲಿ, ಡಿ-26, 2013 ರಲ್ಲಿ ಸಿಪಿಐ(ಎಂ)ದ.ಕ. ಜಿಲ್ಲಾ ಸಮಿತಿ ಸಂಘಟಿಸಿದ್ದ ಬೃಹತ್ ಪ್ರತಿಭಟನೆ, ಮಂಗಳೂರು.

ಧರ್ಮಸ್ಥಳದ ಇತಿಹಾಸದ ಪುಟಗಳಲ್ಲಿ ಕರಾಳ ಅಧ್ಯಾಯಗಳು

ಧರ್ಮಸ್ಥಳದಲ್ಲಿನ ಹಲ್ಲೆ-ಕೊಲೆ-ಅತ್ಯಾಚಾರ ಸರಣಿ ಇಂದು ನೆನ್ನೆಯದಲ್ಲ, ಅದಕ್ಕೆ ದೀರ್ಘ ಇತಿಹಾಸವಿದೆ. 1960, 80 ಮತ್ತು ನಂತರದ ದಶಕಗಳಲ್ಲಿ ನಡೆದ ಕೆಲವು ಭೀಬತ್ಸ ಅಪಹರಣ, ಅತ್ಯಾಚಾರ, ಕೊಲೆಗಳ ಕುರಿತು ಒಂದು ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಭೂಮಿ ಹೋರಾಟದ ನೇತಾರ ಎಳಚಿತ್ತಾಯರ ಸಜೀವ ದಹನದ ಯತ್ನ

ರೈತ ಚಳುವಳಿ, ಎಡಚಳುವಳಿಗಳ ಒತ್ತಡಗಳು ಮುಂತಾದ ಕಾರಣಗಳಿಂದಾಗಿ ಕರ್ನಾಟಕದಲ್ಲಿ 1961 ರಲ್ಲಿ ಭೂ ಸುಧಾರಣಾ ಕಾಯ್ದೆ ಅಂಗೀಕಾರ ಅಗುತ್ತದೆ. ಆಗ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಸಿಪಿಐ(ಎಂ) ಪಕ್ಷದ ಹಿರಿಯ ಮುಖಂಡರಾದ ಕೆ.ವಿ.ರಾವ್(ಎಳಚಿತ್ತಾಯ) ಅವರ ನೇತೃತ್ವದಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿಯೂ 'ಉಳುವವನಿಗೆ ಭೂಮಿ'ಗಾಗಿ ತೀವ್ರವಾದ ಹೋರಾಟಗಳು ನಡೆಯುತ್ತವೆ. ಭೂ ನ್ಯಾಯಮಂಡಳಿಗಳಿಗೆ ರೈತರಿಂದ ಅರ್ಜಿ ಹಾಕಿಸುವ ಕೆಲಸದಲ್ಲೂ ಕೆ.ವಿ.ರಾವ್ ರೈತರ ನೆರವಿಗೆ ಟೊಂಕಕಟ್ಟಿ ನಿಂತಿರುತ್ತಾರೆ. ಈಗಿನ ಪ್ರಮುಖರು ಆಗಿನ್ನೂ ಯುವಕರಾಗಿರುತ್ತಾರೆ. 'ಆಧಿಕಾರ' ಪಡೆದಿರುವುದಿಲ್ಲ. ಮತ್ತೊಂದೆಡೆ ಭೂಮಾಲಿಕರು 'ಭೂಮಾಲಿಕರ ಹಿತರಕ್ಷಣಾ ವೇದಿಕೆ' ಎಂಬ ಸಮಿತಿ ಮಾಡಿಕೊಂಡು ರೈತರ ಮೇಲೆ ಗೂಂಡಾಗಿರಿ ಮಾಡುತ್ತಿರುತ್ತಾರೆ. ಕೊಯ್ಯೂರು ಗ್ರಾಮದಲ್ಲಿ ಗೂಂಡಾಗಳು ಚಳುವಳಿಕಾರರ ಮೇಲೆ ನಾಡಬಾಂಬ್‌ಗಳನ್ನು ಹಾಕುತ್ತಾರೆ. ಬಜಂತೂರು, ವಳಾಲ್ ಮುಂತಾದ ಕಡೆಗಳಲ್ಲಿ ರೈತರ ಮೇಲೆ ಹಲ್ಲೆಗಳನ್ನು ನಡೆಸುತ್ತಾರೆ. ಆದರೆ ಈ ಯಾವುದರಿಂದಲೂ ಚಳುವಳಿಕಾರರು ಜಗ್ಗುವುದಿಲ್ಲ.

ಕೆ.ವಿ.ರಾವ್ ಜೀವನೋಪಾಯಕ್ಕಾಗಿ ಉಜಿರೆಯಲ್ಲಿ ಒಂದು ಚಪ್ಪಲಿ ಅಂಗಡಿ ನಡೆಸುತ್ತಿರುತ್ತಾರೆ. 1967 ರಲ್ಲಿ ಒಂದು ದಿನ ಬೆಳಿಗ್ಗೆಯೇ ಸ್ವತಃ 'ಯುವ ಪ್ರಮುಖರು' ತಮ್ಮ ಪಡೆಯೊಂದಿಗೆ ಲಾರಿಯಲ್ಲಿ ಬಂದು, ಚಪ್ಪಲಿ ಅಂಗಡಿ ಮೇಲೆ ಸೀಮೆ ಎಣ್ಣೆ ಎರಚಿ ಬೆಂಕಿ ಹಾಕಿಸುತ್ತಾರೆ. ಅಂಗಡಿ ಹೊತ್ತಿ ಉರಿಯುತ್ತದೆ. ಕಮ್ಯೂನಿಸ್ಟ್ ನಾಯಕನ ಸಜೀವ ದಹನದ ಯತ್ನ ಅದು. ಅದೃಷ್ಟವಶಾತ್ ರಾವ್ ಅವರು ಅದೇ ಸಮಯಕ್ಕೆ ಬಹಿರ್ದೆಸೆಗೆಂದು ಹೊರಗೆ ಹೋಗಿದ್ದರಿಂದ ಜೀವಂತ ಉಳಿಯುತ್ತಾರೆ. ಸ್ವತಃ ಕೆ.ವಿ.ರಾವ್, ಮತ್ತೊಬ್ಬ ಕಮ್ಯೂನಿಸ್ಟ್ ಹೋರಾಟಗಾರರಾದ ವಿಷ್ಣು ಮೂರ್ತಿ ಈ ಕೃತ್ಯದ ಪ್ರತ್ಯಕ್ಷ ಸಾಕ್ಷಿಗಳು.

ವೇದವಲ್ಲಿಯ ಮೇಲೆ ಅತ್ಯಾಚಾರ-ಸಜೀವ ದಹನ

ಇದೇ ಧರ್ಮಸ್ಥಳದ ಪ್ರಭಾವಿಗಳ ಒಡೆತನದ ಖಾಸಗಿ ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ ಶಿಕ್ಷಕಿಯಾಗಿದ್ದವರು ವೇದವಲ್ಲಿ. ಅವರ ಅರ್ಹತೆಗೆ ಅವರಿಗೆ ಮೊದಲೆ ಶಾಲೆಯ ಮುಖ್ಯೋಪಾಧ್ಯಾಯಿನಿ ಹುದ್ದೆ ಸಿಗಬೇಕಿತ್ತು. ಸಿಗಲಿಲ್ಲ. ಆದರೆ ಮುಂದೆ ಶಾಲೆಯಲ್ಲಿ ಎಚ್.ಎಂ. ಹುದ್ದೆ ಖಾಲಿಯಾದಾಗ, ಜಾತಿಯ ಕಾರಣಕ್ಕೆ ತಾರತಮ್ಯ ಮಾಡಿ ವೇದವಲ್ಲಿಯವರಿಗೆ ಮುಖ್ಯೋಪಾಧ್ಯಾಯಿನಿ ಹುದ್ದೆ ತಪ್ಪಿಸಲಾಗುತ್ತದೆ. ಈ ಅನ್ಯಾಯವನ್ನು ವೇದವಲ್ಲಿ ಬಹಿರಂಗವಾಗಿ ಪ್ರತಿಭಟಿಸುತ್ತಾರೆ. ಇದಾದ ನಂತರ ಒಂದು ದಿನ ವೇದವಲ್ಲಿಯವರ ಮನೆಗೆ ನುಗ್ಗಿದ ಗೂಂಡಾಪಡೆ ಅವರ ಮೇಲೆ ಅತ್ಯಾಚಾರ ಎಸಗಿ ಅವರನ್ನು ಜೀವಂತವಾಗಿ ಸುಟ್ಟು ಕೊಲೆ ಮಾಡುತ್ತದೆ. ವಿಷಯ ತಿಳಿದು ಅಘಾತಗೊಂಡು ಪೋಲಿಸ್ ಠಾಣೆಗೆ ದೂರು ಕೊಡಲೆಂದು ಹೋದ ವೇದವಲ್ಲಿಯ ಗಂಡ ಡಾ.ಬಿ.ಆರ್.ಹರಳೆಯವರ ಮೇಲೇ ಪೋಲಿಸರು ಸುಳ್ಳು ಪ್ರಕರಣ ದಾಖಲಿಸಿ ಜೈಲಿಗೆ ಅಟ್ಟುತ್ತಾರೆ. ಸುಮಾರು 2-3 ವರ್ಷಗಳ ಕಾನೂನು ಹೋರಾಟ ನಡೆಸಿ ಕೊನೆಗೆ ತಾವು ನಿರಪರಾಧಿ ಎಂದು ನಿರೂಪಿಸಿ ಡಾ.ಹರಳೆಯವರು ಆರೋಪದಿಂದ, ಜೈಲುವಾಸದಿಂದ ಮುಕ್ತರಾಗುತ್ತಾರೆ. ಆದರೆ ನಿಜವಾದ ಅಪರಾಧಿಗಳ ಪತ್ತೆ ಆಗುವುದೇ ಇಲ್ಲ.

ಕಾಂ. ದೇವಾನಂದರ ಮಗಳು ಪದ್ಮಾಲತ ಅಪಹರಣ-ಅತ್ಯಾಚಾರ-ಕೊಲೆ

ಧರ್ಮಸ್ಥಳ ಎಂಬುದು ಒಂದು 'ಪ್ರಭಾವಿಗಳ ಕೋಟೆ'. ಇಲ್ಲಿ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳಲ್ಲಿ ಸಹ ಯಾರು ನಿಲ್ಲಬೇಕು, ಯಾರು ನಿಲ್ಲಬಾರದು, ಯಾರು ಗೆಲ್ಲಬೇಕು, ಯಾರು ಗೆಲ್ಲಬಾರದು ಎಂದು ನಿರ್ಧರಿಸುವುದು ಈ ಪ್ರಭಾವಿಗಳ ಅಘೋಷಿತ ಮತ್ತು ಅನಿರ್ಬಂಧಿತ ಹಕ್ಕು. ಅದಕ್ಕೆ ಯಾರೂ ಎದುರಾಡುವಂತಿರಲಿಲ್ಲ. ಭೂಮಿ ಹೋರಾಟ, ಜನಪರ ಹೋರಾಟಗಳಿಂದ ಸಾಕಷ್ಟು ಜನಪ್ರಿಯವಾಗಿದ್ದ ಕಮ್ಯೂನಿಸ್ಟ್ ಪಕ್ಷದ ಮುಖಂಡರು ಒಂದೊಮ್ಮೆ ಪಂಚಾಯತ್ ಚುನಾವಣೆಯಲ್ಲಿ ಸ್ಪರ್ಧಿಸಿದರೆ ತಮ್ಮ ಹಲವು ಅಭ್ಯರ್ಥಿಗಳ ಸೋಲು ಖಚಿತ, ತಮ್ಮ ಹಿಡಿತಕ್ಕೆ, ಪ್ರತಿಷ್ಠೆಗೆ ಪೆಟ್ಟು ಬೀಳುವುದು ನಿಶ್ಚಿತ ಎಂಬುದನ್ನು ಅರಿತ ಪ್ರಭಾವಿಗಳು, ಸಿಪಿಐ(ಎಂ) ಮುಖಂಡರಾದ ಎಂ.ಕೆ. ದೇವಾನಂದರನ್ನು ಬೆದರಿಸುವ ಪ್ರಯತ್ನ ಮಾಡುತ್ತಾರೆ. ಆದರೆ ಕಮ್ಯೂನಿಸ್ಟ್ ಮುಖಂಡರು ಸ್ಪರ್ಧೆಯಿಂದ ಹಿಂದೆ ಸರಿಯುವುದಿಲ್ಲ. ಕಮ್ಯೂನಿಸ್ಟರ ಈ 'ಉದ್ಧಟತನ'ಕ್ಕೆ 'ಸರಿಯಾದ ಪಾಠ' ಕಲಿಸಲಾಗುತ್ತದೆ.!! ಇದು ನಡೆದದ್ದು 1986 ರಲ್ಲಿ.

ಒಂದು ದಿನ ದೇವಾನಂದರ ಮಗಳಾದ ಪದ್ಮಲತಾಳ ಅಪಹರಣವಾಗುತ್ತದೆ. 56 ದಿನಗಳ ಕಾಲ ಸುಳಿವು ಸಿಗುವುದಿಲ್ಲ. ನಂತರ ದೇವಾನಂದರ ಮನೆ ಸಮೀಪದ ನೆರಿಯಾ ಹೊಳೆಯಲ್ಲಿ ಪದ್ಮಾಲತಾರ ಮೃತ ದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗುತ್ತದೆ. ಪ್ರಭಾವಿಗಳ ತಮ್ಮ ಈ ಅತ್ಯಾಚಾರ ಮತ್ತು ಕೊಲೆಯ ರೂವಾರಿ ಎಂದು ಜನರ ನಡುವೆ ವ್ಯಾಪಕವಾಗಿ ಹರಡಿದ ಸುದ್ದಿಯ ಬಗೆಗೆ ಸಮರ್ಪಕ ತನಿಖೆಯೇ ನಡೆಯುವುದಿಲ್ಲ. ಅಪರಾಧಿಗಳ ಪತ್ತೆ ಆಗುವುದೇ ಇಲ್ಲ.

ಇಲ್ಲಿ ಅಸಹಜ ಸಾವುಗಳೇ ಸಹಜ!!

ಕಳೆದ ಸುಮಾರು ಹತ್ತು ವರ್ಷಗಳಲ್ಲಿ ಧರ್ಮಸ್ಥಳದಲ್ಲಿ ಸುಮಾರು 416 ಅಸಹಜ ಸಾವಿನ ಪ್ರಕರಣಗಳು ದಾಖಲಾಗಿರುವುದರ ವಿವರಗಳು ಮಾಹಿತಿ ಹಕ್ಕಿನಲ್ಲಿ ದೊರತಿದೆ. 2013ಕ್ಕೆ ಹಿಂದಿನ ಹತ್ತು ವರ್ಷಗಳಲ್ಲಿ ಸುಮಾರು 462 ಅಸಹಜ ಸಾವಿನ ಪ್ರಕರಣಗಳು ದಾಖಲಾಗಿವೆ. ಅಂದರೆ ಸುಮಾರು 22 ವರ್ಷಗಳಲ್ಲಿ ಸುಮಾರು ಒಂದು ಸಾವಿರದಷ್ಟು ಅಸಹಜ ಸಾವುಗಳು.!!! ಇದು ಏನನ್ನು ತೋರಿಸುತ್ತದೆ ಎಂದು ಪ್ರಜ್ಞಾವಂತರೆಲ್ಲಾ ಯೋಚಿಸಬೇಕಿದೆ. ಇವು ದಾಖಲಾಗಿರುವ ಪ್ರಕರಣಗಳು. ಇಲ್ಲಿನ ಪ್ರತಿಷ್ಠಿತರ ಅಥವಾ ಪ್ರಭಾವಿಗಳ ಆಪ್ತ ಬಳಗದವರು ಊರಿನ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸುವುದು, ಕೆಲವು ಪ್ರಕರಣಗಳಲ್ಲಿ ನಂತರದಲ್ಲಿ ಆ ಯುವತಿಯರನ್ನು ತಮ್ಮ ಚೇಲಾಗಳಿಗೆ ಮದುವೆ ಮಾಡಿಸಿರುವುದು ಇದೆಯಂತೆ. ಈ ಘೋರಗಳನ್ನು ಬಲ್ಲವರು ಬಿಚ್ಚಿಡುವ ಇತಿಹಾಸ ಇದು. ಹೀಗೆ ಅಸಹಜ ಸಾವುಗಳ ವೇಷ ತೊಡಿಸಿ ಮುಚ್ಚಿಹಾಕಲಾದ ಅತ್ಯಾಚಾರ, ಹಲ್ಲೆ, ಕೊಲೆಗಳೆಷ್ಟು ಎಂಬ ಪ್ರಶ್ನೆಗೆ ಉತ್ತರವಿಲ್ಲ.

ಕಠಿಣ ದಾರಿ

ಸೌಜನ್ಯ ಪ್ರಕರಣ ಇರಲಿ ಯಾವುದೇ ಪ್ರಕರಣ ಇರಲಿ ನ್ಯಾಯ ದೊರೆಯುವುದು ಅಷ್ಟು ಸುಲಭ ಎಂದು ಕಾಣುತ್ತಿಲ್ಲ. ಕಳೆದ ಮಾರ್ಚ್ ತಿಂಗಳಲ್ಲಿ, ನ್ಯಾಯಾಲಯದ ತಡೆಯಾಜ್ಞೆಯನ್ನೇ ಮುಂದೆ ಮಾಡಿಕೊಂಡು, ಸೌಜನ್ಯ ಪ್ರಕರಣದ ಸಂಬಂಧ ಬೆಂಗಳೂರಿನಲ್ಲಿ ನಿಗದಿಯಾಗಿದ್ದ 'ಸಮಾಲೋಚನಾ ಸಭೆ'ಯನ್ನು ಪೋಲಿಸರು ರದ್ದು ಮಾಡಿಸಿದರು. ಮತ್ತೊಂದು ಸಭೆ ನಡೆಯದಂತೆ ಬೆದರಿಸುವ ಯತ್ನವನ್ನು ನಡೆಸಿದರು. ರಾಜ್ಯದ ಗೃಹ ಇಲಾಖೆ, ಸರಕಾರವನ್ನೂ ತಮಗೆ ಬೇಕಾದಂತೆ ಕುಣಿಸುವ ಶಕ್ತಿ ರಾಜ್ಯದಲ್ಲಿ ಯಾರಿಗಿದೆ ಎಂಬುದು ಈ ಪ್ರಯತ್ನದಲ್ಲಿ ಗೊತ್ತಾಗುತ್ತದೆ. ಕೊನೆಗೆ ಪ್ರಗತಿಪರರ ಯತ್ನದಿಂದ, ನ್ಯಾಯಾಲಯವು ಪ್ರತಿಭಟನೆ ಹಾಗೂ ಸಮಾಲೋಚನಾ ಸಭೆಗಳನ್ನು ತಡೆಯುವಂತಿಲ್ಲ ಎಂಬ ತೀರ್ಪು ನೀಡಿತು. ಸಮಾಲೋಚನಾ ಸಭೆ ನಡೆಯಿತು. ಆದರೆ ಕಳೆದ ಏಪ್ರಿಲ್ 6 ರಂದು ಧರ್ಮಸ್ಥಳದಲ್ಲಿ ನಿಗದಿಯಾಗಿದ್ದ ಪ್ರತಿಭಟನೆಯೊಂದು ನಡೆಯದಂತೆ ನ್ಯಾಯಾಲಯ ಮತ್ತೆ ತಡೆಯಾಜ್ಞೆ ನೀಡಿತು. ನ್ಯಾಯಾಲಯದಲ್ಲಿ ತಡೆಯಾಜ್ಞೆ ಪಡೆಯಲು ಏನೆಲ್ಲಾ ಮಾಡಲಾಗಿದೆ ಎಂಬುದು ಮತ್ತೊಂದು ವಿಶೇಷ ಅಧ್ಯಾಯ!

ಸೆಪ್ಟೆಂಬರ್ 2024 ರಲ್ಲಿ ಸೌಜನ್ಯ ಪ್ರಕರಣದ ಮರುತನಿಖೆಯಾಗಬೇಕು ಎಂಬ ಸೌಜನ್ಯಳ ತಂದೆಯ ಮನವಿಯನ್ನು, ಅದರಿಂದ ಯಾವ ಉದ್ದೇಶವೂ ಈಡೇರುವುದಿಲ್ಲ ಎಂದು ನ್ಯಾಯಾಲಯ ತಿರಸ್ಕರಿಸಿದೆ. ಅಂದರೆ ಸೌಜನ್ಯ ಪ್ರಕರಣದಲ್ಲಿ ವೀರ್ಯ ಮಾದರಿಯನ್ನು 12 ದಿನಗಳಷ್ಟು ತಡವಾಗಿ ಪ್ರಯೋಗಾಲಯಕ್ಕೆ ಕಳಿಸಿ ಸಾಕ್ಷ್ಯನಾಶ ಮಾಡಿದ ಗಂಭೀರ ಲೋಪದ ಹೊಣೆ ಯಾರದು? ಹಾಗಿದ್ದರೆ ಸೌಜನ್ಯ ಸಾವಿಗೆ ಯಾರೂ ಕಾರಣರೇ ಅಲ್ಲವೇ? ಆಕೆಯ ಮೇಲೆ ಅತ್ಯಾಚಾರ-ಕೊಲೆ ಮಾಡಿದವರು ಯಾರು?

ಇದೇ ಇನ್ಸ್‌ಪೆಕ್ಟರ್ ಯೋಗೀಶ್, 2020ರಲ್ಲಿ ಬೆಂಗಳೂರಿನ ಎಸ್.ಜೆ. ಪಾರ್ಕ್ ಠಾಣೆಯಲ್ಲಿದ್ದಾಗ, ಅಪಹರಣ-ದರೋಡೆ ಪ್ರಕರಣದಲ್ಲಿನ ಶಾಮೀಲಾದ ಆರೋಪದ ಮೇಲೆ ಸಸ್ಪೆಂಡ್ ಆಗಿದ್ದು ಸೌಜನ್ಯ ಮತ್ತು ಅಂತಹ ಪ್ರಕರಣಗಳಲ್ಲಿ, ಸಮಗ್ರ ಮರು ತನಿಖೆಯ ಅಗತ್ಯ ಇದೆ ಎಂಬುದನ್ನೇ ಸೂಚಿಸುತ್ತಿದೆ. ನ್ಯಾಯಾಲಯಗಳಿಗೂ, ಸರಕಾರಕ್ಕೂ ಈ ವಿಷಯವನ್ನು ಪರಿಣಾಮಕಾರಿಯಾಗಿ ಮನದಟ್ಟು ಮಾಡಿಸುವ ಹೊಣೆ ಈಗ ಜನಚಳುವಳಿಗಳ ಮುಂದಿದೆ.

ಒಕ್ಕೂಟ ತತ್ವ ರಕ್ಷಣೆಯಲ್ಲಿ ಒಂದು ಐತಿಹಾಸಿಕ ತೀರ್ಪು

ಪ್ರಕಾಶ್ ಕಾರತ್

ಭಾರತದ ಸರ್ವೋನ್ನತ ನ್ಯಾಯಾಲಯ ನಿಜಕ್ಕೂ ಒಂದು ಐತಿಹಾಸಿಕ ತೀರ್ಪು ನೀಡಿದೆ. ಅದು ಒಕ್ಕೂಟ ತತ್ವವನ್ನು ರಕ್ಷಿಸಿದೆ ಹಾಗೂ ರಾಜ್ಯ ಶಾಸಕಾಂಗದ ಸಂಕಲ್ಪವನ್ನು ವಿಫಲಗೊಳಿಸುವ ರಾಜ್ಯಪಾಲರೊಬ್ಬರ ಕ್ರಮವನ್ನು ಅಸಾಂವಿಧಾನಿಕ ಎಂದು ಘೋಷಿಸಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಮತ್ತು ಆರ್.ಮಹಾದೇವನ್ ಇದ್ದ ದ್ವಿಸದಸ್ಯ ಪೀಠ ನೀಡಿರುವ 414 ಪುಟಗಳ ತೀರ್ಪು, ಎಂದು ದಿಟ್ಟವಾಗಿ ಹೇಳಿದೆ. ತಮಿಳುನಾಡು ಶಾಸನಸಭೆ ಅಂಗೀಕರಿಸಿದ್ದ ಹಲವು ಮಸೂದೆಗಳನ್ನು ರಾಜ್ಯಪಾಲ ರವಿ ತಡೆ ಹಿಡಿದಿದ್ದರು.

ಈ ತೀರ್ಪು 1994ರ ಎಸ್.ಆರ್. ಬೊಮ್ಮಾಯಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಒಂಬತ್ತು ಸದಸ್ಯರ ಪೀಠ ನೀಡಿದ್ದ ಐತಿಹಾಸಿಕ ತೀರ್ಪಿನ ಮಹತ್ವದ ತೀರ್ಪಿನ ವಿಭಾಗಕ್ಕೇ ಬರುತ್ತದೆ. ಆ ತೀರ್ಪು ಕೂಡ ರಾಜ್ಯ ಸರಕಾರಗಳನ್ನು ವಜಾ ಮಾಡಲು ಸಂವಿಧಾನದ 356ನೇ ವಿಧಿಯನ್ನು ಏಕಪಕ್ಷೀಯವಾಗಿ ಬಳಕೆ ಮಾಡಿಕೊಳ್ಳುವುದನ್ನು ತಡೆದಿತ್ತು. ಈ ಕರಾಳ ವಿಧಿಯನ್ನು ದುರುಪಯೋಗ ಪಡಿಸಿಕೊಳ್ಳಲು ರಾಜ್ಯಪಾಲರ ವರದಿಯು ಕೇಂದ್ರಕ್ಕೆ ಒಂದು ನೆಪವಾಗಿರುತ್ತಿತ್ತು. ಸುಪ್ರೀಂ ಕೋರ್ಟ್‌ನ ಆ ತೀರ್ಪು ಬಂದಾಗಿನಿಂದ ರಾಜ್ಯ ಸರಕಾರಗಳನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರಲು 356ನೇ ವಿಧಿಯನ್ನು ದುರುಪಯೋಗಪಡಿಸಿಕೊಳ್ಳಲು ಕೇಂದ್ರ ಸರಕಾರಕ್ಕೆ ಕಷ್ಟವಾಗುತ್ತಿದೆ.

ಈಚಿನ ಪ್ರಕರಣದಲ್ಲಿ, ರಾಜ್ಯ ವಿಧಾನಸಭೆ ಅಂಗೀಕರಿಸಿದ್ದ ಮಸೂದೆಗಳನ್ನು ರಾಜ್ಯಪಾಲರು ಅನಿರ್ದಿಷ್ಟಾವಧಿಗೆ ತಡೆ ಹಿಡಿದ ಹಾಗೂ ಸಂವಿಧಾನದ 200ನೇ ವಿಧಿ ಪ್ರಕಾರ ಕ್ರಮಕೈಗೊಳ್ಳಲು ನಿರಾಕರಿಸಿದ್ದನ್ನು ಪ್ರಶ್ನಿಸಿ ತಮಿಳುನಾಡು ಸರಕಾರವು ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ವಿಧಿ 200ರ ಪ್ರಕಾರ ರಾಜ್ಯಪಾಲರಿಗೆ ಮೂರು ಆಯ್ಕೆಗಳಿರುತ್ತವೆ:

ಅಸೆಂಬ್ಲಿ ಅಂಗೀಕರಿಸಿದ ಮಸೂದೆಗೆ ಒಪ್ಪಿಗೆ ನೀಡುವುದು ಅಥವಾ ವಿಚಾರಣೆ ಹಾಗೂ ಟಿಪ್ಪಣಿಗಳೊಂದಿಗೆ ಮಸೂದೆಯನ್ನು ವಿಧಾನಸಭೆಗೆ ಮರಳಿಸುವುದು ಅಥವಾ ಮಸೂದೆಯು ಸಾಂವಿಧಾನಿಕ ತತ್ವಗಳನ್ನು ಉಲ್ಲಂಘಿಸಿದೆಯೆಂದು ಭಾವಿಸಿದರೆ ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಒಪ್ಪಿಸುವುದು –ಇವೇ ಆ ಮೂರು ಆಯ್ಕೆಗಳು.

ತಮಿಳುನಾಡು ವಿಧಾನಸಭೆ ಅಂಗೀಕರಿಸಿದ ಹತ್ತು ಮಸೂದೆಗಳು ಹಾಗೂ ಅವುಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡದ ಈ ಪ್ರಕರಣದಲ್ಲಿ, ಈ ಎಲ್ಲ ಮಸೂದೆಗಳನ್ನು ರಾಜ್ಯ ಅಸೆಂಬ್ಲಿ ಮರು–ಅಂಗೀಕಾರ ಮಾಡಿತ್ತು ಹಾಗೂ ರಾಜ್ಯಪಾಲರಿಗೆ ಕಳಿಸಿತ್ತು. ಸಂವಿಧಾನದ ನಿಯಮದ ಪ್ರಕಾರ, ಆಗ ಈ ಮಸೂದೆಗಳಿಗೆ ರಾಜ್ಯಪಾಲರು ಅಂಕಿತ ಹಾಕದೇ ಅವೆಲ್ಲವನ್ನೂ ರಾಷ್ಟ್ರಪತಿಯವರ ಪರಿಶೀಲನೆಗೆ ಕಳಿಸಿದ್ದರು. ರಾಜ್ಯಪಾಲರ ಕ್ರಮವು 'ಪ್ರಾಮಾಣಿಕವಲ್ಲ'. ಅವರ ಕ್ರಮವು ಕಾನೂನು ಪ್ರಕಾರ ತಪ್ಪು ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಈ ಹತ್ತು ಮಸೂದೆಗಳಿಗೆ ಸಮ್ಮತಿ ನೀಡಬೇಕಾಗಿತ್ತು ಎಂದೂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಕಾಲ ಮಿತಿ ನಿಗದಿ

ಸಂವಿಧಾನದ 200ನೇ ವಿಧಿಗೆ ಸಂಬಂಧಪಟ್ಟಂತೆ ವಿವಿಧ ಅನುಚ್ಛೇದಗಳ ವಿಚಾರದಲ್ಲಿ ರಾಜ್ಯಪಾಲರು ನಿರ್ಧಾರ ಕೈಗೊಳ್ಳಲು ಸಮಯದ ಮಿತಿಯನ್ನು ಕೋರ್ಟ್ ನಿಗದಿಪಡಿಸಿದೆ. ಮಸೂದೆಯೊಂದನ್ನು ರಾಜ್ಯಪಾಲರು ಅಂಗೀಕರಿಸಲು ಅಥವಾ ರಾಜ್ಯ ಶಾಸಕಾಂಗಕ್ಕೆ ಮರಳಿಸಲು ಕೋರ್ಟ್ ಮೂರು ತಿಂಗಳ ಗಡುವು ವಿಧಿಸಿದೆ. ಒಂದು ವೇಳೆ ರಾಜ್ಯ ಶಾಸಕಾಂಗವು ಮಸೂದೆಯನ್ನು ಮರು–ಅಂಗೀಕಾರ ಮಾಡಿ ರಾಜ್ಯಪಾಲರಿಗೆ ಮರಳಿಸಿದರೆ ಆಗ ರಾಜ್ಯಪಾಲರು ಒಂದು ತಿಂಗಳೊಳಗೆ ಅದಕ್ಕೆ ಸಮ್ಮತಿ ನೀಡಲೇ ಬೇಕು. ಈ ನಿರ್ದೇಶನಗಳ ಪ್ರಕಾರ, ರಾಜ್ಯಪಾಲರು ತೆಗೆದುಕೊಳ್ಳಬೇಕಾದ ಕಾಲಮಿತಿಯನ್ನು ಸ್ಪಷ್ಟಪಡಿಸಿದಂತಾಗಿದೆ.

ರಾಷ್ಟ್ರಪತಿಯವರ ಪರಿಶೀಲನೆಗೆ ಒಪ್ಪಿಸುವ ವಿಚಾರದಲ್ಲಿ ಕೋರ್ಟ್ ಒಂದು ದಿಟ್ಟ ಹಾಗೂ ಸಕಾಲಿಕ ನಿರ್ದೇಶನ ನೀಡಿದೆ. ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಒಪ್ಪಿಸಿ ರಾಷ್ಟ್ರಪತಿ ಅದಕ್ಕೆ ಅಂಕಿತ ಹಾಕದೇ ಕೊಳೆಯುವಂತೆ ಮಾಡುವುದು ಕೇಂದ್ರ ಸರ್ಕಾರ ಅನುಸರಿಸುವ ತಂತ್ರಗಳಲ್ಲಿ ಒಂದಾಗಿದೆ. ರಾಜ್ಯಪಾಲರು ತಮ್ಮ ಪರಿಶೀಲನೆಗೆ ಒಪ್ಪಿಸಿದ ರಾಜ್ಯ ಮಸೂದೆಗೆ ಅಂಗೀಕಾರ ನೀಡಬೇಕೋ ಬೇಡವೋ ಎನ್ನುವುದನ್ನು ರಾಷ್ಟ್ರಪತಿಯವರು ಮೂರು ತಿಂಗಳೊಳಗೆ ನಿರ್ಧಾರ ಕೈಗೊಳ್ಳಬೇಕೆಂಬ ಗಡುವನ್ನು ಕೋರ್ಟ್ ನಿಗದಿಪಡಿಸಿದೆ. ರಾಜ್ಯಪಾಲರಿಂದ ತಮ್ಮ ಪರಿಶೀಲನೆಗೆ ಬಂದ ಮಸೂದೆಗಳಲ್ಲಿ ಅಸಾಂವಿಧಾನಿಕತೆಯಿದೆಯೆಂಬ ಅನುಮಾನ ಬಂದಲ್ಲಿ ಆ ಬಗ್ಗೆ ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ಅನ್ನು ಸಂಪರ್ಕಿಸುವಂತೆಯೂ ತೀರ್ಪು ಸಲಹೆ ಮಾಡಿದೆ. ನ್ಯಾಯಾಂಗದ ಸಲಹೆಯ ಆಧಾರದಲ್ಲಿ ತೀರ್ಮಾನ ಕೈಗೊಳ್ಳಲು



ರಾಷ್ಟ್ರಪತಿಗೆ ಇದರಿಂದ ನೆರವಾಗುತ್ತದೆ.

ಸಂವಿಧಾನದಲ್ಲಿ ಮೂಲತಃ ನಿಗದಿಪಡಿಸಲಾದ ರಾಜ್ಯಪಾಲರ ಪಾತ್ರದ ಅಂಶವನ್ನು ಈ ತೀರ್ಪು ಎತ್ತಿ ಹಿಡಿದಿದೆ. ರಾಜ್ಯಪಾಲರು ಸಾಂವಿಧಾನಿಕ ಮುಖ್ಯಸ್ಥರು ಅಷ್ಟೇ. ರಾಷ್ಟ್ರಪತಿಯವರು ಕಾನೂನುಗಳನ್ನು ಅಂಗೀಕರಿಸುವ ರಾಜ್ಯ ವಿಧಾನಸಭೆಯ ಆಶಯಗಳ ವಿರುದ್ಧ ಹೋಗುವಂತಿಲ್ಲ. ರಾಜ್ಯಪಾಲರು ಕೇಂದ್ರ ಸರಕಾರದ ಕುಮ್ಮಕ್ಕಿನಂತೆ ನಡೆಯಬಾರದು ಮತ್ತು ಕೇಂದ್ರ ಸರಕಾರದ ರಾಜಕೀಯ ಗುರಿಗಳನ್ನು ಈಡೇರಿಸಿಕೊಳ್ಳಲು ಸಾಂವಿಧಾನಿಕ ಯಂತ್ರಗಳನ್ನು ಬಳಸಿಕೊಳ್ಳಬಾರದು.

ಸುಪ್ರೀಂ ಕೋರ್ಟ್‌ನ ಈ ತೀರ್ಪು ತಮಿಳುನಾಡಿಗೆ ಮಾತ್ರ ಸಿಕ್ಕ ಜಯವಲ್ಲ. ರಾಜ್ಯಪಾಲರುಗಳು ಮಸೂದೆಗಳನ್ನು ತಡೆ ಹಿಡಿದ ಅಥವಾ ಕೇರಳ, ಕರ್ನಾಟಕ, ಪಂಜಾಬ್, ತೆಲಂಗಾಣ ಮತ್ತು ಪಶ್ಚಿಮ ಬಂಗಾಳದಂಥ ರಾಜ್ಯಗಳ ಶಾಸಕಾಂಗಗಳು ಅಂಗೀಕರಿಸಿದ ಮಸೂದೆಗಳು ಅಂಗಿಕಾರವಾಗಲು ಅಡ್ಡಿ ಎದುರಿಸುತ್ತಿರುವ ರಾಜ್ಯಗಳಿಗೆ ಕೂಡ ಸಂದ ಜಯವಾಗಿದೆ.

ಕೇರಳದ ಮಾಜಿ ರಾಜ್ಯಪಾಲ ಅರಿಫ್ ಮಹಮದ್ ಖಾನ್ ಕೈಗೊಂಡಂಥ ಇದೇ ರೀತಿಯ ಕೃತ್ಯಗಳ ವಿರುದ್ಧ ಕೇರಳ ಸರಕಾರ ರಿಟ್ ಅರ್ಜಿಗಳನ್ನು ಸಲ್ಲಿಸಿದೆ. ತಮಿಳುನಾಡು ಅರ್ಜಿ ಸಂಬಂಧ ಏಪ್ರಿಲ್ 8ರಂದು ಸುಪ್ರೀಂ ಕೋರ್ಟ್ ತೀರ್ಪು ಹೊರಬಿದ್ದ ಬೆನ್ನಲ್ಲೇ ತಮಿಳುನಾಡಿನ ಅರ್ಜಿ ವಿಚಾರಣೆ ನಡೆಸಿದ ಪೀಠವೇ ಈ ಅರ್ಜಿಯನ್ನೂ ವಿಚಾರಿಸಬೇಕೆಂದು ಕೇರಳ ಸರಕಾರದ ವಕೀಲರು ಮನವಿ ಮಾಡಿದರು. ಆದರೆ ಭಾರತದ ಮುಖ್ಯ ನ್ಯಾಯಾಧೀಶರು (ಸಿಜೆಐ) ಅದನ್ನು ಪುರಸ್ಕರಿಸಿಲ್ಲ. ಮೇ 13ರಂದು ಕೇರಳದ ಅರ್ಜಿಯ ವಿಚಾರಣೆಯನ್ನು ನಿಗದಿಪಡಿಸಿದೆ. ಕೇರಳ ರಾಜ್ಯಪಾಲರ ಕ್ರಮಗಳು ಕೂಡ ತಮಿಳುನಾಡಿನ ರೀತಿಯದ್ದೇ ಆಗಿರುವುರಿಂದ ಇದೇ ಪೀಠ ವಿಚಾರಣೆ ನಡೆಸಿದ್ದರೆ ಒಳ್ಳೆಯದಿತ್ತು.

ಕೇಂದ್ರ ಸರಕಾರವು ಈ ಐತಿಹಾಸಿಕ ತೀರ್ಪನ್ನು ಪಾಲಿಸಬೇಕು ಹಾಗೂ ಅಸಾಂವಿಧಾನಿಕವಾಗಿ ವರ್ತಿಸುವಂತೆ ರಾಜ್ಯಪಾಲರಿಗೆ ನಿರ್ದೇಶಿಸುವುದನ್ನು ನಿಲ್ಲಿಸಬೇಕು. ಇತ್ತೀಚೆಗೆ ನೇಮಕಗೊಂಡಿರುವ ಕೇರಳದ ನೂತನ ರಾಜ್ಯಪಾಲರು ಸುಪ್ರೀಂ ಕೋರ್ಟ್‌ನ ತೀರ್ಪು 'ನ್ಯಾಯಾಂಗದ ಅತಿರೇಕ' ಎಂದು ಈಗಾಗಲೇ ವರ್ಣಿಸಿದ್ದಾರೆ. ಸಾಂವಿಧಾನಿಕ ಪೀಠ ವಿಚಾರಣೆ ನಡೆಸಬೇಕೆಂಬ ಕೂಗು ಕೂಡ ಕೇಳಿ ಬರುತ್ತಿದೆ. ತೀರ್ಪನ್ನು ಉಪಾಯದಿಂದ ತಪ್ಪಿಸಿಕೊಳ್ಳುವುದು ಈ ಎಲ್ಲ ಪ್ರಯತ್ನಗಳ ಉದ್ದೇಶವಾಗಿದ್ದು ಅದನ್ನು ಪ್ರತಿರೋಧಿಸಬೇಕಾಗಿದೆ. ಸುಪ್ರೀ ಕೋರ್ಟ್‌ನ ಐತಿಹಾಸಿಕ ತೀರ್ಪು, ರಾಜ್ಯಗಳ ಅಧಿಕಾರಗಳ ಮೇಲೆ ಸವಾರಿ ಮಾಡುವ ಕೇಂದ್ರೀಕರಣ ಯತ್ನದ ವಿರುದ್ಧದ ಹೋರಾಟದಲ್ಲಿ ಒಂದು ಮುನ್ನಡೆಯಾಗಿದೆ. ಸಂವಿಧಾನದಲ್ಲಿರುವ ಒಕ್ಕೂಟ ತತ್ವದ ರಕ್ಷಣೆಗೆ ಎಲ್ಲ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಅನು: ವಿಶ್ವ

'ಸೌಜನ್ಯ' ಪ್ರಕರಣ: ನ್ಯಾಯ ಇನ್ನೂ.... ಪುಟ 4 ರಿಂದ

ನಿರಪರಾಧಿಗಳಿಗೆ ಚಿತ್ರಹಿಂಸೆ ನೀಡಲಾಗಿದೆ. ಈ ಆರೋಪಿಗಳು ನಿಜವಾದ ಅಪರಾಧ ಮಾಡಿಲ್ಲದ ಕಾರಣ ತನಿಖೆಯಲ್ಲಿ ಅವರು ಸ್ಪಷ್ಟವಾಗಿ ನಿರಪರಾಧಿಗಳು ಎಂದು ಸಾಬೀತಾಗಿ ಬಿಡುಗಡೆಯಾಗಿದ್ದಾರೆ. ಹಾಗಿದ್ದರೆ, ನಿಜವಾದ ಅಪರಾಧಿಗಳು ಎಲ್ಲಿದ್ದಾರೆ.

ಈಗ ಸೌಜನ್ಯ ಪ್ರಕರಣದ ಕೆಲವು ವಿವರಗಳನ್ನು ನೋಡೋಣ.

1. ಸೌಜನ್ಯ ತನ್ನ ಮನೆಯ ಕಡೆಗೆ ನಡೆದು ಹೋಗುವಾಗ, ಆಕೆಯ ಹಿಂದೆ ವ್ಯಕ್ತಿಯೊಬ್ಬ ಸಾಗಿ ಹೋಗಿರುವ ದೃಶ್ಯ ದಾಖಲಾಗಿದ್ದ ಸ್ಥಳೀಯ ಪ್ರಕೃತಿ ಹಾಸ್ಪಿಟಲ್‌ನ ಸಿಸಿಟಿವಿ ದೃಶ್ಯಾವಳಿಗಳು ಡಿಲಿಟ್ ಆಗಿ ಹೋಗಿರುತ್ತವೆ. ಪೋಲಿಸರಿಗೆ ಸಿಗುವುದಿಲ್ಲ. (ಅದು ಧರ್ಮಸ್ಥಳ ಟ್ರಸ್ಟ್‌ಗೆ ಸೇರಿದ ಆಸ್ಪತ್ರೆ.)
2. ಸೌಜನ್ಯ ಪ್ರಕರಣದಲ್ಲಿಯೂ 'ಸಂತೋಷ ರಾವ್'ನನ್ನು ಬಂಧಿಸಿರುವುದು ಪೋಲಿಸರಲ್ಲ. 'ಐವರು ಸ್ಥಳೀಯರು' ಆತನನ್ನು 'ಹಿಡಿದು ತಂದು' ಪೋಲಿಸರಿಗೆ 'ಒಪ್ಪಿಸಿದ್ದಾರೆ'.
3. ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಯೋಗೀಶ್, ಸೌಜನ್ಯಳ ದೇಹದಿಂದ ಸಂಗ್ರಹಿಸಿದ 'ವೀರ್ಯ ಮಾದರಿ'ಯನ್ನು ಪ್ರಯೋಗ ಶಾಲೆಗೆ ತಲುಪಿಸಿರುವುದು 12 ದಿನಗಳ ನಂತರ. ಅವು ಫಂಗಸ್‌ಗಳ ಬೆಳವಣಿಗೆಯಿಂದ ಹಾಳಾಗಿದ್ದವು. (ವೀರ್ಯದ ಮಾದರಿ 72 ಗಂಟೆಗಳೊಳಗೆ ಪರೀಕ್ಷೆಗೊಳಪಡಬೇಕಿತ್ತು.) ಇಂತಹ ಹಲವು ಉದ್ದೇಶಪೂರ್ವಕ ಅನಿಸುವ ವೈಫಲ್ಯಗಳು ಪ್ರಕರಣದಲ್ಲಿ ಎದ್ದು ಕಾಣುತ್ತಿರುವುದನ್ನು ಸಿ.ಬಿ.ಐ. ತನಿಖೆಯಲ್ಲಿ ಗುರುತಿಸಲಾಗಿದೆ.



ನವ–ಫ್ಯಾಸಿಸಂ ಚರ್ಚೆಯ ಸುತ್ತ

ಡಾ. ಪ್ರಕಾಶ್ ಕೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ 24ನೇ ಅಖಿಲ ಭಾರತ ಮಹಾಧಿವೇಶನ 2025 ಏಪ್ರಿಲ್ 2ರಿಂದ 6ರವರೆಗೆ ತಮಿಳುನಾಡಿನ ಮಧುರೈನಲ್ಲಿ ನಡೆಯಿತು. ಪ್ರತಿ ಮೂರು ವರ್ಷಗಳಿಗೊಮ್ಮೆ ನಡೆಯುವ ಮಹಾಧಿವೇಶನಗಳಲ್ಲಿ ಸಿಪಿಐ(ಎಂ) ತನ್ನ ಮುಂದಿನ ಮೂರು ವರ್ಷಗಳ ರಾಜಕೀಯ ಧೋರಣೆಯನ್ನು ಅಂಗೀಕರಿಸುತ್ತದೆ. ಸಿಪಿಐ(ಎಂ) ನಿಯಮದ ಪ್ರಕಾರ, ಮಹಾಧಿವೇಶನಗಳಲ್ಲಿ ಅಂಗೀಕರಿಸುವ ರಾಜಕೀಯ ನಿರ್ಣಯದ ಕರಡನ್ನು ಕನಿಷ್ಟ ಎರಡು ತಿಂಗಳ ಮೊದಲು ಪಕ್ಷದ ಸದಸ್ಯರು ಮತ್ತು ಸಾರ್ವಜನಿಕರು ಚರ್ಚಿಸಲು ಮತ್ತು ಅಭಿಪ್ರಾಯಗಳನ್ನು ನೀಡಲು ಬಿಡುಗಡೆ ಮಾಡುತ್ತದೆ. ಇಂತಹ ಚರ್ಚೆಯ ಆಧಾರದಲ್ಲಿ ಮಹಾಧಿವೇಶನದಲ್ಲಿ ಮತ್ತಷ್ಟು ವಿಮರ್ಶೆ ನಡೆಸಿ ಅಂತಿಮವಾಗಿ ಅಂಗೀಕಾರ ಮಾಡುತ್ತದೆ. ಸಿಪಿಐ(ಎಂ)ನ ಈ ಆಂತರಿಕ ಪ್ರಜಾಸತ್ತಾತ್ಮಕ ಪ್ರಕ್ರಿಯೆ ಸಾಮಾನ್ಯವಾಗಿ ಇತರೆ ಯಾವುದೇ ಬಂಡವಾಳಶಾಹಿ ಪಕ್ಷಗಳಲ್ಲಿ ನಡೆಯುವುದಿಲ್ಲ.

ಸಿಪಿಐ(ಎಂ) ಮಧುರೈ ಮಹಾಧಿವೇಶನದ ಸಂದರ್ಭಕ್ಕೆ ಬಿಡುಗಡೆ ಮಾಡಿದ ರಾಜಕೀಯ ನಿರ್ಣಯದಲ್ಲಿ ಬಳಸಿದ “ನವ–ಫ್ಯಾಸಿಸ್ಟ್” ಶಬ್ದವು ಸಾಕಷ್ಟು ಚರ್ಚೆಗಳನ್ನು ಉಂಟು ಮಾಡಿತು. ಸಿಪಿಐ(ಎಂ) ತನ್ನ ರಾಜಕೀಯ ನಿರ್ಣಯದಲ್ಲಿ, “ಹನ್ನೊಂದು ವರ್ಷಗಳ ಮೋದಿ ಆಡಳಿತವು, ನವ–ಫ್ಯಾಸಿಸ್ಟ್ ಲಕ್ಷಣಗಳೊಂದಿಗೆ, ಬಲಪಂಥೀಯ, ಕೋಮುವಾದಿ, ಸರ್ವಾಧಿಕಾರಿ ಶಕ್ತಿಗಳ ಕ್ರೋಢೀಕರಣದಲ್ಲಿ ಪರಿಣಮಿಸಿದೆ” ಎಂದು ಹೇಳಿದೆ.

ನವ–ಫ್ಯಾಸಿಸ್ಟ್ ಶಬ್ದದ ಕುರಿತು ಉಂಟಾಗಬಹುದಾದ ಗೊಂದಲಗಳ ಬಗ್ಗೆ ಪ್ರತ್ಯೇಕವಾಗಿ ಒಂದು ವಿವರಣಾ ಟಿಪ್ಪಣಿಯನ್ನು ಪ್ರಕಟಿಸಿದೆ. ಈ ಟಿಪ್ಪಣಿಯ ಪರಿಣಾಮವಾಗಿ, ಪರ–ವಿರೋಧ ಚರ್ಚೆಗಳು, ಕಟುವಾದ ಟೀಕೆಗಳು ಮತ್ತು ಸಮಚಿತ್ತದ ವಿಮರ್ಶೆಗಳೂ ನಡೆದಿವೆ. ಕೆಲವು ಪತ್ರಿಕೆಗಳು ಮತ್ತು ಮಾಧ್ಯಮಗಳು “ಮೋದಿ ಸರ್ಕಾರ ಫ್ಯಾಸಿಸ್ಟ್ ಅಲ್ಲ–ಸಿಪಿಐ(ಎಂ)” ಎಂದು ಪ್ರಕಟಿಸಿದವು ಮತ್ತು ಗೊಂದಲಗಳನ್ನು ಸೃಷ್ಟಿಸಿದವು. ಬಹುತೇಕ ಟೀಕೆಗಳಿಗೆ ಕಾರಣವಾದದ್ದು, ಮೋದಿ ಆಡಳಿತದಲ್ಲಿ ಭಾರತವು ಫ್ಯಾಸಿಸ್ಟ್ ಆಳ್ವಿಕೆಯಾಗಿ ಮಾರ್ಪಟ್ಟಿದೆಯೇ ಅಥವಾ ಮಾರ್ಪಡುವ ಪ್ರಕ್ರಿಯೆಯಲ್ಲಿ ಇದೆಯೇ ಎಂಬುದರ ಕುರಿತಾಗಿದೆ.

ಸಿಪಿಐ(ಎಂ) ತನ್ನ ರಾಜಕೀಯ ನಿರ್ಣಯದಲ್ಲಿ “ನವ–ಫ್ಯಾಸಿಸ್ಟ್” ಎಂಬ ಶಬ್ದವನ್ನು ಬಳಸಿದ್ದು ಇದೇ ಮೊದಲು. 2018ರಲ್ಲಿ ನಡೆದ 22ನೇ ಮಹಾಧಿವೇಶನದ ನಿರ್ಣಯದಲ್ಲಿ ಸರ್ವಾಧಿಕಾರಿ ಮತ್ತು ಹಿಂದುತ್ವ ಕೋಮು ದಾಳಿಗಳು “ಹೊಮ್ಮುತ್ತಿರುವ ಫ್ಯಾಸಿಸ್ಟ್ ರೀತಿಯ ಪ್ರವೃತ್ತಿಗಳನ್ನು” (emerging fascistic trends) ಪ್ರದರ್ಶಿಸುತ್ತಿದೆ ಎನ್ನಲಾಗಿತ್ತು. 2022ರಲ್ಲಿ ನಡೆದ 23ನೇ ಮಹಾಧಿವೇಶನದಲ್ಲಿ ಮೋದಿ ಸರ್ಕಾರವು “ಆರ್‌ಎಸ್‌ಎಸ್‌ನ ಫ್ಯಾಸಿಸ್ಟ್ ರೀತಿಯ ಅಜೆಂಡಾ” (RSS’s fascistic agenda) ಜಾರಿ ಮಾಡುತ್ತಿದೆ ಎನ್ನಲಾಗಿತ್ತು. “ಫ್ಯಾಸಿಸ್ಟ್ ರೀತಿಯ” ಎಂಬುದರ ಬೆಳವಣಿಗೆಯ ಜೊತೆಯಲ್ಲೇ ಸಿಪಿಐ(ಎಂ) ಮೋದಿ ಆಡಳಿತವನ್ನು ವಿಶ್ಲೇಷಣೆ ಮಾಡುತ್ತಾ ಬರುತ್ತಿದೆ. ಹೀಗಿರುವಾಗ, ಸಿಪಿಐ(ಎಂ) ಮೇಲೆ ಇದುವರೆಗೂ ಇಲ್ಲದಿದ್ದ ಕಟುವಾದ ವಿಮರ್ಶೆಯನ್ನು ಮಾಡುತ್ತಿರುವುದೇಕೆ? “ನವ–ಫ್ಯಾಸಿಸ್ಟ್” ಲಕ್ಷಣಗಳೊಂದಿಗೆ ಎಂಬುದರಲ್ಲಿ

ಭಾರತದಲ್ಲಿ ನವ–ಫ್ಯಾಸಿಸಂನ್ನು ಆರ್‌ಎಸ್‌ಎಸ್ ಮತ್ತು ಅದರ ಹಿಂದುತ್ವ ಕೋಮುವಾದಿ ಸಿದ್ಧಾಂತದಿಂದ ರೂಪಿಸಲಾಗಿದೆ. ಹಿಂದುತ್ವ ಸಿದ್ಧಾಂತವು ನವ–ಫ್ಯಾಸಿಸ್ಟ್ ರೀತಿಯದ್ದೇ ಆಗಿದೆ. ಹೀಗಾಗಿಯೇ ಬಿಜೆಪಿ ಆಳ್ವಿಕೆಯಲ್ಲಿ ಆರ್‌ಎಸ್‌ಎಸ್‌ಗೆ ಅಧಿಕಾರದ ಸೂತ್ರಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ. ಹಿಂದುತ್ವ ಕೋಮುವಾದಿ ಸಿದ್ಧಾಂತ, ನವ–ಉದಾರವಾದಿ ಬಿಕ್ಕಟ್ಟು ಮತ್ತು ದೊಡ್ಡ ಬಂಡವಾಳದಾರರ ಹಿತಾಸಕ್ತಿಗಳ ರಕ್ಷಣೆ, ಇವೆಲ್ಲಕ್ಕೂ ಸರ್ವಾಧಿಕಾರದ ಹೇರಿಕೆಯ ಅನಿವಾರ್ಯತೆ ಹೆಚ್ಚಾಗುತ್ತದೆ. ಇವೆಲ್ಲವೂ ನವ–ಉದಾರವಾದಿ ಫ್ಯಾಸಿಸಂನ ಲಕ್ಷಣಗಳಾಗಿವೆ ಎಂದು ಸಿಪಿಐ(ಎಂ) ವಿವರಿಸುತ್ತದೆ.

‘ನವ’ ಎಂಬ ಶಬ್ದವನ್ನು ಮಾತ್ರವೇ ಸಿಪಿಐ(ಎಂ) ಮೊದಲ ಬಾರಿಗೆ ಬಳಸಿದೆ.

ನವ–ಫ್ಯಾಸಿಸಂ ಎಂಬ ಪದದ ಅರ್ಥವೇನು?

ನವ–ಫ್ಯಾಸಿಸಂ (Neo-Fascist) ಎಂಬ ಪದದ ಅರ್ಥವೇನು? ಸಿಪಿಐ(ಎಂ) ತನ್ನ ಟಿಪ್ಪಣಿಯಲ್ಲಿ ವಿವರಿಸಿದಂತೆ, ‘ನಿಯೋ’ ಎಂದರೆ ಹೊಸದು ಅಥವಾ ಹಳೆಯದಾದ ಒಂದರ ಸಮಕಾಲೀನ ಆವೃತ್ತಿ. ಯೂರೋಪಿನಲ್ಲಿ ಎರಡು ಮಹಾಯುದ್ಧಗಳ ನಡುವಿನ ಅವಧಿಯಲ್ಲಿ ಹುಟ್ಟಿ ಬೆಳೆದ, ಮುಸೋಲಿನಿ ನಾಯಕತ್ವದಲ್ಲಿ ಇಟಲಿ ಮತ್ತು ಹಿಟ್ಲರ್ ನಾಯಕತ್ವದಲ್ಲಿ ಜರ್ಮನಿಯಲ್ಲಿ ಇದ್ದಂತಹ ಕ್ಲಾಸಿಕಲ್ ಫ್ಯಾಸಿಸಂನ ವಿಶ್ಲೇಷಣೆಗಳಿಂದ ಪ್ರತ್ಯೇಕಿಸಲು ನವ–ಫ್ಯಾಸಿಸಂ ಎಂಬ ಪದವನ್ನು ಬಳಸಲಾಗಿದೆ.

ಕ್ಲಾಸಿಕಲ್ ಫ್ಯಾಸಿಸಂ ಎಂಬುದು, 1929 ಮತ್ತು 1933ರ ನಡುವಿನ ವಿಶ್ವ ಆರ್ಥಿಕ ಕುಸಿತಕ್ಕೆ ಕಾರಣವಾದ ವಿಶ್ವ ಬಂಡವಾಳಶಾಹಿ ಬಿಕ್ಕಟ್ಟಿನ ಅವಧಿಯಲ್ಲಿ ಮೂಡಿತ್ತು. ಅದು ಸಾಮ್ರಾಜ್ಯಶಾಹಿ ದೇಶಗಳ ನಡುವಿನ ವೈರುಧ್ಯಗಳು ತೀಕ್ಷ್ಣವಾಗುತ್ತಿದ್ದ ಅವಧಿ ಸಹ ಆಗಿತ್ತು. ಮೊದಲ ಮತ್ತು ಎರಡನೇ ಮಹಾಯುದ್ಧಗಳೂ ಸಹ ಸಾಮ್ರಾಜ್ಯಶಾಹಿ ವಿಶ್ವ ಬಂಡವಾಳಿಗರ ನಡುವಿನ ಸಂಘರ್ಷಗಳ ಪರಿಣಾಮವಾಗಿತ್ತು. ಜರ್ಮನಿ ಮತ್ತು ಇಟಲಿಗಳಲ್ಲಿ ಅಧಿಕಾರವನ್ನು ವಶಪಡಿಸಿಕೊಂಡ ನಂತರ ಫ್ಯಾಸಿಸ್ಟ್ ಶಕ್ತಿಗಳು ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನು ರದ್ದುಗೊಳಿಸಿದವು. ಶಸ್ತ್ರಾಸ್ತ್ರ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಆರ್ಥಿಕ ಬಿಕ್ಕಟ್ಟನ್ನು ನಿವಾರಿಸಲು ಯುದ್ಧವನ್ನು ಒಂದು ವಿಧಾನವಾಗಿ ಬಳಸಿಕೊಂಡವು. ಈ ದೇಶಗಳಲ್ಲಿನ ಏಕಸ್ವಾಮ್ಯ ಬಂಡವಾಳಶಾಹಿಗಳು ಫ್ಯಾಸಿಸ್ಟ್ ಶಕ್ತಿಗಳನ್ನು ಸಂಪೂರ್ಣವಾಗಿ ಬೆಂಬಲಿಸಿದರು. ಬಂಡವಾಳಶಾಹಿಗಳ ಲಾಭದ ಬಿಕ್ಕಟ್ಟನ್ನು ನಿವಾರಿಸಲು ಉಗ್ರ ಕ್ರಮಗಳನ್ನು ತೆಗೆದುಕೊಳ್ಳಲು ಫ್ಯಾಸಿಸ್ಟ್ ಶಕ್ತಿಗಳನ್ನು ಅವಲಂಬಿಸಿದ್ದರು.

ನವ–ಫ್ಯಾಸಿಸಂ ನವ–ಉದಾರವಾದದ ಬಿಕ್ಕಟ್ಟಿನ ಉತ್ಪನ್ನವಾಗಿದೆ ಮತ್ತು ಇದು ಜಾಗತಿಕ ವಿದ್ಯಮಾನವಾಗಿದೆ

ಪ್ರಸಕ್ತ ಜಗತ್ತಿನಾದ್ಯಂತ ಫ್ಯಾಸಿಸ್ಟಿಕ್ ಚಳುವಳಿಗಳು ಮೇಲುಗೈ ಪಡೆದುಕೊಂಡಿವೆ. ಯೂರೋಪಿಯನ್ ಯೂನಿಯನ್ ಚುನಾವಣೆಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿವೆ. ನವ–ಫ್ಯಾಸಿಸ್ಟ್ ಶಕ್ತಿಗಳು ವಿವಿಧ ದೇಶಗಳಲ್ಲಿ ಹೊರಹೊಮ್ಮಿವೆ ಮತ್ತು ಕೆಲವು ದೇಶಗಳಲ್ಲಿ ಅವು ಅಧಿಕಾರಕ್ಕೆ ಬಂದಿವೆ. ನವ–ಉದಾರವಾದಿ ಕಾಲಘಟ್ಟದ ಜಾಗತಿಕವಾದ ಇಂತಹ ಚಳುವಳಿಗಳನ್ನು ಉದಾರವಾದಿ ಮಾಧ್ಯಮವು ಫ್ಯಾಸಿಸ್ಟ್ ಎಂದು ಎಲ್ಲಿಯೂ ಕರೆದಿಲ್ಲ ಎಂಬುದು ಆಶ್ಚರ್ಯಕರ ಸಂಗತಿಯಾಗಿದೆ. ಹಾಗೆ ನೋಡಿದರೆ 1930ರ ದಶಕದಲ್ಲಿದ್ದ ಫ್ಯಾಸಿಸಂನ ಎಲ್ಲಾ ಮೂಲಭೂತ ಲಕ್ಷಣಗಳನ್ನು ಇವು ಪಡೆದುಕೊಂಡಿವೆ. ಈ ಬೆಳವಣಿಗೆಗಳನ್ನು ರಾಷ್ಟ್ರೀಯವಾದಿ, ಉಗ್ರ ರಾಷ್ಟ್ರೀಯವಾದಿ, ಬಲಪಂಥೀಯ, ಜನಪ್ರಿಯ ಇತ್ಯಾದಿ ಶಬ್ದಗಳಿಂದ ಕರೆದಿದೆ. ಜೊತೆಗೆ ಈ ಬೆಳವಣಿಗೆಗಳಿಗೆ ರಾಜಕೀಯ ಕಾರಣಗಳನ್ನು ಮಾತ್ರ ಗುರುತಿಸಿದೆ.

ಭಾರತದಲ್ಲೂ ಇಂತಹ ಬೆಳವಣಿಗೆಯನ್ನು ಕಾಣಬಹುದು. ಮೋದಿ ಅಥವಾ ಹಿಂದುತ್ವ ಕೋಮುವಾದದ ಬೆಳವಣಿಗೆಗೆ ಬಾಬ್ರಿ ಮಸೀದಿ ಧ್ವಂಸ, ಅದ್ವಾನಿ ರಥಯಾತ್ರೆ ಇಂತಹ ರಾಜಕೀಯ ಕಾರಣಗಳನ್ನು ಮಾತ್ರ ಗುರುತಿಸಲಾಗುತ್ತದೆ. ಆದರೆ ಇಂತಹ ಚಳುವಳಿಗಳು ಯಾಕೆ ಜಗತ್ತಿನಾದ್ಯಂತ ಬೆಳವಣಿಗೆಯಾಗುತ್ತವೆ ಎಂಬುದರ ಮೂಲ ಕಾರಣವನ್ನು ಗುರುತಿಸಲು ಹೋಗುವುದಿಲ್ಲ. ಇಟಾಲಿಯನ್ ಫ್ಯಾಸಿಸಂನ ಮುಂದುವರಿದ ಭಾಗವಾಗಿ ಮೆಲೋನಿ ಅಧಿಕಾರ ಹಿಡಿದಿರುವುದು, ಜರ್ಮನಿಯಲ್ಲಿ ಎಎಫ್‌ಡಿ ಹೆಚ್ಚು ಜನಪ್ರಿಯಗೊಳ್ಳುತ್ತಿರುವುದು, ಅಮೇರಿಕದಲ್ಲಿ ಟ್ರಂಪ್ ಅಧಿಕಾರಕ್ಕೆ ಬಂದಿರುವುದು, ಟರ್ಕಿಯಲ್ಲಿ ಎರ್ದೋಗನ್, ಇಂತಹ ಬೆಳವಣಿಗೆಗಳು ಬಿಡಿಬಿಡಿಯಾಗಿ ಸಂಭವಿಸುತ್ತಿರುವುದಲ್ಲ. ಹೀಗಾಗಿ ಭಾರತದಲ್ಲಿ ಮೋದಿಯ ಬೆಳವಣಿಗೆಯನ್ನು ಗಮನಿಸಬೇಕು.

ಫ್ಯಾಸಿಸಂ ಚಟುವಟಿಕೆಗಳಿಗೆ ಬಂಡವಾಳಗಾರರ ಬೆಂಬಲ

ಪ್ರತಿಯೊಂದು ದೇಶದೊಳಗಿನ ಬೆಳವಣಿಗೆಗೆ ಆಯಾ ದೇಶಗಳ ವಿಭಿನ್ನತೆಗಳು ಮತ್ತು ವಿಶಿಷ್ಟತೆಗಳು ಇವೆಯಾದರೂ, ಇವೆಲ್ಲ ಬೆಳವಣಿಗೆಗಳ ಹಿಂದಿನ ಕೆಲವು ಜಾಗತಿಕ ಅಂಶಗಳನ್ನು ಗುರುತಿಸಬೇಕು. ನವ–ಫ್ಯಾಸಿಸಂನ ಕೆಲವು ಅಂಶಗಳು ಕ್ಲಾಸಿಕಲ್ ಫ್ಯಾಸಿಸಂನ ರೀತಿಯಲ್ಲೇ ಇವೆ ಎಂಬುದನ್ನು ಸಿಪಿಐ(ಎಂ) ತನ್ನ ಟಿಪ್ಪಣಿಯಲ್ಲಿ ಗುರುತಿಸಿದೆ. ಅವುಗಳಲ್ಲಿ ಮುಖ್ಯವಾಗಿ, ಚಾರಿತ್ರಿಕವಾಗಿ ಅನ್ಯಾಯಗಳು ಮತ್ತು ತಪ್ಪುಗಳು ಸಂಭವಿಸಿವೆ ಎಂಬ ಗ್ರಹಿಕೆಯ ಆಧಾರದಲ್ಲಿ ಹುಟ್ಟು ಹಾಕಲಾದ ಉಗ್ರ–ರಾಷ್ಟ್ರೀಯತೆ. ಇದಕ್ಕಾಗಿ, ಜನಾಂಗೀಯ ಅಥವಾ ಧಾರ್ಮಿಕ ಅಲ್ಪಸಂಖ್ಯಾತರನ್ನು “ಅನ್ಯರು ಅಥವಾ ಹೊರಗಿನವರು” ಎಂಬಂತೆ ಬಿಂಬಿಸಿ ಅವರ ವಿರುದ್ಧ ದ್ವೇಷದ ಭಾವನೆಗಳನ್ನು ಬಡಿದೆಬ್ಬಿಸುತ್ತದೆ ಮತ್ತು ಎಲ್ಲ ರೀತಿಯ ದಾಳಿಗಳಿಗೆ ಗುರಿಯಾಗಿಸುತ್ತದೆ. ಇದರ ಮೂಲಕ ಬಹುಸಂಖ್ಯಾತ ಸಮುದಾಯಗಳನ್ನು ತನ್ನ ಸುತ್ತ ಅಣಿನೆರೆಸುತ್ತದೆ. ಒಂದು ಸರ್ವಾಧಿಕಾರಿ ಆಡಳಿತವು ಪ್ರಭುತ್ವವನ್ನು ದಮನಕಾರಿ ಅಸ್ತ್ರವಾಗಿ ಬಳಸುತ್ತದೆ, ಒಂದು ಫ್ಯಾಸಿಸ್ಟ್ ಆಡಳಿತವು ಪ್ರಭುತ್ವದ ದಮನದ ಜೊತೆಯಲ್ಲಿ ಬೀದಿ ಕಳ್ಳರನ್ನು, ಗೂಂಡಾಗಳನ್ನು, ಮೂರ್ಖರನ್ನು ದಮನದ ಅಸ್ತ್ರಗಳಾಗಿ ಬಳಸುತ್ತದೆ. ಉಗ್ರ–ರಾಷ್ಟ್ರೀಯ ಅಥವಾ ನವ–ಫ್ಯಾಸಿಸ್ಟ್ ಪಕ್ಷಗಳು ಅಥವಾ ಶಕ್ತಿಗಳು ದೊಡ್ಡ ಬಂಡವಾಳದಾರರ ಬೃಹತ್ ಪ್ರಮಾಣದ ಹಣಕಾಸಿನ ಬೆಂಬಲದ ನಂಟನ್ನು ಹೊಂದಿರುತ್ತವೆ. ಜರ್ಮನಿ, ಇಟಲಿ, ಜಪಾನ್ ನಂತಹ ದೇಶಗಳ ಏಕಸ್ವಾಮ್ಯ ಬಂಡವಾಳದಾರರಲ್ಲಿ ಹೊಸ ರೀತಿಯ ಬಂಡವಾಳದಾರರು ಫ್ಯಾಸಿಸಂಗೆ ಬೆಂಬಲ ಕೊಡುತ್ತಿದ್ದ ಹಾಗೆಯೇ ಭಾರತದಲ್ಲಿ ಈಗ ಹೊಸ ರೀತಿಯ ಬಂಡವಾಳದಾರರು (ಉದಾ: ಅದಾನಿ, ಅಂಬಾನಿ, ಇತ್ಯಾದಿ) ಫ್ಯಾಸಿಸಂ ಚಟುವಟಿಕೆಗಳಿಗೆ ಹೆಚ್ಚು ಬೆಂಬಲವನ್ನು ಕೊಡುತ್ತಿದ್ದಾರೆ.

ವ್ಯಕ್ತಿ ವೈಭವೀಕರಣ, ಭಕ್ತ ಗಣಗಳ ಸೃಷ್ಟಿ

ಫ್ಯಾಸಿಸಂನ ಮತ್ತೊಂದು ಲಕ್ಷಣವೆಂದರೆ, ವ್ಯಕ್ತಿ ವೈಭವೀಕರಣ. ಭಾರತದಲ್ಲಿ ಮೋದಿ ಭಕ್ತ ಗಣಗಳ ಸೃಷ್ಟಿ. ಇಂತಹ ಇನ್ನೂ ಹಲವು ಅಂಶಗಳು ಕ್ಲಾಸಿಕಲ್ ಫ್ಯಾಸಿಸಂ ರೀತಿಯಲ್ಲೇ ಇವೆ ಎಂಬುದನ್ನು ಸಿಪಿಐ(ಎಂ) ಗುರುತಿಸುತ್ತದೆ.

ಭಾರತದಲ್ಲಿ ನವ–ಫ್ಯಾಸಿಸಂನ್ನು ಆರ್‌ಎಸ್‌ಎಸ್ ಮತ್ತು ಅದರ ಹಿಂದುತ್ವ ಕೋಮುವಾದಿ ಸಿದ್ಧಾಂತದಿಂದ ರೂಪಿಸಲಾಗಿದೆ. ಹಿಂದುತ್ವ ಸಿದ್ಧಾಂತವು ನವ–ಫ್ಯಾಸಿಸ್ಟ್ ರೀತಿಯದ್ದೇ ಆಗಿದೆ. ಹೀಗಾಗಿಯೇ ಬಿಜೆಪಿ ಆಳ್ವಿಕೆಯಲ್ಲಿ ಆರ್‌ಎಸ್‌ಎಸ್‌ಗೆ ಅಧಿಕಾರದ ಸೂತ್ರಗಳನ್ನು ನಿರ್ವಹಣೆ ಮಾಡಲು ಸಾಧ್ಯವಾಗುತ್ತದೆ. ಹಿಂದುತ್ವ ಕೋಮುವಾದಿ ಸಿದ್ಧಾಂತ, ನವ–ಉದಾರವಾದಿ ಬಿಕ್ಕಟ್ಟು ಮತ್ತು ದೊಡ್ಡ ಬಂಡವಾಳದಾರರ ಹಿತಾಸಕ್ತಿಗಳ ರಕ್ಷಣೆ, ಇವೆಲ್ಲಕ್ಕೂ ಸರ್ವಾಧಿಕಾರದ ಹೇರಿಕೆಯ ಅನಿವಾರ್ಯತೆ ಹೆಚ್ಚಾಗುತ್ತದೆ. ಇವೆಲ್ಲವೂ ನವ–ಉದಾರವಾದಿ ಫ್ಯಾಸಿಸಂನ ಲಕ್ಷಣಗಳಾಗಿವೆ ಎಂದು ಸಿಪಿಐ(ಎಂ) ವಿವರಿಸುತ್ತದೆ. ಪುಟ 14 ಕ್ಕೆ

ವಕ್ಫ್ ತಿದ್ದುಪಡಿ ಕಾಯ್ದೆ ಹಿಂದಿರುವ ಹುನ್ನಾರಗಳು

ದೀರ್ಘಕಾಲದಿಂದ ಬಳಕೆ ಮಾಡುತ್ತಿರುವ ಸಾವಿರಾರು ವಕ್ಫ್ ಆಸ್ತಿಗಳನ್ನು ತಕ್ಷಣವೇ ನೋಂದಾಯಿಸಬೇಕೆಂದು ಒತ್ತಾಯಿಸುವ ಹೊಸ ಆದೇಶವು, ವಕ್ಫ್ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸರ್ಕಾರದ ರಹಸ್ಯ ಯೋಜನೆಯನ್ನು ಬಹಿರಂಗಪಡಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ವಕ್ಫ್ ಮಂಡಳಿಗಳು ಈಗ ಹೆಸರಿಗೆ ಮಾತ್ರ ಅಸ್ತಿತ್ವದಲ್ಲಿರುತ್ತವೆ; ವಕ್ಫ್ ಆಸ್ತಿಗಳ ಮೇಲಿನ ನಿಜವಾದ ನಿಯಂತ್ರಣ ನಾಗ್ಪುರದಲ್ಲಿರುವ ಆರೆಸ್ಸೆಸ್ ಪ್ರಧಾನ ಕಚೇರಿಯದ್ದಾಗಿರುತ್ತದೆ. ತಿದ್ದುಪಡಿ ಮಾಡಲಾದ ವಕ್ಫ್ ಕಾಯ್ದೆಯು ಬಿಜೆಪಿ ಮತ್ತು ಆರೆಸ್ಸೆಸ್ ಸಂಘ ಪರಿವಾರ ವಕ್ಫ್ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಕೋಮು ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಕಾನೂನು ನಿಬಂಧನೆಗಳನ್ನು ಒದಗಿಸುತ್ತದೆ. 2025ರ ವಕ್ಫ್ ತಿದ್ದುಪಡಿ ಕಾಯ್ದೆಯು ಸೃಷ್ಟಿಸಿರುವ ಪರಿಸ್ಥಿತಿ ಇದು.



ಸಿ.ಸಿದ್ದಯ್ಯ

ಹೊಸ ವಕ್ಫ್ (ತಿದ್ದುಪಡಿ) ಕಾಯ್ದೆ, 2025ರ ಕುರಿತು ದೇಶಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ. ಕೆಲವು ಭಾಗಗಳಲ್ಲಿ ಪ್ರತಿಭಟನೆಗಳು ತೀವ್ರ ಸ್ವರೂಪ ಪಡೆದುಕೊಂಡಿವೆ. ನರೇಂದ್ರ ಮೋದಿ ಸರ್ಕಾರದ ಮುಂದಿನ ಗುರಿ ಚರ್ಚ್‌ಗಳು, ಗುರುದ್ವಾರಗಳಿಗೆ ಸೇರಿದ ಭೂಮಿಯನ್ನು ಅತಿಕ್ರಮಿಸುವುದು ಎಂದು ಪ್ರತಿಪಕ್ಷಗಳು ಟೀಕಿಸುತ್ತಿವೆ. ಇದರಿಂದ ಕಳವಳಗೊಂಡಿರುವ ಬಿಜೆಪಿ ಮತ್ತು ಕೇಂದ್ರ ಸರ್ಕಾರ ವಕ್ಫ್ (ತಿದ್ದುಪಡಿ) ಕಾಯ್ದೆ, 2025ನ್ನು ಮುಸ್ಲಿಮರ ಅನುಕೂಲಕ್ಕಾಗಿಯೇ ತಂದಿರುವುದಾಗಿ ಹೇಳುತ್ತಿದ್ದಾರೆ. ಮಾತ್ರವಲ್ಲ, ಅದನ್ನು ವಿರೋಧಿಸುವವರು ಭೂ ಕಬಳಿಕೆದಾರರ ಬೆಂಬಲಕ್ಕೆ ನಿಂತಿದ್ದಾರೆ ಎಂಬಂತೆ ಅಪಪ್ರಚಾರ ಮಾಡುತ್ತಿದೆ. ತುಷ್ಟೀಕರಣ ರಾಜಕೀಯಕ್ಕಾಗಿಯೇ ಈ ಕಾಯ್ದೆಯ ಕುರಿತು ವಿರೋಧ ಪಕ್ಷಗಳು ವಿವಾದ ಸೃಷ್ಟಿಸುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಹಿಂದುತ್ವ ಕಾರ್ಯಸೂಚಿ

ಆರ್‌ಎಸ್‌ಎಸ್ ಸಿದ್ಧಾಂತವನ್ನು ರೂಪಿಸಿದ ಎಂ.ಎಸ್.ಗೋಲ್ವಾಲ್ಕರ್ ತಮ್ಮ 'ನಾವು ಮತ್ತು ನಮ್ಮ ಸೀಮಿತ ರಾಷ್ಟ್ರ' ಎಂಬ ಪುಸ್ತಕದಲ್ಲಿ ಹಿಂದುತ್ವ ರಾಜ್ಯದಲ್ಲಿ ಮುಸ್ಲಿಮರ ಸ್ಥಾನವನ್ನು ಮಂಡಿಸುತ್ತಾರೆ: "ಭಾರತದಲ್ಲಿ ವಿದೇಶಿಯರಾಗಿರುವವರಿಗೆ (ಮುಸ್ಲಿಮರು) ಕೇವಲ ಎರಡು ಮಾರ್ಗಗಳು ಮಾತ್ರ ತೆರೆದಿವೆ. ಒಂದು ರಾಷ್ಟ್ರೀಯ ಜನಾಂಗದೊಂದಿಗೆ (ಹಿಂದೂಗಳು) ಸಂಪೂರ್ಣವಾಗಿ ಸಂಯೋಜಿಸುವುದು ಮತ್ತು ಅವರ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದು. ಅಥವಾ, ರಾಷ್ಟ್ರೀಯ ಜನಾಂಗವು ಅವರನ್ನು ಅಸ್ತಿತ್ವದಲ್ಲಿರಲು ಅನುಮತಿಸುವವರೆಗೆ ಮತ್ತು ನಂತರ ರಾಷ್ಟ್ರೀಯ ಜನಾಂಗವು ಅವರನ್ನು ದೇಶವನ್ನು ತೊರೆಯುವಂತೆ ಹೇಳುವವರೆಗೆ ಅವರು ರಾಷ್ಟ್ರೀಯ ಜನಾಂಗದ ಕರುಣೆಯಿಂದ ಬದುಕಬೇಕು". ಈ ವಿಧಾನವನ್ನು ಆಧರಿಸಿ, ಬಿಜೆಪಿಯು ಹಿಂದುತ್ವ ಕಾರ್ಯಸೂಚಿಯನ್ನು ವೇಗವಾಗಿ ಜಾರಿಗೆ ತರುತ್ತಿದೆ. ಆ ಕಾರ್ಯಸೂಚಿಯಲ್ಲಿ ಒಂದು ವಕ್ಫ್ ಮಂಡಳಿ ತಿದ್ದುಪಡಿ ಕಾಯ್ದೆ, 2025. ಈ ಕಾನೂನು ಜಾತ್ಯತೀತತೆ ಮತ್ತು ಧಾರ್ಮಿಕ ಸೌಹಾರ್ದತೆಯ ಸಂರಕ್ಷಣೆಯ ಮೇಲೆ ಆಳವಾದ ಪರಿಣಾಮ ಬೀರುತ್ತದೆ.

ಭಾರತದಲ್ಲಿ ಮುಸ್ಲಿಮರ ಸ್ಥಿತಿಗತಿಯನ್ನು ಅಧ್ಯಯನ ಮಾಡಲು ನೇಮಿಸಲಾದ ರಾಜೇಂದ್ರ ಸಾಚಾರ್ ಸಮಿತಿಯು, "ಮುಸ್ಲಿಂ ವ್ಯಕ್ತಿಗಳು ವಕ್ಫ್ ಆಸ್ತಿಗಳನ್ನು ಅತಿಕ್ರಮಿಸುತ್ತಿದ್ದಾರೆ. ಇದನ್ನು ತಡೆಯಲು ಸರ್ಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಿ ಹೇಳಿದೆ. ವಕ್ಫ್ ಮಂಡಳಿಯ ಆಸ್ತಿಗಳನ್ನು ಅತಿಕ್ರಮಣಗಳಿಂದ ರಕ್ಷಿಸಲು ನಾವು ಈ ಕಾನೂನನ್ನು ಉತ್ತಮ ನಂಬಿಕೆಯಿಂದ ತರುತ್ತಿದ್ದೇವೆ" ಎಂದು ಬಿಜೆಪಿ ಕಥೆ ಹೇಳುತ್ತದೆ. ಆದರೆ ಅದೇ ಸಾಚಾರ್ ಸಮಿತಿಯು ಕೋಟ್ಯಂತರ ಮುಸ್ಲಿಂ ಜನರ ಜೀವನ ಪರಿಸ್ಥಿತಿ ಎಷ್ಟು ಕೆಟ್ಟದಾಗಿದೆ ಎಂಬುದರ ಬಗ್ಗೆ ವಿವರವಾಗಿ ಹೇಳಿತ್ತು ಎಂಬುದನ್ನು ಅನುಕೂಲಕರವಾಗಿ ಮರೆತುಬಿಟ್ಟಿತು.

1954ರ ವಕ್ಫ್ ಕಾಯ್ದೆಯನ್ನು 1995ರಲ್ಲಿ ಕಾಂಗ್ರೆಸ್ ಸರ್ಕಾರವು ಮುಸ್ಲಿಮರಿಗೆ ಅನುಕೂಲಕರವಾಗಿ ತಿದ್ದುಪಡಿ ಮಾಡಿದೆ ಮತ್ತು 2013ರಲ್ಲಿ ಅವುಗಳನ್ನು ಮತ್ತಷ್ಟು ಅನುಕೂಲಕರವಾಗಿ ಬದಲಾಯಿಸಿದೆ ಎಂಬುದು ಬಿಜೆಪಿ ಆರೋಪ. ಕೇಂದ್ರ ಸರ್ಕಾರಿ ಸಂಸ್ಥೆಯಾದ ಪ್ರೆಸ್ ಇನ್ಫರ್ಮೇಷನ್ ಬ್ಯೂರೋ (ಪಿಐಬಿ) ಸಿದ್ಧಪಡಿಸಿದ ಮಾಹಿತಿಯು ಸಹ, ಹಿಂದಿನ ಮಸೂದೆಯು ಮುಸ್ಲಿಮರ ಪರವಾಗಿತ್ತು ಎಂದು ಆರೋಪಿಸಿರುವುದು ಆಶ್ಚರ್ಯಕರವಾಗಿದೆ. ಕೇಂದ್ರ ಸರ್ಕಾರ ಮಾಡುವ ಈ ಆರೋಪದಲ್ಲಿಯೇ ಅವರ ನಿಜವಾದ ತಂತ್ರ ಏನೆಂಬುದು ಅರ್ಥವಾಗುತ್ತದೆ.

ಸಂವಿಧಾನದ ಅಡಿಯಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ಹಕ್ಕುಗಳಿವೆ

ವೈವಿಧ್ಯಮಯ ಧರ್ಮಗಳನ್ನು ಹೊಂದಿರುವ ಈ ವಿಶಾಲ ದೇಶದಲ್ಲಿ, ಅಲ್ಪಸಂಖ್ಯಾತರಿಗೆ ಸಂವಿಧಾನದ ಅಡಿಯಲ್ಲಿ ವಿಶೇಷ ಹಕ್ಕುಗಳಿವೆ. ಇದು ಪ್ರಜಾಪ್ರಭುತ್ವದ ಲಕ್ಷಣವೂ ಆಗಿದೆ. ಹೀಗಿರುವಾಗ, ಅವರ ಧಾರ್ಮಿಕ ವ್ಯವಹಾರಗಳಿಗೆ ಸಂಬಂಧಿಸಿದ ಕಾನೂನುಗಳು ಅವರಿಗೆ ಅನುಕೂಲಕರವಾಗಿಲ್ಲದೆ, ಅದಕ್ಕೆ ವಿರುದ್ಧವಾಗಿರಲು ಸಾಧ್ಯವಿಲ್ಲ. ಇದು ಯಾವ ರೀತಿಯಲ್ಲಿಯೂ ನ್ಯಾಯವಲ್ಲ. ಬಿಜೆಪಿ ಎಷ್ಟು ಅವಸರದಲ್ಲಿ ಇತ್ತೆಂದರೆ, ಲೋಕಸಭೆ ನಂತರ ರಾಜ್ಯ ಸಭೆಯಲ್ಲಿ ತೀವ್ರ ವಾಗ್ವಾದದ ನಡುವೆಯೇ ಬೆಳಗಿನ ಜಾವ ಎರಡೂವರೆ ಗಂಟೆಗೆ ಈ ಮಸೂದೆಗೆ ಅನುಮೋದನೆ ಪಡೆಯಿತು. ಅದಾದ ಬೆನ್ನಲ್ಲೇ ರಾಷ್ಟ್ರಪತಿಗಳ ಗೆಜೆಟ್ ಕೂಡ ಹೊರಬಿತ್ತು. ಈ ಕಾನೂನು ಏಪ್ರಿಲ್ 8 ರಿಂದ ಜಾರಿಗೆ ಬಂದಿದೆ. ನಿಜ ಹೇಳಬೇಕೆಂದರೆ, ಇಂದಿಗೂ ಅನೇಕ ವಿದ್ವಾಂಸರಿಗೂ ಕೂಡ ಈ ವಿಷಯದ ಕುರಿತು ಸಂಪೂರ್ಣ ಸ್ಪಷ್ಟತೆ ಬರಲಿಲ್ಲ. ಇದಕ್ಕೆ ಬಹಳ ಸಮಯ ಹಿಡಿಯಬಹುದು. ಆದರೆ ಅಷ್ಟರೊಳಗೆ ವಿವಾದಗಳು ಹೆಚ್ಚಾಗುವುದು, ಭುಗಿಲೇಳುವುದು ಅನಿವಾರ್ಯವೆಂಬಂತೆ ಕಾಣುತ್ತಿದೆ.

ಈ ನಡುವೆ, ವಕ್ಫ್ ಕಾಯ್ದೆಯ ಸಾಂವಿಧಾನಿಕ ಸಿಧುತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುತ್ತಿರುವ ಸುಪ್ರಿಂ ಕೋರ್ಟ್ ಏಪ್ರಿಲ್ 17ರಂದು, "ಬಳಕೆದಾರರಿಂದ ವಕ್ಫ್" ಸೇರಿದಂತೆ ಯಾವುದೇ ಆಸ್ತಿಗಳನ್ನು ಮೇ 5 ರವರೆಗೆ ಡಿನೋಟಿಫೈ ಮಾಡಲಾಗುವುದಿಲ್ಲ ಅಥವಾ ಕೇಂದ್ರ ವಕ್ಫ್ ಮಂಡಳಿ ಮತ್ತು ಮಂಡಳಿಗಳಿಗೆ ನೇಮಕಾತಿಗಳನ್ನು ಮಾಡಲಾಗುವುದಿಲ್ಲ ಎಂಬ ಭರವಸೆಯನ್ನು ದಾಖಲಿಸಿದೆ.

ಹಿಂದಿನ ಮತ್ತು ಹೊಸ ಕಾಯ್ದೆಗಳು ಏನು ಹೇಳುತ್ತವೆ?

ಮೂಲ 'ವಕ್ಫ್ ಕಾಯ್ದೆ' ಎಂಬುದನ್ನು 'ಏಕೀಕೃತ ವಕ್ಫ್ ನಿರ್ವಹಣೆ, ಸಬಲೀಕರಣ, ದಕ್ಷತೆ ಮತ್ತು ಅಭಿವೃದ್ಧಿ ಕಾಯ್ದೆ, 2025' (Unified Waqf Management, Empowerment, Efficiency, and Development Act, 2025) ಎಂದು ಬದಲಾಯಿಸಲಾಗಿದೆ. ದೇವಾಲಯದ ಭೂಮಿಗಳಂತಹ ವಿಷಯಗಳನ್ನು ಧಾರ್ಮಿಕ ದತ್ತಿ ಕಾಯ್ದೆಯಡಿ ನೋಡುತ್ತಾರೆ. ಆದರೆ ಈ ರೀತಿಯ ಪರಿಭಾಷೆಗಳು ಎಲ್ಲಿಯೂ ಕಂಡುಬರುವುದಿಲ್ಲ.

1) ವಕ್ಫ್ ರಚನೆ ಕುರಿತಂತೆ 1995ರ ವಕ್ಫ್ ಕಾಯ್ದೆಯಲ್ಲಿ 'ವಕ್ಫ್ ಅನ್ನು ಘೋಷಣೆ, ಬಳಕೆದಾರ ಅಥವಾ ದತ್ತಿ (ವಕ್ಫ್–ಅಲಾಲ್–ಔಲಾದ್) ಮೂಲಕ ರಚಿಸಬಹುದು.' ಎಂದು ಹೇಳಲಾಗಿತ್ತು.
   ಪ್ರಸ್ತುತ ಕಾಯ್ದೆಯಲ್ಲಿ, ಬಳಕೆದಾರರಿಂದ ವಕ್ಫ್ ಎಂಬುದನ್ನು ತೆಗೆದುಹಾಕುತ್ತದೆ ಮತ್ತು ಘೋಷಣೆ ಅಥವಾ ದತ್ತಿ ಮೂಲಕ ಮಾತ್ರ ರಚನೆಗೆ ಅವಕಾಶ ನೀಡುತ್ತದೆ. ದಾನಿಗಳು ಕನಿಷ್ಠ ಐದು ವರ್ಷಗಳ ಕಾಲ ಮುಸ್ಲಿಂ ಧರ್ಮವನ್ನು ಅನುಸರಿಸುತ್ತಿರಬೇಕು ಮತ್ತು ಆಸ್ತಿಯನ್ನು ಹೊಂದಿರಬೇಕು. ವಕ್ಫ್–ಅಲಾಲ್–ಔಲಾದ್ ಮಹಿಳಾ ಉತ್ತರಾಧಿಕಾರಿಗಳಿಗೆ ಪಿತ್ರಾರ್ಜಿತ ಹಕ್ಕುಗಳನ್ನು ನಿರಾಕರಿಸುವಂತಿಲ್ಲ.
2) ಹಿಂದಿನ ವಕ್ಫ್ ಕಾಯ್ದೆಯಲ್ಲಿ ಸರ್ಕಾರಿ ಆಸ್ತಿಯನ್ನು ವಕ್ಫ್ ಆಗಿಸಲು ಸ್ಪಷ್ಟ ನಿಬಂಧನೆ ಇರಲಿಲ್ಲ.
   ಪ್ರಸ್ತುತ ಕಾಯ್ದೆಯಲ್ಲಿ, ವಕ್ಫ್ ಎಂದು ಗುರುತಿಸಲಾದ ಯಾವುದೇ ಸರ್ಕಾರಿ ಆಸ್ತಿಯು ವಕ್ಫ್ ಆಗುವುದನ್ನು ನಿಲ್ಲಿಸುತ್ತದೆ. ಇದರ ಮಾಲೀಕತ್ವದ ವಿವಾದಗಳನ್ನು ಜಿಲ್ಲಾಧಿಕಾರಿ ಪರಿಹರಿಸುತ್ತಾರೆ, ಅವರು ರಾಜ್ಯ ಸರ್ಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ.
3) ಯಾವುದು ವಕ್ಫ್, ಯಾವುದು ಅಲ್ಲ ಎಂಬುದನ್ನು ನಿರ್ಧರಿಸುವ ಅಧಿಕಾರ ಈ ಹಿಂದೆ ಮಂಡಳಿಗೆ ಇತ್ತು.
   ಈಗ ಆ ನಿಬಂಧನೆಯನ್ನು ತೆಗೆದುಹಾಕಲಾಗಿದೆ.
4) ವಕ್ಫ್ ಗಳ ಸರ್ವೇ ನಡೆಸಲು ಆಯುಕ್ತರು ಮತ್ತು ಹೆಚ್ಚುವರಿ ಆಯುಕ್ತರನ್ನು ನಿಯೋಜಿಸಲಾಗಿತ್ತು.
   ಈಗ ರಾಜ್ಯ ಕಂದಾಯ ಕಾನೂನುಗಳ ಪ್ರಕಾರ ಸಮೀಕ್ಷೆಗಳನ್ನು ನಡೆಸಲು ಮತ್ತು ಬಾಕಿ ಇರುವ ಸಮೀಕ್ಷೆಗಳನ್ನು ಆದೇಶಿಸಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡುತ್ತದೆ.
5) ಹಿಂದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮತ್ತು ವಕ್ಫ್ ಮಂಡಳಿಗಳಿಗೆ ಸಲಹೆ ನೀಡಲು ಕೇಂದ್ರೀಯ ವಕ್ಫ್ ಕೌನ್ಸಿಲ್ ಅನ್ನು ರಚಿಸಲಾಗಿತ್ತು. ಕನಿಷ್ಠ ಇಬ್ಬರು ಮಹಿಳಾ ಸದಸ್ಯರು ಸೇರಿದಂತೆ ಕೇಂದ್ರ ವಕ್ಫ್ ಮಂಡಳಿಯ ಎಲ್ಲಾ ಸದಸ್ಯರು ಮುಸ್ಲಿಮರಾಗಿರಬೇಕು.
   ಈಗ, ಇಬ್ಬರು ಸದಸ್ಯರು ಮುಸ್ಲಿಮೇತರರಾಗಿರಬೇಕು. ಸಂಸದರು, ಮಾಜಿ ನ್ಯಾಯಾಧೀಶರು ಮತ್ತು ಕಾಯ್ದೆಯ ಪ್ರಕಾರ ಕೌನ್ಸಿಲ್‌ಗೆ ನೇಮಕಗೊಂಡ ಗಣ್ಯ ವ್ಯಕ್ತಿಗಳು ಮುಸ್ಲಿಮರಾಗಿರಬೇಕಾಗಿಲ್ಲ. ಮುಸ್ಲಿಂ ಸಂಘಟನೆಗಳ ಪ್ರತಿನಿಧಿಗಳು, ಇಸ್ಲಾಮಿಕ್ ಕಾನೂನಿನ ವಿದ್ವಾಂಸರು, ವಕ್ಫ್ ಮಂಡಳಿಗಳ ಅಧ್ಯಕ್ಷರು ಮುಸ್ಲಿಮರಾಗಿರಬೇಕು. ಮುಸ್ಲಿಂ ಸದಸ್ಯರಲ್ಲಿ ಇಬ್ಬರು ಸದಸ್ಯರು ಮಹಿಳೆಯರಾಗಿರಬೇಕು.
6) ಚುನಾಯಿತರಾದ ಇಬ್ಬರು ಮುಸ್ಲಿಂ ಸಂಸದರು, ಶಾಸಕರು ಮತ್ತು ಬಾರ್ ಕೌನ್ಸಿಲ್ ಸದಸ್ಯರು ರಾಜ್ಯಗಳ ವಕ್ಫ್ ಮಂಡಳಿಗಳ ಸದಸ್ಯರಾಗಿರಬೇಕು ಎಂದು ಈ ಹಿಂದೆ ಷರತ್ತು ವಿಧಿಸಲಾಗಿತ್ತು.
   ಈಗಿನ ಮಸೂದೆಯು ರಾಜ್ಯ ಸರ್ಕಾರವು ಪ್ರತಿ ಹಿನ್ನೆಲೆಯಿಂದ ಒಬ್ಬ ವ್ಯಕ್ತಿಯನ್ನು ಮಂಡಳಿಗೆ ನಾಮನಿರ್ದೇಶನ ಮಾಡಲು ಅಧಿಕಾರ ನೀಡುತ್ತದೆ. ಅವರು ಮುಸ್ಲಿಮರಾಗಿರಬೇಕಾಗಿಲ್ಲ. ಇಬ್ಬರು ಮುಸ್ಲಿಮೇತರ ಸದಸ್ಯರು, ಶಿಯಾಗಳು, ಸುನ್ನಿಗಳು ಮತ್ತು ಹಿಂದುಳಿದ ವರ್ಗಗಳ ಮುಸ್ಲಿಮರಿಂದ ಕನಿಷ್ಟ ಒಬ್ಬ ಸದಸ್ಯರು. ಬೊಹ್ರಾ ಮತ್ತು ಅಗಾಖಾನಿ ಸಮುದಾಯಗಳಿಂದ (ರಾಜ್ಯದಲ್ಲಿ ವಕ್ಫ್ ಇದ್ದರೆ) ತಲಾ ಒಬ್ಬ ಸದಸ್ಯರು. ಇಬ್ಬರು ಮುಸ್ಲಿಂ ಸದಸ್ಯರು ಮಹಿಳೆಯರಾಗಿರಬೇಕು.
7) ವಕ್ಫ್ ನ್ಯಾಯಮಂಡಳಿಯಲ್ಲಿ ಒಬ್ಬರು ನ್ಯಾಯಾಧೀಶರ (ವರ್ಗ–1, ಜಿಲ್ಲಾ, ಸೆಷನ್ಸ್ ಅಥವಾ ಸಿವಿಲ್ ನ್ಯಾಯಾಧೀಶರು) ಮೇಲ್ವಿಚಾರಣೆಯಲ್ಲಿ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಮುಸ್ಲಿಂ ಕಾನೂನಿನಲ್ಲಿ ಪರಿಣತರಾಗಿರಬೇಕು ಎಂದು ಹಿಂದಿನ ಕಾನೂನಿನಲ್ಲಿದ್ದರೆ,
   ಈಗ ತಿದ್ದುಪಡಿಯಲ್ಲಿ "ಮುಸ್ಲಿಂ ಕಾನೂನು ತಜ್ಞರು" ಎಂಬ ಪದವನ್ನು ತೆಗೆದುಹಾಕಲಾಗಿದೆ. ಬದಲಿಗೆ, ಪ್ರಸ್ತುತ ಅಥವಾ ಮಾಜಿ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರು ಅಧ್ಯಕ್ಷರಾಗಿದ್ದರೆ, ರಾಜ್ಯ ಸರ್ಕಾರದ ಪರವಾಗಿ ಪ್ರಸ್ತುತ ಅಥವಾ ಮಾಜಿ ಜಂಟಿ ಕಾರ್ಯದರ್ಶಿ ಇರುತ್ತಾರೆ.
8. ಹಳೆಯ ಕಾನೂನಿನಲ್ಲಿ, ನ್ಯಾಯಮಂಡಳಿಯ ನಿರ್ಧಾರವು ಅಂತಿಮವಾಗಿದೆ ಮತ್ತು ನ್ಯಾಯಾಲಯಗಳಲ್ಲಿ ಅದರ ನಿರ್ಧಾರಗಳ ವಿರುದ್ಧ ಮೇಲ್ಮನವಿಗಳನ್ನು ನಿಷೇಧಿಸಲಾಗಿದೆ. ವಿಶೇಷ ಸಂದರ್ಭಗಳಲ್ಲಿ ಹೈಕೋರ್ಟ್‌ಗಳು ಮಾತ್ರ ಮಧ್ಯಪ್ರವೇಶಿಸಬಹುದು ಎಂದು ಹೇಳಲಾಗಿತ್ತು.

ಪುಟ 10 ಕ್ಕೆ

ಆಮೇರಿಕಾ ಉಪಾಧ್ಯಕ್ಷ ವ್ಯಾನ್ಸ್ ಭಾರತ ಭೇಟಿ–ಹೋರಾಟಕ್ಕೆ CPIM ಬೆಂಬಲ

ಅಮೇರಿಕಾ ದೇಶದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಭಾರತ ಭೇಟಿಯನ್ನು ವಿರೋಧಿಸಿ, ಭಾರತವು ಮಾರಾಟಕ್ಕಿಲ್ಲ ಎಂಬ ಬಲವಾದ ಸಂದೇಶ ರವಾನಿಸಲು, ಏಪ್ರಿಲ್ 21, 2025 ರಂದು ಗ್ರಾಮಗಳಲ್ಲಿ, ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟಿಸಲು ಕರ್ನಾಟಕ ಪ್ರಾಂತ ರೈತ ಸಂಘ ಕರೆ ನೀಡಿದ್ದು, ಸಿಪಿಐ(ಎಂ) ರಾಜ್ಯ ಸಮಿತಿ ಬೆಂಬಲ ನೀಡಿದೆ.

ಡೊನಾಲ್ಡ್ ಟ್ರಂಪ್ ಭಾರತದ ವಿರುದ್ಧ ಸಾರಿರುವ ಸುಂಕ ಸಮರದ ಬೆದರಿಕೆ ಮೂಲಕ ಭಾರತದ ಕೃಷಿ, ಹೈನುಗಾರಿಕೆ, ಮೀನುಗಾರಿಕೆ, ಮಾರುಕಟ್ಟೆ, ಕೈಗಾರಿಕಾ ಬಿಡಿ ಉತ್ಪನ್ನಗಳನ್ನು ಆಮೇರಿಕಾ ದೇಶದ ಉತ್ಪನ್ನಗಳಿಗೆ ಸುಂಕ ರಹಿತವಾಗಿ ಮುಕ್ತಗೊಳಿಸುವಂತೆ ಒತ್ತಡ ಹಾಕುತ್ತಿದೆ. ಈ ಹಿನ್ನೆಲೆಯಲ್ಲಿ ಆಮೇರಿಕಾ ಉಪಾಧ್ಯಕ್ಷ ಭೇಟಿ ಮತ್ತು ವಾಣಿಜ್ಯ ಮಾತುಕತೆ ಭಾರತದ ಕೋಟ್ಯಾಂತರ ರೈತಾಪಿ ಸಮುದಾಯಕ್ಕೆ ಮರಣ ಶಾಸನವಾಗಲಿದೆ ಅದ್ದರಿಂದ ಈ ಭೇಟಿಗೆ ತೀವ್ರ ವಿರೋಧ ವ್ಯಕ್ತಪಡಿಸಿ ಟ್ರಂಪ್–ವಾನ್ಸ್ ಪ್ರತಿಕೃತಿ ದಹಿಸಿ ತೀವ್ರ ಪ್ರತಿಭಟನೆಗೆ ಕರೆ ನೀಡಿದೆ.

ದೇಶದಲ್ಲೇ ಎರಡನೆ ಅತಿ ದೊಡ್ಡ ಹಾಲು ಉತ್ಪಾದಕ ರಾಜ್ಯ ವಾಗಿರುವ ಕರ್ನಾಟಕದ ಸುಮಾರು ಹತ್ತಕ್ಕೂ ಹೆಚ್ಚು ಜಿಲ್ಲೆಗಳ ರೈತ ಕುಟುಂಬಗಳು ತಮ್ಮ ಜೀವನಾಧಾರಕ್ಕಾಗಿ ಹೈನುಗಾರಿಕೆ ಯನ್ನು ಅವಲಂಬಿಸಿವೆ, ತೊಗರಿ ಸೋಯಾಬೀನ್, ಬಟಾಣಿ ಮುಂತಾದ ದ್ವಿದಳ ಧಾನ್ಯಗಳು ಹಾಗೂ ಮೆಕ್ಕೆಜೋಳ, ಎಥೆನಾಲ್ ಕಲ್ಯಾಣ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಪ್ರಮುಖ ಬೆಳೆಗಳಾಗಿವೆ. ಅದೇ ರೀತಿ ಕರಾವಳಿ ಕರ್ನಾಟಕದ ಪ್ರಮುಖ ಜೀವನೋಪಾಯ ಮೀನುಗಾರಿಕೆ ಕೃಷಿಯನ್ನು ಅವಲಂಬಿಸಿದೆ. ಈ ಎಲ್ಲಾ ಕೃಷಿ ಉತ್ಪನ್ನಗಳು ಈಗಾಗಲೇ ಬೆಂಬಲ ಬೆಲೆ ಅಭಾವ ಮತ್ತು ಉತ್ಪಾದನಾ ವೆಚ್ಚದ ಹೆಚ್ಚಳದಿಂದ ಕಷ್ಟ ಹಾಗೂ ನಷ್ಟವನ್ನು ಅನುಭವಿಸುತ್ತಿವೆ. ಇಂತಹ ಸಂದರ್ಭದಲ್ಲಿ ಈ ವಲಯಗಳು ಸೇರಿದಂತೆ ವಿವಿಧ ರೀತಿಯ ತೋಟಾಗಾರಿಕೆ ಉತ್ಪನ್ನಗಳ ಸುಂಕ ರಹಿತ ಅಮದು ಈ ಎಲ್ಲಾ ರೈತರನ್ನು ಸಂಪೂರ್ಣವಾಗಿ ದಿವಾಳಿಯೆಬ್ಬಿಸಿ ರಾಜ್ಯದ ರೈತರನ್ನು ನಿರುದ್ಯೋಗ–ಸಾಲಭಾಧೆಗೆ ಸಿಲುಕಿಸಲಿದೆ. ವಿಶೇಷವಾಗಿ ರಾಜ್ಯದ ಹೈನುಗಾರಿಕೆಗೆ ಮತ್ತು ಕರ್ನಾಟಕ ಹಾಲು ಒಕ್ಕೂಟ (KMF) ಕ್ಕೆ ಈ ಅಮದು ಸುಂಕ ನಿರ್ಧಾರ ಶವಪಟ್ಟಿಗೆಗೆ ಹೊಡೆಯುವ ಕೊನೆ ಮೊಳೆ ಆಗಲಿದೆ ಹಾಗಾಗಿ ಯಾವುದೇ ಒತ್ತಡಕ್ಕೂ ಮಣಿಯದೇ ಹೈನುಗಾರಿಕೆ, ಮೀನುಗಾರಿಕೆ, ತೋಟಗಾರಿಕೆ ಸೇರಿದಂತೆ ಒಟ್ಟಾರೆ ಕೃಷಿಯನ್ನು ವಾಣಿಜ್ಯ ಮಾತುಕತೆಗಳಿಂದ ಹೊರಗಿಡಬೇಕು ಎಂದು ನರೇಂದ್ರ ಮೋದಿ ಸರ್ಕಾರವನ್ನು ಸಿಪಿಐ(ಎಂ) ಆಗ್ರಹಿಸಿದೆ.

ಆಮೇರಿಕಾದಲ್ಲಿ ಶೇಕಡಾ 70 ರಷ್ಟು ಮಾರುಕಟ್ಟೆ ಹೊಂದಿದ್ದ ಚೀನಾ, ಕೆನಡಾ, ಮೆಕ್ಸಿಕೋ ಮುಂತಾದ ದೇಶಗಳು ಆಮೇರಿಕಾದ ಸುಂಕ ಸಮರದ ಬೆದರಿಕೆಗೆ ಯಾವುದೇ ರೀತಿಯಲ್ಲಿ ಮಣಿಯದೇ ತಿರುಗೇಟು ನೀಡಿದೆ. ಆದರೆ ಆಮೇರಿಕಾದ ಜೊತೆ ವ್ಯಾಪಾರದ ಕೊರತೆ ಇರುವ ಭಾರತ ಇಂತಹ ದಿಟ್ಟ ನಿಲುವು ತೆಗೆದುಕೊಳ್ಳುವಲ್ಲಿ ವಿಫಲವಾಗಿದೆ. ಸ್ವತಃ ನರೇಂದ್ರ ಮೋದಿರವರ ಸಮ್ಮುಖದಲ್ಲೇ ಭಾರತವನ್ನು ಸುಂಕ ರಾಜ ಎಂದು ಡೋನಾಲ್ಡ್ ಟ್ರಂಪ್ ಅಣಕಿಸಿ ಸ್ವಾಭಿಮಾನಕ್ಕೆ ಧಕ್ಕೆ ತಂದಾಗಲೂ, ಭಾರತದ ವಲಸೆ ಕಾರ್ಮಿಕರನ್ನು ಕೋಳ ತೊಡಿಸಿ ಅಮಾನವೀಯವಾಗಿ ನಡೆಸಿಕೊಂಡಾಗಲೂ ಸೂಕ್ತ ಪ್ರತಿಭಟನೆ ವ್ಯಕ್ತಪಡಿಸಿಲ್ಲ. ಕೆಲವೇ ಕೆಲವು ದೊಡ್ಡ ಉದ್ಯಮಿಗಳ ರಫ್ತು ವ್ಯವಹಾರಕ್ಕಾಗಿ, ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗಾಗಿ ಕೋಟ್ಯಾಂತರ ರೈತರ ಜೀವನೋಪಾಯ ಸರ್ವ ನಾಶ ಮಾಡುವ ಮಾತುಕತೆಗಳು ಆಹಾರ ಭದ್ರತೆ, ಆಹಾರ ಸ್ವಾವಲಂಬನೆ ಅಂತಿಮವಾಗಿ ದೇಶದ ಸಾರ್ವಭೌಮತ್ವ ವನ್ನು ಅಪಾಯಕಾರಿ ಪರಿಸ್ಥಿತಿಗೆ ಕೊಂಡೊಯ್ಯಲಿದೆ. ವಾನ್ಸ್ ಭೇಟಿ ಹಿನ್ನೆಲೆಯಲ್ಲಿ ಆಮೇರಿಕಾ ವಾಣಿಜ್ಯ ಕಾರ್ಯದರ್ಶಿ ಹೋವರ್ಡ್ ಲುಟ್ನಿಕ್ ರವರು ಕೃಷಿ ಮಾರುಕಟ್ಟೆ ಮುಕ್ತಗೊಳಿಸುವುದೇ ಭಾರತದ ಮಾತುಕತೆಯಲ್ಲಿ ಪ್ರಮುಖ ಅಧ್ಯತಾ ವಿಷಯ ವಾಗಿದ್ದು ಯಾವುದೇ ಸುಂಕ ಹಾಗೂ ಇತರೆ ತಡೆಗಳನ್ನು ನಿವಾರಿಸಬೇಕು ಎಂದು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಅದ್ದರಿಂದ ಆಮೇರಿಕಾ ಉಪಾಧ್ಯಕ್ಷ ರ ಜೊತೆ ವಾಣಿಜ್ಯ ಮಾತುಕತೆಗಳನ್ನು ರದ್ದುಪಡಿಸಬೇಕು. ಆಮೇರಿಕಾದ ಸುಂಕ ಸಮರದಿಂದ ಉಂಟಾಗುವ ಪರಿಸ್ಥಿತಿಯನ್ನು ನಿಭಾಯಿಸಲು ಕೂಡಲೇ ಸಂಸತ್ತು ಹಾಗೂ ಶಾಸನಸಭೆಗಳಲ್ಲಿ ಚರ್ಚಿಸಿ ಸೂಕ್ತ ಮಾರ್ಗೋಪಾಯಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಆಗ್ರಹಿಸುತ್ತದೆ. ಮತ್ತು ಏಪ್ರಿಲ್ 21 ರಂದು ನಡೆಯಲಿರುವ ಪ್ರಾಂತ ರೈತ ಸಂಘದ ಪ್ರತಿಭಟನೆಗಳನ್ನು ಬೆಂಬಲಿಸಿದೆ.

ವಕ್ಫ್ ತಿದ್ದುಪಡಿ ಕಾಯ್ದೆ..... ಪುಟ 9 ರಿಂದ

ಹೊಸ ಕಾನೂನಿನಡಿಯಲ್ಲಿ ಯಾವುದೇ ವಿವಾದವಾದರೂ 90 ದಿನಗಳ ಒಳಗೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬಹುದು.

9. ಹಳೆಯ ಕಾನೂನಿನಲ್ಲಿ, ರಾಜ್ಯ ಸರ್ಕಾರಗಳು ಯಾವುದೇ ಸಮಯದಲ್ಲಿ ವಕ್ಫ್ ಖಾತೆಗಳನ್ನು ಆಡಿಟ್ ಮಾಡಬಹುದಿತ್ತು. ನೋಂದಣಿ, ವಕ್ಫ್ ಖಾತೆಗಳ ಪ್ರಕಟಣೆ ಮತ್ತು ವಕ್ಫ್ ಮಂಡಳಿಗಳ ಪ್ರಕ್ರಿಯೆಗಳ ಪ್ರಕಟಣೆಗೆ ಸಂಬಂಧಿಸಿದಂತೆ ನಿಯಮಗಳನ್ನು ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

   ಈ ಮಸೂದೆಯು ಕೇಂದ್ರ ಸರ್ಕಾರಕ್ಕೆ ಇವುಗಳನ್ನು ಸಿಎಜಿ (ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್) ಅಥವಾ ಗೊತ್ತುಪಡಿಸಿದ ಅಧಿಕಾರಿಯಿಂದ ಲೆಕ್ಕಪರಿಶೋಧನೆ ಮಾಡಲು ಅಧಿಕಾರ ನೀಡುತ್ತದೆ. ಇದು ಒಕ್ಕೂಟ ತತ್ವವನ್ನು ದುರ್ಬಲಗೊಳಿಸುವುದಲ್ಲದೆ, ಸಮಸ್ಯಾತ್ಮಕವಾಗುತ್ತದೆ.

10. ರಾಜ್ಯದ ಎಲ್ಲಾ ವಕ್ಫ್ ಆಸ್ತಿಗಳು ಅಥವಾ ವಕ್ಫ್ ಆದಾಯದಲ್ಲಿ ಶಿಯಾ ವಕ್ಫ್ ಶೇ. 15ಕ್ಕಿಂತ ಹೆಚ್ಚಿದ್ದರೆ, ಸುನ್ನಿ ಮತ್ತು ಶಿಯಾ ಪಂಗಡಗಳಿಗೆ ಪ್ರತ್ಯೇಕ ವಕ್ಫ್ ಮಂಡಳಿಗಳನ್ನು ರಚಿಸಬಹುದು ಎಂದು ಹೇಳಲಾಗಿತ್ತು.

    ಹೊಸ ಕಾನೂನಿನಲ್ಲಿ, ಬೋಹ್ರಾ ಮತ್ತು ಅಗಾಖಾನಿ ಪಂಗಡಗಳಿಗೆ, ಶಿಯಾ ಮತ್ತು ಸುನ್ನಿ ಪಂಗಡಗಳಿಗೆ ಪ್ರತ್ಯೇಕ ವಕ್ಫ್ ಮಂಡಳಿಗಳನ್ನು ಅನುಮತಿಸಲಾಗಿದೆ.

ವಾಸ್ತವದಲ್ಲಿ ಅವರ ಸಂಖ್ಯೆ ಅಷ್ಟು ದೊಡ್ಡದಲ್ಲ ಮತ್ತು ಅನಗತ್ಯ ವಿಭಜನೆಗಳನ್ನು ಸೃಷ್ಟಿಸಲು ಈ ನಿಬಂಧನೆಯನ್ನು ಪರಿಚಯಿಸಲಾಗಿದೆ ಎಂಬ ಟೀಕೆ ಇದೆ. ಬೊಹ್ರಾಗಳು ಮತ್ತು ಅಗಾಖಾನಿಗಳು ಶಿಯಾ ಪಂಥದಲ್ಲಿದ್ದಾರೆಂದು ಅವರನ್ನು ಪ್ರತ್ಯೇಕವಾಗಿ ನೋಡುವ ಮೂಲಕ ಬಿಜೆಪಿ ಮುಸ್ಲಿಂ ಸಮಾಜದಲ್ಲಿ ಒಡಕನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದೆ ಎಂದು ಕೆಲವರು ಆರೋಪಿಸುತ್ತಾರೆ.

ಪರಿಣಾಮಗಳೇನು?

ಹಿಂದಿನ ವಕ್ಫ್ ಕಾನೂನು ಇಸ್ಲಾಮಿಕ್ ಟ್ರಸ್ಟ್‌ಗಳಿಂದ ವಕ್ಫ್ ಆಸ್ತಿಗಳ ಸರಿಯಾದ ನಿರ್ವಹಣೆಗೆ ಅಗತ್ಯವಾದ ಕಾನೂನು ಅಂಶಗಳನ್ನು ಖಚಿತಪಡಿಸಿತು. ಇದು ವಕ್ಫ್ ಆಸ್ತಿಗಳನ್ನು ಸರಿಯಾಗಿ ನಿರ್ವಹಿಸಲು, ರಕ್ಷಿಸಲು ಮತ್ತು ಧಾರ್ಮಿಕ ದತ್ತಿ ಉದ್ದೇಶಗಳಿಗಾಗಿ ಅವುಗಳ ಬಳಕೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಕಾನೂನು ರಕ್ಷಣೆ ಮತ್ತು ಸೂಕ್ತ ಮಾರ್ಗಸೂಚಿಗಳನ್ನು ಒದಗಿಸಿತು. ಮತ್ತೊಂದೆಡೆ, ತಿದ್ದುಪಡಿ ಮಾಡಲಾದ ವಕ್ಫ್ ಕಾಯ್ದೆಯು ಬಿಜೆಪಿ ಮತ್ತು ಆರೆಸ್ಸೆಸ್ ಸಂಘ ಪರಿವಾರಗಳು ವಕ್ಫ್ ಆಸ್ತಿಗಳನ್ನು ವಶಪಡಿಸಿಕೊಳ್ಳಲು ಮತ್ತು ಕೋಮು ರಾಜಕೀಯದಲ್ಲಿ ತೊಡಗಿಸಿಕೊಳ್ಳಲು ಕಾನೂನು ನಿಬಂಧನೆಗಳನ್ನು ಒದಗಿಸುತ್ತದೆ.

ಯೋಗಿ ಅವರಂತವರೂ ವಕ್ಫ್ ಮಂಡಳಿಗಳಲ್ಲಿ ಕುಳಿತುಕೊಳ್ಳಬಹುದು

ಧಾರ್ಮಿಕ ನಂಬಿಕೆಗಳ ಆಧಾರದ ಮೇಲೆ ಇಸ್ಲಾಂನ ಪ್ರಮುಖ ನಿಯಮಗಳಲ್ಲಿ ಒಂದಾದ ಮುಸ್ಲಿಮೇತರರು ವಕ್ಫ್ ಆಸ್ತಿಗಳನ್ನು ನಿರ್ವಹಿಸುವಂತಿಲ್ಲ. ಎಲ್ಲರಿಗೂ ಅರ್ಥವಾಗುವ ಈ ನ್ಯಾಯಯುತ ನಿಯಮವನ್ನು ಬಿಜೆಪಿ ಸರ್ಕಾರ ಬದಲಾಯಿಸಿದೆ. ಹೊಸ ತಿದ್ದುಪಡಿಗಳ ಪ್ರಕಾರ, ಈಗ ಭಾರತದ ಅತಿದೊಡ್ಡ ಇಸ್ಲಾಮೋಫೋಬ್ ಗಳಲ್ಲಿ ಒಬ್ಬರಾದ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಅವರಂತಹ ವ್ಯಕ್ತಿಗಳು ಸಹ ವಕ್ಫ್ ಮಂಡಳಿಗಳಲ್ಲಿ ಕುಳಿತುಕೊಳ್ಳಲು ಸಾಧ್ಯವಾಗುತ್ತದೆ. ಇಂಥವರು ವಕ್ಫ್ ಆಸ್ತಿಯ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುವ ಸಾಧ್ಯತೆಯಿದೆ. ಈ ಅಂಶವು ಭಾರತೀಯ ಸಂವಿಧಾನವು ಖಾತರಿಪಡಿಸಿದ ಮುಸ್ಲಿಮರು ತಮ್ಮ ಧರ್ಮವನ್ನು ಆಚರಿಸುವ ಹಕ್ಕಿನ ಮೇಲೆ ನಡೆದ ಸ್ಪಷ್ಟ ದಾಳಿಯಾಗಿದೆ.

ಜಿಲ್ಲಾಡಳಿತ ಮತ್ತು ಕಂದಾಯ ಇಲಾಖೆಯು ಸರ್ವೆ, ಭೂ ವಿವಾದಗಳ ತನಿಖೆ ಮತ್ತು ವಕ್ಫ್ ಆಸ್ತಿಗಳ ಒಟ್ಟಾರೆ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುವ ಹೊಸ ವೈಶಿಷ್ಟ್ಯವು ಅನೇಕ ಪರಿಣಾಮಗಳನ್ನು ಬೀರುತ್ತದೆ. ವಾಸ್ತವದಲ್ಲಿ, ಜಿಲ್ಲಾಡಳಿತ, ರಾಜ್ಯಪಾಲರು ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಸೋಗಿನಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಮತ್ತು ಅದರ ಮಾತೃಸಂಸ್ಥೆ ಆರೆಸ್ಸೆಸ್ ಇನ್ನು ಮುಂದೆ ವಕ್ಫ್ ಆಸ್ತಿಗಳ ಬಗ್ಗೆ ನಿರ್ಧರಿಸಲಿವೆ ಎಂಬುದು ಸ್ಪಷ್ಟವಾಗಿದೆ. 30 ವರ್ಷಗಳಿಗೂ ಹೆಚ್ಚು ಕಾಲ ಅಯೋಧ್ಯೆ ಬಾಬರಿ ಮಸೀದಿ ನಾಟಕವನ್ನು ನೋಡುತ್ತಿರುವ ಯಾವುದೇ ಜಾತ್ಯತೀತ ಭಾರತೀಯ ನಾಗರಿಕನಿಗೆ ಅದರ ಪರಿಣಾಮಗಳು ತಿಳಿದಿರುತ್ತವೆ.

ವಿವಿಧ ವಿವಾದಗಳು ಮತ್ತು ಸಮಸ್ಯೆಗಳು ಉದ್ಭವಿಸುತ್ತವೆ

ಘೋಷಣೆಯ ಮೂಲಕ ವಕ್ಫ್ ಮತ್ತು ಬಳಕೆದಾರ ವರ್ಗಗಳ ಮೂಲಕ ವಕ್ಫ್ ಅನ್ನು ರದ್ದುಗೊಳಿಸುವುದರಿಂದ ವಿವಿಧ ವಿವಾದಗಳು ಮತ್ತು ಸಮಸ್ಯೆಗಳು ಉದ್ಭವಿಸುತ್ತವೆ. ಏಕೆಂದರೆ, ಮಸೀದಿಗಳು ಮತ್ತು ಸ್ಮಶಾನಗಳು ಸೇರಿದಂತೆ, ಧರ್ಮಕ್ಕೆ ಸಂಬಂಧಿಸಿದ ಸ್ಥಳಗಳು ಮತ್ತು ಆಸ್ತಿಗಳನ್ನು ವಕ್ಫ್ ಆಸ್ತಿಗಳೆಂದು ಔಪಚಾರಿಕವಾಗಿ ಘೋಷಿಸಲಾಗಿಲ್ಲವಾದರೂ, ಅವುಗಳನ್ನು ಘೋಷಣೆಯ ಮೂಲಕ ವಕ್ಫ್ ಮತ್ತು ಬಳಕೆದಾರರಿಂದ ವಕ್ಫ್ ಆಧಾರದ ಮೇಲೆ ವಕ್ಫ್ ಆಸ್ತಿಗಳಾಗಿ ಪರಿಗಣಿಸಲಾಗಿದೆ ಮತ್ತು ಬಳಸಲಾಗುತ್ತಿದೆ. ಆದರೆ ಹೊಸ ಕಾನೂನು ಇನ್ನು ಮುಂದೆ ಇವುಗಳನ್ನು ವಕ್ಫ್ ಆಸ್ತಿ ಎಂದು ಪರಿಗಣಿಸುವುದಿಲ್ಲ. ನೋಂದಾಯಿತ ಆಸ್ತಿಗಳನ್ನು ಮಾತ್ರ ವಕ್ಫ್ ಆಸ್ತಿಗಳೆಂದು ಪರಿಗಣಿಸಲಾಗುತ್ತದೆ ಎಂದು ಅದು ಹೇಳುತ್ತದೆ. ಈ ಕಾಯ್ದೆಯು ಬಿಜೆಪಿ, ಆರ್‌ಎಸ್‌ಎಸ್ ಮತ್ತು ಸಂಘ ಪರಿವಾರಗಳಿಗೆ ಪ್ರತಿಯೊಂದು ಮಸೀದಿ ಮತ್ತು ಪ್ರತಿಯೊಂದು ಇಸ್ಲಾಮಿಕ್ ಧಾರ್ಮಿಕ ಸ್ಥಳವನ್ನು ಗುರಿಯಾಗಿಸಿಕೊಂಡು ನ್ಯಾಯಾಲಯಗಳ ಮೂಲಕ ನಾಟಕಗಳನ್ನು ಪ್ರದರ್ಶಿಸಲು ಸುಲಭವಾಗಿಸುತ್ತದೆ. ದೇಶದಲ್ಲಿರುವ ಹೆಚ್ಚಿನ ವಕ್ಫ್ ಆಸ್ತಿಗಳನ್ನು ಮೌಖಿಕವಾಗಿ ಅಥವಾ ಬಳಕೆಯ ಮೂಲಕ ಘೋಷಿಸಲಾಗುತ್ತದೆ ಎಂಬುದನ್ನು ನಾವು ಗಮನಿಸಬೇಕು.

ದಾನಿಗಳಿಗೆ ಕಿರುಕುಳ ನೀಡಲು ಕಾನೂನುಬದ್ಧ ಅವಕಾಶ

ಒಬ್ಬ ವ್ಯಕ್ತಿಯು ಕನಿಷ್ಠ ಐದು ವರ್ಷಗಳಿಂದ ಇಸ್ಲಾಮಿಕ್ ಧರ್ಮವನ್ನು ಅನುಸರಿಸುತ್ತಿದ್ದೇನೆ ಎಂದು ಸಾಬೀತುಪಡಿಸಿದರೆ ಮಾತ್ರ ವಕ್ಫ್ ಆಸ್ತಿಗಳನ್ನು ದಾನ ಮಾಡಬಹುದು ಎಂದು ಹೇಳುವ ತಿದ್ದುಪಡಿ ಅತ್ಯಂತ ಕೆಟ್ಟದಾಗಿದೆ. ಈ ವಿಚಿತ್ರ ನಿಯಮವು, ಮತಾಂತರಗೊಂಡ ವ್ಯಕ್ತಿಯ ಧಾರ್ಮಿಕ ನಂಬಿಕೆಗಳನ್ನು ಪರೀಕ್ಷಿಸುವ ಹಕ್ಕನ್ನು ಬಿಜೆಪಿ ಸರ್ಕಾರಕ್ಕೆ ಯಾರು ನೀಡಿದರು ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ಈ ವೈಶಿಷ್ಟ್ಯವು ದಾನಿಗಳಿಗೆ ಕಿರುಕುಳ ನೀಡಲು ಕಾನೂನುಬದ್ಧವಾಗಿ ಅವಕಾಶ ನೀಡುತ್ತದೆ. ವಕ್ಫ್ ಸ್ವತ್ತುಗಳ ಸೃಷ್ಟಿಯನ್ನು ತಡೆಯಲು ಸರ್ಕಾರವು ಈ ವೈಶಿಷ್ಟ್ಯವನ್ನು ಬಳಸಬಹುದು. ಬಹಳ ಕಾಲದಿಂದಲೂ ವಕ್ಫ್ ಆಸ್ತಿಗಳ ಸೃಷ್ಟಿಗೆ ಮುಸ್ಲಿಮೇತರ ದಾನಿಗಳು ಸಹ ಕೊಡುಗೆ ನೀಡಿದ್ದಾರೆ. ಹೊಸ ವಕ್ಫ್ ತಿದ್ದುಪಡಿಗಳು ಈ ಪದ್ಧತಿಗಳನ್ನು ನಿಷೇಧಿಸುತ್ತವೆ, ಇದು ಧರ್ಮವನ್ನು ಮೀರಿದ ಸಹೋದರತ್ವದ ಅಭಿವ್ಯಕ್ತಿಯಾಗಿದೆ.

ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ಕರ್ನಾಟಕ ಮತ್ತು ಕೇರಳದಂತಹ ರಾಜ್ಯಗಳು ಅತಿ ಹೆಚ್ಚು ವಕ್ಫ್ ಆಸ್ತಿಗಳನ್ನು ಹೊಂದಿರುವ ರಾಜ್ಯಗಳಾಗಿವೆ. 2025ರ ವಕ್ಫ್ ಕಾಯ್ದೆಯು ಈ ರಾಜ್ಯಗಳಲ್ಲಿ ಸಂಘ ಪರಿವಾರಗಳ ಪ್ರಭಾವವನ್ನು ಹೆಚ್ಚಿಸುತ್ತದೆ. ದೀರ್ಘಕಾಲದಿಂದ ಬಳಸುತ್ತಿರುವ ಸಾವಿರಾರು ವಕ್ಫ್ ಆಸ್ತಿಗಳನ್ನು ತಕ್ಷಣವೇ ನೋಂದಾಯಿಸಬೇಕೆಂದು ಒತ್ತಾಯಿಸುವ ಹೊಸ ಆದೇಶವು, ವಕ್ಫ್ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸರ್ಕಾರದ ರಹಸ್ಯ ಯೋಜನೆಯನ್ನು ಬಹಿರಂಗಪಡಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ವಕ್ಫ್ ಮಂಡಳಿಗಳು ಈಗ ಹೆಸರಿಗೆ ಮಾತ್ರ ಅಸ್ತಿತ್ವದಲ್ಲಿರುತ್ತವೆ; ವಕ್ಫ್ ಆಸ್ತಿಗಳ ಮೇಲಿನ ನಿಜವಾದ ನಿಯಂತ್ರಣ ನಾಗ್ಪುರದಲ್ಲಿರುವ ಆರೆಸ್ಸೆಸ್ ಪ್ರಧಾನ ಕಚೇರಿಯದ್ದಾಗಿರುತ್ತದೆ. 2025ರ ವಕ್ಫ್ ತಿದ್ದುಪಡಿ ಕಾಯ್ದೆಯು ಸೃಷ್ಟಿಸಿರುವ ಪರಿಸ್ಥಿತಿ ಇದು.

ಸಂವಿಧಾನದ ಮೂಲ ರಚನೆಯ ಮೇಲೆ ದಾಳಿ

ಒಟ್ಟಾರೆಯಾಗಿ ಹೇಳುವುದಾದರೆ, ಈ ವಕ್ಫ್ ತಿದ್ದುಪಡಿ ಕಾಯ್ದೆಯು ಸಂವಿಧಾನದ ಮೂಲ ರಚನೆಯ ಮೇಲೆ ದಾಳಿ ಮಾಡುತ್ತದೆ. ಸಂವಿಧಾನವು ಅಲ್ಪಸಂಖ್ಯಾತರಿಗೆ ನೀಡಿರುವ ಹಕ್ಕುಗಳನ್ನು ಇದು ತೆಗೆದುಹಾಕುತ್ತದೆ. ಇದು ಮೂಲಭೂತ ಹಕ್ಕುಗಳ ಉಲ್ಲಂಘನೆಯೂ ಆಗಿದೆ. ಮುಸ್ಲಿಮರಿಗೆ ಸಂಬಂಧಿಸಿದ ವಕ್ಫ್ ಮಂಡಳಿಯಲ್ಲಿ ಮುಸ್ಲಿಮೇತರರಿಗೆ ಸ್ಥಾನಗಳನ್ನು ನೀಡುವ ಮೂಲಕ ಮುಸ್ಲಿಂ ಸಮುದಾಯದ ಹಕ್ಕುಗಳನ್ನು ದುರ್ಬಲಗೊಳಿಸುವುದು ಮತ್ತು ಅವರ ಸ್ವಂತ ಧಾರ್ಮಿಕ ವಿಷಯಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂತಹ ಅಪಾಯಕಾರಿ ಅಂಶಗಳಿವೆ. ಈ ಕಾಯ್ದೆಯು ಸಂವಿಧಾನದ 25, 26, 27, 28, 29 ಮತ್ತು 30ನೇ ವಿಧಿಗಳಿಗೆ ವಿರುದ್ಧವಾಗಿದೆ. ರಾಜ್ಯ ಪಟ್ಟಿಯ ಅಡಿಯಲ್ಲಿ ಬರುವ ಭೂಮಿಯ ವಿಷಯದಲ್ಲಿ ಕೇಂದ್ರವು ಮಧ್ಯಪ್ರವೇಶಿಸಲು ಅವಕಾಶ ನೀಡುತ್ತದೆ. ಸಾಂವಿಧಾನಿಕ ಏಕತೆಯ ಮನೋಭಾವಕ್ಕೆ ವಿರುದ್ಧವಾಗಿದೆ.

ಅಂಬೇಡ್ಕರ್ ಅವರಿಗೆ ಸಲ್ಲಿಸುವ ಗೌರವವೆಂದರೆ, ಜಾತ್ಯತೀತ ಸಂವಿಧಾನದ ರಕ್ಷಣೆಗೆ ಪಣತೊಡುವುದು

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ದೇಶಾದ್ಯಂತ ಆಚರಣೆ ಮಾಡುತ್ತಿರುವ ಸಂದರ್ಭದಲ್ಲಿಯೇ, ಸಂವಿಧಾನದ ಮೂಲಭೂತ ಅಂಶಗಳಾದ ಒಕ್ಕೂಟ ತತ್ವ, ಜಾತ್ಯತೀತತೆ, ಸಂಸದೀಯ ಪ್ರಜಾಪ್ರಭುತ್ವ ಮತ್ತು ನ್ಯಾಯಾಂಗದ ಸ್ವಾತಂತ್ರ್ಯವನ್ನು ಸಂರಕ್ಷಿಸುವ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿದೆ. ರಾಜ್ಯಪಾಲರ ಅಧಿಕಾರಗಳು, ವಕ್ಫ್ ಕಾಯ್ದೆ, 'ಒಂದು ದೇಶ, ಒಂದು ಚುನಾವಣೆ', ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರಗಳ ಪುನರ್ವಿಂಗಡಣೆ ಮುಂತಾದ ವಿಷಯಗಳ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಇದಕ್ಕೆ ಕಾರಣ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ. ಇವೆಲ್ಲವೂ ಸಂವಿಧಾನದ ಮೂಲಭೂತ ತತ್ವಗಳ ಮೇಲಿನ ದಾಳಿಯಾಗಿದೆ. ಮತ್ತೊಂದಡೆ, ಡಾ. ಅಂಬೇಡ್ಕರ್ ಅವರನ್ನು ಆರೆಸ್ಸೆಸ್–ಬಿಜೆಪಿ ತಮ್ಮ ಪರಂಪರೆಗೆ ಸೇರುವಂತೆ ಮಾಡಲು ಪ್ರಯತ್ನಿಸುತ್ತದೆ.

ಸಂವಿಧಾನದ ಮೂಲ ರಚನೆ

1973ರಲ್ಲಿ, ಭಾರತದ ಸುಪ್ರೀಂ ಕೋರ್ಟ್ ಕೇಶವಾನಂದ ಭಾರತಿ ವರ್ಸಸ್ ಸ್ಟೇಟ್ ಆಫ್ ಕೇರಳ ಪ್ರಕರಣದಲ್ಲಿ ಐತಿಹಾಸಿಕ ತೀರ್ಪು ನೀಡಿತು. ಸಂವಿಧಾನದ ಮೂಲ ರಚನೆಯನ್ನು ಬದಲಾಯಿಸುವ ಅಧಿಕಾರ ಸಂಸತ್ತಿಗೆ ಇಲ್ಲ ಎಂದು ಅದು ಹೇಳಿದೆ. ಸಂವಿಧಾನದ ಮೂಲ ಗುಣಲಕ್ಷಣಗಳೆಂದರೆ ಒಕ್ಕೂಟ ವ್ಯವಸ್ಥೆ, ಜಾತ್ಯತೀತತೆ, ಸಾಂವಿಧಾನಿಕ ಶ್ರೇಷ್ಠತೆ, ಸಂಸದೀಯ ಪ್ರಜಾಪ್ರಭುತ್ವ ಮತ್ತು ನ್ಯಾಯಾಂಗದ ಸ್ವಾತಂತ್ರ್ಯ. ಕಳೆದ ಹತ್ತು ವರ್ಷಗಳಿಂದ ನರೇಂದ್ರ ಮೋದಿ ಸರ್ಕಾರ ಸಂವಿಧಾನದ ಮೂಲ ರಚನೆಯನ್ನು ದುರ್ಬಲಗೊಳಿಸಲು ಪ್ರಯತ್ನಿಸುತ್ತಿದೆ.

ಒಕ್ಕೂಟ ತತ್ವದ ಉಲ್ಲಂಘನೆ

ಸಂವಿಧಾನದ 1ನೇ ವಿಧಿಯು ಭಾರತವನ್ನು 'ಯೂನಿಯನ್ ಆಫ್ ಸ್ಟೇಟ್ಸ್' (ರಾಜ್ಯಗಳ ಒಕ್ಕೂಟ) ಎಂದು ವ್ಯಾಖ್ಯಾನಿಸುತ್ತದೆ. ಕೇಂದ್ರದ ಜೊತೆಗೆ ರಾಜ್ಯಗಳಿಗೂ ಪ್ರಾಧಾನ್ಯತೆ ಇರಬೇಕು ಎಂದು ಅದು ಹೇಳಿದೆ. ಸಂವಿಧಾನದ ಏಳನೇ ಷೆಡ್ಯೂಲ್‌ನಲ್ಲಿ ಕೇಂದ್ರ ಪಟ್ಟಿ, ರಾಜ್ಯ ಪಟ್ಟಿ, ಜಂಟಿ ಪಟ್ಟಿಗಳಾಗಿ ಅಧಿಕಾರಗಳನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ವಿಂಗಡಿಸಲಾಗಿದೆ.

ಕೇಂದ್ರವು ಕಳೆದ ಹತ್ತು ವರ್ಷಗಳಿಂದ ರಾಜ್ಯಗಳ ಅಧಿಕಾರಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಿದೆ. ಜಿಎಸ್‌ಟಿ ಮೂಲಕ ರಾಜ್ಯಗಳ ಆರ್ಥಿಕ ಸಂಪನ್ಮೂಲಗಳು ಕೇಂದ್ರದ ಕೈಗೆ ಹೋಗಿವೆ. ಜಿಎಸ್‌ಟಿಯಿಂದಾಗಿ ರಾಜ್ಯಗಳು ರೂ.3 ಲಕ್ಷ ಕೋಟಿ ನಷ್ಟ ಹೊಂದಿವೆ. ಹಣಕಾಸು ಸಂಸ್ಥೆಗಳು ಮಾಡುವ ಶಿಫಾರಸುಗಳನ್ನು ಕೇಂದ್ರವು ತನ್ನ ಇಷ್ಟಾನುಸಾರ ಜಾರಿಗೊಳಿಸುತ್ತಿದೆ. ರಾಜ್ಯ ಪಟ್ಟಿಯೊಳಗೆ ಇರುವ ಕೃಷಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಕಾನೂನುಗಳನ್ನು ರಚಿಸುವುದು ಒಕ್ಕೂಟ ತತ್ವಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿವೆ. ಈ ಕಾನೂನುಗಳ ವಿರುದ್ಧ ರೈತರು 400 ದಿನಗಳಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದರು. ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಕೂಡಾ ರಾಜ್ಯಗಳೊಂದಿಗೆ ಸಮಾಲೋಚಿಸದೆ ಕೇಂದ್ರ ಸರ್ಕಾರ ಘೋಷಿಸಿದೆ.

ಒಕ್ಕೂಟ ತತ್ವಕ್ಕೆ ವಿರುದ್ಧವಾಗಿ, ಕೇರಳ, ತಮಿಳುನಾಡು ಮತ್ತು ಕರ್ನಾಟಕದಂತಹ ರಾಜ್ಯ ಸರ್ಕಾರಗಳಿಗೆ ಕೇಂದ್ರವು ತೊಂದರೆ ಕೊಡುತ್ತಿದೆ. ತಮಿಳುನಾಡು ರಾಜ್ಯಪಾಲ ಆರ್.ಎನ್. ರವಿ ಅನೇಕ ಮಸೂದೆಗಳಿಗೆ ಒಪ್ಪಿಗೆ ನೀಡಲು ನಿರಾಕರಿಸಿದ ಕಾರಣ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದು, ಸುಪ್ರೀಂ

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯನ್ನು ಪ್ರತಿ ವರ್ಷ ಏಪ್ರಿಲ್ 14ರಂದು ದೇಶಾದ್ಯಂತ ಆಚರಿಸಲಾಗುತ್ತಿದೆ. ವಿಚಿತ್ರವೆಂದರೆ, ಅಂದು ಸಂವಿಧಾನವನ್ನು ಒಪ್ಪದ, ಸಂವಿಧಾನದಲ್ಲಿ ಭಾರತೀಯ ಪಾತ್ರವಿಲ್ಲ, ಈ ಸಂವಿಧಾನ ಪಂಡಿತರಿಗೆ ಪ್ರಾಚೀನ ಭಾರತದ ಆಡಳಿತ ವ್ಯವಸ್ಥೆಗಳು, ಮನುಸ್ಮೃತಿಯಂತಹ ಪ್ರಾಚೀನ ಭಾರತೀಯ ಕಾನೂನು ಗ್ರಂಥಗಳ ಬಗ್ಗೆ ಏನೂ ತಿಳಿದಿಲ್ಲ ಎಂದು ಆರೋಪಿಸಿದ್ದ ಸಂಘಪರಿವಾರ ಕೂಡಾ ಅಂಬೇಡ್ಕರ್ ಅವರನ್ನು ಹೊಗಳುವ ನಾಟಕವಾಡುತ್ತಿದೆ. ಮತ್ತೊಂದೆಡೆ, ಸಂವಿಧಾನದಲ್ಲಿನ ಮೂಲಭೂತ ತತ್ವಗಳನ್ನು ನಾಶಮಾಡಲು ಕೇಂದ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವ ಆರೆಸ್ಸೆಸ್–ಬಿಜೆಪಿ ಹೊರಟಿದೆ. ಸಂಘಪರಿವಾರದ ಇಂತಹ ಕಪಟ ನಾಟಕಗಳ ಬಗ್ಗೆ ಎಚ್ಚರದಿಂದಿರುವುದು ಮತ್ತು ಜಾತ್ಯತೀತ ಸಂವಿಧಾನದ ರಕ್ಷಣೆಗೆ ಪಣತೊಡುವುದು ಅಂಬೇಡ್ಕರ್ ಅವರಿಗೆ ನಾವು ಸಲ್ಲಿಸುವ ಗೌರವವಾಗಿದೆ.

ಕೋರ್ಟ್ ನೀಡಿದ ತೀರ್ಪು ಕೇಂದ್ರ ಸರ್ಕಾರಕ್ಕೆ ಕಪಾಳಮೋಕ್ಷ ಮಾಡಿದಂತಾಗಿದೆ. ತಮಿಳುನಾಡು, ಕೇರಳ ಮತ್ತು ಕರ್ನಾಟಕ ಸರ್ಕಾರಗಳಿಗೆ ಹಣಕಾಸು ಮಂಜೂರಾತಿಯಲ್ಲಿಯೂ ಕೇಂದ್ರವು ತಾರತಮ್ಯ ಮಾಡುತ್ತಿದೆ. ಒಕ್ಕೂಟ ವ್ಯವಸ್ಥೆಯನ್ನು ಕಾಪಾಡಿಕೊಂಡರೆ ಮಾತ್ರ ದೇಶದ ಏಕತೆ ಮತ್ತು ಸಮಗ್ರತೆ ಮುಂದುವರಿಯುತ್ತದೆ.

ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ

ಭಾರತದ ಸಂವಿಧಾನವು ಜಾತ್ಯತೀತ ಸಂವಿಧಾನ. ಭಾರತದ ಎಲ್ಲಾ ಪ್ರಜೆಗಳಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿದೆ. ಸಂವಿಧಾನದ 25 ರಿಂದ 28ನೇ ವಿಧಿಗಳು ಧಾರ್ಮಿಕ ಸ್ವಾತಂತ್ರ್ಯಕ್ಕೆ ಆಧಾರವಾಗಿವೆ. ಸಂವಿಧಾನದ 29, 30 ನೇ ವಿಧಿಗಳು ಅಲ್ಪಸಂಖ್ಯಾತರಿಗೆ ಹಕ್ಕುಗಳನ್ನು ಒದಗಿಸುತ್ತವೆ. ಅಲ್ಪಸಂಖ್ಯಾತರಿಗೆ ತಮ್ಮ ಸಂಸ್ಕೃತಿ, ಭಾಷೆ, ಲಿಪಿ, ಶಿಕ್ಷಣ ಇತ್ಯಾದಿಗಳನ್ನು ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶವನ್ನು ಒದಗಿಸಿವೆ.

ಆದರೆ, ಇಂದು ಜಾತ್ಯತೀತತೆಗೆ ವ್ಯತಿರಿಕ್ತವಾಗಿ ಜನರ ನಡುವೆ ಧಾರ್ಮಿಕ ವಿಭಜನೆಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯುತ್ತಿವೆ. ಜಮ್ಮು ಕಾಶ್ಮೀರಕ್ಕೆ ವಿಶೇಷ ಹಕ್ಕುಗಳನ್ನು ನೀಡುವ 370ನೇ ವಿಧಿಯನ್ನು ರದ್ದುಪಡಿಸಿರುವುದು, ಧರ್ಮದ ಆಧಾರದ ಮೇಲೆ ಪೌರತ್ವ ನೀಡುವ 'ಪೌರತ್ವ ತಿದ್ದುಪಡಿ ಕಾಯ್ದೆ' (ಸಿಎಎ) ತರುವುದು ಧಾರ್ಮಿಕ ವಿಭಜನೆಯ ಉದ್ದೇಶದ ಭಾಗವಾಗಿವೆ. ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳ ಮೇಲಿನ ದಾಳಿಯ ಭಾಗವಾಗಿ, ಇತ್ತೀಚೆಗೆ 'ವಕ್ಫ್ ಮಸೂದೆ'ಗಳನ್ನು ಅಂಗೀಕರಿಸಿ ಅಲ್ಪಸಂಖ್ಯಾತರ ಭಾವನೆಗಳಿಗೆ ಧಕ್ಕೆಯುಂಟು ಮಾಡಿದೆ. ವಕ್ಫ್ ಕಾಯ್ದೆಗಳಿಗೆ ವಿರುದ್ಧವಾಗಿ ಈಗ ದೇಶಾದ್ಯಂತ ಪ್ರತಿಭಟನೆಗಳು, ಪ್ರದರ್ಶನಗಳು ನಡೆಯುತ್ತಿವೆ. ಗೋರಕ್ಷಕ ದಳಗಳ ಹೆಸರಿನಲ್ಲಿ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದಾಳಿಗಳು ನಡೆಯುತ್ತಿವೆ. ದೇಶಾದ್ಯಂತ ಧಾರ್ಮಿಕ ಭಾವನೆಗಳನ್ನು ಕೆರಳಿಸಲು ಮತ್ತು ಜನರಲ್ಲಿ ಕೋಮು ವಿಭಜನೆಗಳನ್ನು ಸೃಷ್ಟಿಸುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇತಿಹಾಸವನ್ನು ವಿರೂಪಗೊಳಿಸಿ ಧಾರ್ಮಿಕ ಸಿದ್ಧಾಂತದೊಂದಿಗೆ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ರಚಿಸುತ್ತಿದ್ದಾರೆ. ಚಲನಚಿತ್ರಗಳ ಮೂಲಕವೂ ಕೋಮುವಾದವನ್ನು ಪ್ರಚೋದಿಸುವ ಪ್ರಯತ್ನಗಳು ನಡೆಯುತ್ತಿವೆ. ಭಾರತಕ್ಕೆ ಜಾತ್ಯತೀತ ಸ್ವರೂಪವನ್ನು ನೀಡಿರುವ ಸಂವಿಧಾನವನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ.

'ಒಂದು ರಾಷ್ಟ್ರ, ಒಂದು ಚುನಾವಣೆ'

ನರೇಂದ್ರ ಮೋದಿ ಸರ್ಕಾರ 'ಒಂದು ರಾಷ್ಟ್ರ, ಒಂದು ಚುನಾವಣೆ'ಗಾಗಿ ಮಾಜಿ ರಾಷ್ಟ್ರಪತಿ ರಾಮ್‌ನಾಥ್ ಕೋವಿಂದ್ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಆ ಸಮಿತಿಯು 'ಒಂದುರಾಷ್ಟ್ರ, ಒಂದು ಚುನಾವಣೆ'ಗೆ ಶಿಫಾರಸು ಮಾಡಿತು.



'ಒಂದು ರಾಷ್ಟ್ರ, ಒಂದು ಧರ್ಮ, ಒಂದು ಭಾಷೆ, ಒಂದು ಸಂಸ್ಕೃತಿ, ಒಬ್ಬ ನಾಯಕ' ಎಂಬ ಅವರ ಘೋಷಣೆಯ ವಿಸ್ತರಣೆ ಇದಾಗಿದೆ. 'ಒಂದು ರಾಷ್ಟ್ರ, ಒಂದು ಚುನಾವಣೆ' ರಾಜಕೀಯ ಸರ್ವಾಧಿಕಾರಕ್ಕೆ ಕಾರಣವಾಗಬಹುದು ಎಂದು ಸಂವಿಧಾನ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ. ಭಾರತವು ಚಾರಿತ್ರಿಕವಾಗಿ ಬಹು–ಪಕ್ಷ ವಿಧಾನದಲ್ಲಿ ರೂಪುಗೊಂಡಿದೆ. ಕಳೆದ 5 ದಶಕಗಳಲ್ಲಿ ವಿಭಿನ್ನ ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬರುತ್ತಿವೆ. ಕೇಂದ್ರದಲ್ಲಿ ಒಂದು ಪಕ್ಷ ಅಧಿಕಾರದಲ್ಲಿದ್ದರೆ, ರಾಜ್ಯಗಳಲ್ಲಿ ವಿಭಿನ್ನ ಪಕ್ಷಗಳು, ವಿಶೇಷವಾಗಿ ಪ್ರಾದೇಶಿಕ ಪಕ್ಷಗಳು ಅಧಿಕಾರದಲ್ಲಿವೆ. 'ಒಂದು ರಾಷ್ಟ್ರ, ಒಂದು ಚುನಾವಣೆ' ಮಾದರಿಯು ಸಂವಿಧಾನದ ಎರಡು ಮೂಲಭೂತ ಲಕ್ಷಣಗಳನ್ನು (ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವ) ದುರ್ಬಲಗೊಳಿಸುತ್ತದೆ.

ಕ್ಷೇತ್ರ ಪುನರ್ವಿಂಗಡಣೆ ಪ್ರಕ್ರಿಯೆ

ಪ್ರಸ್ತುತ, ದೇಶದಲ್ಲಿ ಕ್ಷೇತ್ರ ಪುನರ್ವಿಂಗಡಣೆ ಪ್ರಕ್ರಿಯೆಯ ಕುರಿತು ಚರ್ಚೆ ನಡೆಯುತ್ತಿದೆ. 2026ರ ನಂತರ ನಡೆಯುವ ಮೊದಲ ಜನಗಣತಿಯ ನಂತರ ಲೋಕಸಭಾ ಕ್ಷೇತ್ರಗಳ ಸಂಖ್ಯೆಯನ್ನು ಜನಸಂಖ್ಯೆಯ ಆಧಾರದ ಮೇಲೆ ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. 1972ರಲ್ಲಿ, ಲೋಕಸಭಾ ಸ್ಥಾನಗಳ ಸಂಖ್ಯೆಯನ್ನು 543ಕ್ಕೆ ನಿಗದಿಪಡಿಸಲಾಯಿತು. ಅಂದಿನಿಂದ ಕ್ಷೇತ್ರಗಳ ಸಂಖ್ಯೆ ಹೆಚ್ಚಳವಾಗಿಲ್ಲ. ಕಳೆದ 5 ದಶಕಗಳಲ್ಲಿ ದಕ್ಷಿಣ ರಾಜ್ಯಗಳು ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿವೆ. ಶಿಕ್ಷಣ, ಸಾಕ್ಷರತೆ ಮತ್ತು ಬಡತನ ನಿವಾರಣೆಯಂತಹ ಕ್ಷೇತ್ರಗಳಲ್ಲಿ ದಕ್ಷಿಣ ರಾಜ್ಯಗಳಾದ ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ ಯಶಸ್ವಿಯಾಗಿವೆ. ಆದರೆ ಬಿಹಾರ, ಉತ್ತರ ಪ್ರದೇಶ, ರಾಜಸ್ಥಾನ, ಮಧ್ಯಪ್ರದೇಶ ಮತ್ತಿತರ ರಾಜ್ಯಗಳಲ್ಲಿ ಜನಸಂಖ್ಯಾ ಬೆಳವಣಿಗೆ ಹೆಚ್ಚಾಗಿಯೇ ಇದೆ. ಉತ್ತರ ಮತ್ತು ದಕ್ಷಿಣ ರಾಜ್ಯಗಳ ನಡುವೆ ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿ ಅಸಮಾನತೆಗಳು ಉಂಟಾಗಿವೆ.

ಈಗ, 2026ರಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಲೋಕಸಭಾ ಸ್ಥಾನಗಳನ್ನು ಹೆಚ್ಚಿಸಿದರೆ, ದಕ್ಷಿಣದ ರಾಜ್ಯಗಳು ಹಲವು ಪ್ರಾತಿನಿಧ್ಯವನ್ನು ಕಳೆದುಕೊಳ್ಳುತ್ತವೆ. ದಕ್ಷಿಣ ರಾಜ್ಯಗಳು ಜನಸಂಖ್ಯಾ ನಿಯಂತ್ರಣದಲ್ಲಿ ಸಾಧಿಸಿದ ಯಶಸ್ಸಿಗೆ ರಾಜಕೀಯವಾಗಿ ನಷ್ಟ ಅನುಭವಿಸಬೇಕಾಗುತ್ತದೆ. ಮತ್ತೊಂದಡೆ, ಹೆಚ್ಚಿನ ಜನಸಂಖ್ಯಾ ಬೆಳವಣಿಗೆಯ ದರವನ್ನು ಹೊಂದಿರುವ ರಾಜ್ಯಗಳು ಇದರ ಪ್ರಯೋಜನವನ್ನು ಪಡೆಯುತ್ತವೆ. ಒಟ್ಟಾರೆ ಸ್ಥಾನಗಳ ಸಂಖ್ಯೆಗಳನ್ನು ಹೆಚ್ಚಿಸಿದರೂ, ಸಂಪೂರ್ಣವಾಗಿ ಜನಸಂಖ್ಯೆ ಆಧಾರಿತ ವಿಧಾನವು ಉತ್ತರ ಪ್ರದೇಶದಂತಹ ರಾಜ್ಯಗಳಿಗೆ ಅಗತ್ಯಕ್ಕಿಂತ ಹೆಚ್ಚು ಅನುಕೂಲಕರವಾದ ಹಂಚಿಕೆಗಳಿಗೆ ಕಾರಣವಾಗುತ್ತದೆ. ಇದು ಸಮತ್ವಪೂರ್ಣ ಮತ್ತು ನ್ಯಾಯಯುತವಾದ ಒಕ್ಕೂಟ ತತ್ವಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಇದಕ್ಕೆ ಸ್ವೀಕಾರಾರ್ಹ ಪರಿಹಾರವನ್ನು ಕಂಡುಕೊಳ್ಳಲು ಮತ್ತು ಉತ್ತರ ಮತ್ತು ದಕ್ಷಿಣ ರಾಜ್ಯಗಳ ನಡುವೆ ರಾಜಕೀಯ ಸಮತೋಲನವನ್ನು ಸಾಧಿಸಲು ಪ್ರಯತ್ನಿಸಬೇಕು. ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯು ಸಮತ್ವ, ಒಕ್ಕೂಟ ವ್ಯವಸ್ಥೆ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಐಕ್ಯತೆಯ ತತ್ವಗಳನ್ನು ಎತ್ತಿಹಿಡಿಯುವಂತೆ ಭಾರತ ಸರ್ಕಾರವು ಎಲ್ಲಾ ರಾಜ್ಯಗಳೊಂದಿಗೆ ಸಮಗ್ರ ಸಮಾಲೋಚನೆಗಳನ್ನು ನಡೆಸಬೇಕು.

ಸಂವಿಧಾನಾತ್ಮಕ ವ್ಯವಸ್ಥೆಗಳ ಮೇಲೆ ಒತ್ತಡ

ಕಳೆದ ದಶಕದಲ್ಲಿ, ಸಾಂವಿಧಾನಿಕ ವ್ಯವಸ್ಥೆಗಳಾದ ನ್ಯಾಯಾಂಗ, ಕೇಂದ್ರ ಲೋಕಸೇವಾ ಆಯೋಗದಂತಹ ಸಂಸ್ಥೆಗಳು ಹಲವು ಒತ್ತಡಗಳನ್ನು ಎದುರಿಸುತ್ತಿವೆ. ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ 'ಕೊಲಿಜಿಯಂ' ಮೂಲಕ ನಡೆಯುತ್ತಿರುವ ನ್ಯಾಯಾಧೀಶರ ನೇಮಕಾತಿಯಲ್ಲಿ ಅನೇಕ ಲೋಪ ದೋಷಗಳು ಬಹಿರಂಗವಾಗುತ್ತಿವೆ. ತಮಗೆ ಇಷ್ಟವಾದವರನ್ನು ನ್ಯಾಯಾಧೀಶರನ್ನಾಗಿ ನೇಮಿಸುತ್ತಿದ್ದಾರೆ. ನಿವೃತ್ತ ನ್ಯಾಯಾಧೀಶರನ್ನು ಉನ್ನತ ಹುದ್ದೆಗಳಿಗೆ ನೇಮಿಸಲಾಗುತ್ತಿದೆ.

ನ್ಯಾಯಮೂರ್ತಿ ರಂಜನ್ ಗೊಗೊಯ್ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತರಾದ ಕೆಲವೇ ದಿನಗಳಲ್ಲಿ ಅವರು ರಾಜ್ಯಸಭೆಯ ಸದಸ್ಯರಾದರು. ಅವರ ವಿರುದ್ಧ ಹಲವು ಆರೋಪಗಳು ಕೇಳಿಬಂದಿವೆ. ಚುನಾವಣಾ ಆಯೋಗದ ಕಾರ್ಯವೈಖರಿಯ ವಿರುದ್ಧ ಹಲವು ಆರೋಪಗಳಿವೆ. ಚುನಾವಣಾ ಆಯೋಗವು ಸಾಂವಿಧಾನಿಕವಾಗಿ ಮತ್ತು ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು. ಆದರೆ ಕಳೆದ ಕೆಲವು ವರ್ಷಗಳಿಂದ ಚುನಾವಣಾ ಆಯೋಗವು ಕೇಂದ್ರ ಸರ್ಕಾರದ ಆದೇಶದ ಮೇರೆಗೆ ಕಾರ್ಯನಿರ್ವಹಿಸುತ್ತಿದೆ.

ಸಂವಿಧಾನದ ಪರಮಾಧಿಕಾರ ಇರಬೇಕು

ಭಾರತದಲ್ಲಿ ಸಂವಿಧಾನವೇ ಸರ್ವೋಚ್ಚವಾಗಿದೆ ಎಂದು ಮಿನರ್ವಾ ಮಿಲ್ಸ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ದೇಶದಲ್ಲಿ ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳು ಸಂವಿಧಾನದ ಚೌಕಟ್ಟಿನೊಳಗೆ ಕೆಲಸ ಮಾಡಬೇಕು. ಆದರೆ ಕಳೆದ ಕೆಲವು ವರ್ಷಗಳಿಂದ, ಸಂವಿಧಾನದ ತತ್ವಗಳು ಮತ್ತು ಆದರ್ಶಗಳನ್ನು ಆಡಳಿತವು ಉಲ್ಲಂಘಿಸುತ್ತಿದೆ. ಸಾಂವಿಧಾನಿಕ ಪರಮಾಧಿಕಾರವನ್ನು ಎತ್ತಿಹಿಡಿಯುವ ರೀತಿಯಲ್ಲಿ ಆಡಳಿತ ನಡೆಯಬೇಕಾದರೆ ನಾಗರಿಕ ಸಮಾಜದ ಒತ್ತಡ ಅಗತ್ಯ.

ಡಾ.ಅಂಬೇಡ್ಕರ್ ಅವರು ಸಂವಿಧಾನ ರಚನಾ ಸಮಯದಲ್ಲಿ 60 ದೇಶಗಳ ಸಂವಿಧಾನಗಳ ತುಲನಾತ್ಮಕ ಅಧ್ಯಯನ ಮಾಡಿದರು. ಅವುಗಳ ಪ್ರಮುಖ ಅಂಶಗಳನ್ನು ಭಾರತದ ಸಂವಿಧಾನದಲ್ಲಿ ಸೇರಿಸಲಾಗಿದೆ. ಕಳೆದ 75 ವರ್ಷಗಳಿಂದ ಸಂವಿಧಾನವು ಕಾಲದ ಪರೀಕ್ಷೆಯಲ್ಲಿ ಉತ್ತೀರ್ಣವಾಗಿದೆ. ಪ್ರಸ್ತುತ ಭಾರತದ ಸಂವಿಧಾನದ ಮೇಲೆ ನಡೆಯುತ್ತಿರುವ ದಾಳಿಗಳ ಹಿನ್ನೆಲೆಯಲ್ಲಿ, ಸಂವಿಧಾನದ ಮೂಲಭೂತ ಮತ್ತು ಜಾತ್ಯತೀತ ಸ್ವರೂಪವನ್ನು ರಕ್ಷಿಸುವುದು ಮತ್ತು ಸಂವಿಧಾನದ ಉದ್ದೇಶಗಳನ್ನು ಮುನ್ನಡೆಸುವುದು ಡಾ.ಅಂಬೇಡ್ಕರ್ ಅವರಿಗೆ ಭಾರತೀಯರು ಸಲ್ಲಿಸುವ ಗೌರವವಾಗಿದೆ.

–ಸಿಟಿ

ನವ–ಫ್ಯಾಸಿಸ್ಟ್ ಗುಣಲಕ್ಷಣಗಳ ಅಧಿಕೃತ ಆಗಮನದ ನಂತರ, ನಮ್ಮ ದೇಶದ ಕಾರ್ಮಿಕ ವರ್ಗವು ಇಲ್ಲಿಯವರೆಗೂ ನಡೆಸಿರುವ ಸಾರ್ವತ್ರಿಕ ಮುಷ್ಕರಗಳ ಸರಣಿಯಲ್ಲಿನ ಮತ್ತೊಂದು ಮುಷ್ಕರವೆಂದು ಇದನ್ನು ಪರಿಗಣಿಸಬಾರದು. ಈ ಮುಷ್ಕರವು ಕಾರ್ಮಿಕ ಸಂಹಿತೆಗಳ ಅನುಷ್ಠಾನವನ್ನು ತಡೆಯಲು ತೀವ್ರಗೊಂಡ ಪ್ರತಿಭಟನೆ ಮತ್ತು ಪ್ರತಿರೋಧದ ಹೋರಾಟಗಳ ಉನ್ನತ ಹಂತದ ಆರಂಭವೆಂದು ಅರ್ಥೈಸಿಕೊಳ್ಳಬೇಕು ಮತ್ತು ಆ ಪ್ರಕ್ರಿಯೆಯ ಮೂಲಕ ಆಡಳಿತ ವರ್ಗದ ಸಂಪೂರ್ಣ ಸರ್ವಾಧಿಕಾರಿ ಯೋಜನೆಯನ್ನು ಹಿಮ್ಮೆಟ್ಟಿಸಬೇಕು.

2025 ಮೇ 20 ರ ಸಾರ್ವತ್ರಿಕ ಮುಷ್ಕರ:
ಪ್ರತಿರೋಧದ ಹೋರಾಟ ಮತ್ತಷ್ಟು ಮುಗಿಲೆತ್ತರಕ್ಕೆ

ತಪನ್ ಸೇನ್, ಪ್ರಧಾನ ಕಾರ್ಯದರ್ಶಿ

ಸಮಕಾಲೀನ ಬಂಡವಾಳಶಾಹಿಯ ಆಳವಾಗುತ್ತಿರುವ ಗಂಭೀರ ಬಿಕ್ಕಟ್ಟಿನಿಂದ ಉದ್ಭವಿಸುತ್ತಿರುವ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಭಾರತೀಯ ಕಾರ್ಮಿಕ ಚಳುವಳಿಯು ಅಭೂತಪೂರ್ವ ಮತ್ತು ಅತ್ಯಂತ ಕ್ಲಿಷ್ಟ ಸನ್ನಿವೇಶವನ್ನು ಎದುರಿಸುತ್ತಿದೆ.

ಕೇಂದ್ರ ಆಡಳಿತ ವರ್ಗದ ಪ್ರತಿಕ್ರಿಯೆಯು ಕೂಡ ಈ ನಿಟ್ಟಿನಲ್ಲಿ ಹೆಚ್ಚು ಆಕ್ರಮಣಕಾರಿ ಮತ್ತು ಕ್ರೂರವಾದ ಸರ್ವಾಧಿಕಾರಿ ಧೋರಣೆ ಹೊಂದಿದೆ. ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ವ್ಯವಸ್ಥಿತವಾಗಿ ಕಸಿದುಕೊಳ್ಳಲಾಗುತ್ತಿದೆ. ಈ ನಿಟ್ಟಿನಲ್ಲಿ, ಅಸ್ತಿತ್ವದಲ್ಲಿರುವ ಪ್ರಜಾಪ್ರಭುತ್ವ ರಚನೆಯೊಳಗೆ ಜನರು ಸಾಮೂಹಿಕ ಹೋರಾಟಗಳಲ್ಲಿ ತೊಡಗಿಸಿಕೊಳ್ಳಬೇಕಾಗಿದೆ. ಕೆಲಸದ ಸ್ಥಳದಲ್ಲಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕ ವರ್ಗವನ್ನು ನಿಶ್ಯಸ್ತ್ರಗೊಳಿಸುವುದು, ನವ–ಫ್ಯಾಸಿಸ್ಟ್ ಗುಣಲಕ್ಷಣಗಳನ್ನು ಪ್ರದರ್ಶಿಸುವ ಬಿಜೆಪಿ ನೇತೃತ್ವದ ಎನ್‌ಡಿಎ ಆಡಳಿತದ ವಿಶಿಷ್ಟ ಲಕ್ಷಣವಾಗಿದೆ.

ಈ ಪ್ರಕ್ರಿಯೆಯ ಭಾಗವಾಗಿ, ಸರ್ಕಾರವು 29 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ, 4 ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತಂದಿದೆ. ಈ ಮೂಲಕ ಕಾರ್ಮಿಕ ವರ್ಗದ ಮೇಲೆ ವಾಸ್ತವವಾಗಿ ಗುಲಾಮಗಿರಿಯ ಪರಿಸ್ಥಿತಿಗಳನ್ನು ಹೇರುವ ಗುರಿಯನ್ನು ಹೊಂದಿದೆ.

ಹೊಂಚುಹಾಕಿ ಕಾರ್ಮಿಕರನ್ನು ಗುಲಾಮರನ್ನಾಗಿ ಮಾಡುವ, ಈ ಕ್ರಮಗಳು ಕಾರ್ಪೊರೇಟ್–ಕೋಮು ಪರಿಸರದ ಶಾಮೀಲುತನದ ವ್ಯವಸ್ಥೆಯ ಅಡಿಪಾಯವನ್ನು ರೂಪಿಸುತ್ತದೆ. ಮಾತ್ರವಲ್ಲದೆ, ಇದನ್ನು ಆರ್ಥಿಕ ನಿರ್ವಹಣೆ ಮತ್ತು ಸಾಮಾಜಿಕ ಆಡಳಿತ ಎರಡನ್ನೂ ಒಳಗೊಂಡಂತೆ, ಸಂಪೂರ್ಣ ಸರ್ವಾಧಿಕಾರಿ ವ್ಯವಸ್ಥೆಯನ್ನು ಶಾಶ್ವತವಾಗಿ ಜಾರಿಗೆ ತರಲು ಪ್ರಯತ್ನಿಸಲಾಗುತ್ತದೆ.

ಕಾರ್ಮಿಕ ಸಂಹಿತೆಗಳು ಆಡಳಿತ ಪ್ರಕ್ರಿಯೆಯಲ್ಲಿ ಸಂಪೂರ್ಣ ಸರ್ವಾಧಿಕಾರತ್ವವನ್ನು ಎಂಜಿನಿಯರಿಂಗ್ ಮಾಡುವ ಒಂದು ಭಾಗವಾಗಿತ್ತು. ಇವುಗಳನ್ನು 2019 ಮತ್ತು 2020 ರಲ್ಲಿ ಜಾರಿಗೆ ತರಲಾಯಿತು. ಕಾರ್ಮಿಕ ವರ್ಗದ ನಿರಂತರ ಹೋರಾಟಗಳು ಮತ್ತು ಕೆಲಸದ ಸ್ಥಳಗಳಲ್ಲಿ, ವಲಯಗಳು ಮತ್ತು ರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಹಂತಗಳಲ್ಲಿ ಕಾರ್ಮಿಕ ವರ್ಗದ ಪ್ರತಿರೋಧದ ಮೂಲಕ, ಇದರ ಅನುಷ್ಠಾನವನ್ನು 2025ರ ವರೆಗೆ ತಡೆಹಿಡಿಯಲಾಗಿತ್ತು.

ಇದರಿಂದ ಹತಾಶೆಗೊಂಡಿದ್ದ ಮೋದಿ ಆಡಳಿತವು, ತನ್ನ ಮೂರನೇ ಅವಧಿಯಲ್ಲಿ, ಬಹುಮತ ಕಡಿಮೆಯಾಗಿದ್ದರೂ ಸಹಾ, ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವಲ್ಲಿ ಹೆಜ್ಜೆ ಮುಂದಿಡಲು ಹೊಂಚು ರೂಪಿಸುತ್ತಿದೆ. ಹಾಗಾಗಿ, ಏಪ್ರಿಲ್ 2025ರೊಳಗೆ ಸಂಹಿತೆಗಳ ಅನುಷ್ಠಾನವನ್ನು ಪ್ರಕಟಿಸಿ, ಜಾರಿಗೆ ತರುವ ಗುರಿಯನ್ನು ಹೊಂದಿದೆ.

ಈ ಹಿನ್ನೆಲೆಯಲ್ಲಿ, ಕೇಂದ್ರ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರರ ಜಂಟಿ ವೇದಿಕೆ, ವಲಯ ಒಕ್ಕೂಟಗಳು, ದುಡಿಯುವ ಜನರ ಮೇಲೆ ವಾಸ್ತವ ಗುಲಾಮಗಿರಿಯ ಪರಿಸ್ಥಿತಿಗಳನ್ನು ಹೇರಲು ಹೊರಟಿರುವ ಮೋದಿ ಆಡಳಿತದ ದುಷ್ಟ ತಂತ್ರಗಳಿಗೆ ಪ್ರತಿಯಾಗಿ, ಭಾರತೀಯ ಕಾರ್ಮಿಕ ವರ್ಗವು ಪ್ರತಿರೋಧದ ಒಗ್ಗಟ್ಟಿನ ಹೋರಾಟವನ್ನು ಮತ್ತಷ್ಟು ಮುಗಿಲೆತ್ತರಕ್ಕೆ ಹೆಚ್ಚಿಸುವ ಮೂಲಕ ತೀವ್ರವಾಗಿ ಪ್ರತಿಕ್ರಿಯಿಸಲು ನಿರ್ಧರಿಸಿದೆ.

ಆ ಹಿನ್ನೆಲೆಯಲ್ಲಿ, ನವದೆಹಲಿಯಲ್ಲಿ ಮಾರ್ಚ್ 18, 2025ರಂದು ನಡೆದ ಕಾರ್ಮಿಕರ ರಾಷ್ಟ್ರೀಯ ಸಮಾವೇಶವು, ಮೇ 20, 2025ರಂದು ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ. ಇದು ಯುನೈಟೆಡ್ ಕಾರ್ಮಿಕ ವರ್ಗವು ಸಿದ್ಧಪಡಿಸಲಾಗುತ್ತಿರುವ ವಿಶಾಲವಾದ ಅಕ್ರಮಣಕಾರಿ ಹೋರಾಟದ ಭಾಗವಾಗಿದೆ.

ನಾವು ಸವಾಲುಗಳನ್ನು ಎದುರಿಸಬೇಕು ಮತ್ತು



ಮೆಟ್ಟಿ ನಿಲ್ಲಬೇಕು. ಈ ಸಾರ್ವತ್ರಿಕ ಕರೆಯನ್ನು ದೇಶದಾದ್ಯಂತ ಕೊಂಡಯ್ಯಬೇಕು. ದುಡಿಯುವ ಕಾರ್ಮಿಕ ವರ್ಗದ ದೃಢ ಸಂಕಲ್ಪವನ್ನು ಪ್ರದರ್ಶಿಸಿ ಬೃಹತ್ ಯಶಸ್ಸನ್ನು ಸಾಧಿಸಬೇಕು. ಆ ಮೂಲಕ ಮೋದಿ ಆಡಳಿತದ ಕಾರ್ಮಿಕ ಸಂಹಿತೆಯನ್ನು ಹಿಮ್ಮೆಟಿಸಬೇಕು.

ನವ ಉದಾರವಾದದ ವಿರುದ್ಧದ ಎಲ್ಲಾ ಪ್ರತಿರೋಧಗಳನ್ನು ನಿಗ್ರಹಿಸಲು, ಜನರ ಪ್ರಜಾಪ್ರಭುತ್ವ ಮತ್ತು ಸಾಂವಿಧಾನಿಕ ಹಕ್ಕುಗಳನ್ನು ನಿಗ್ರಹಿಸಲು ಆಡಳಿತದಲ್ಲಿ ಕಾರ್ಪೊರೇಟ್ ಕೋಮು ಸಂಬಂಧದ ಪ್ರಯತ್ನಗಳಿಗೆ ಕಾರ್ಮಿಕ ಸಂಹಿತೆಗಳ ಜಾರಿ ಅವಿಭಾಜ್ಯ ಅಂಗವಾಗಿದೆ. ನಮ್ಮ ನೈಸರ್ಗಿಕ ಮತ್ತು ಸಾರ್ವಜನಿಕ ಸಂಪನ್ಮೂಲಗಳ ಲೂಟಿ ಮತ್ತು ದೋಚುವ ಮೂಲಕ ತಮ್ಮ ಲಾಭವನ್ನು ಗರಿಷ್ಠಗೊಳಿಸಲು ಕಾರ್ಮಿಕರ ಕ್ರೂರ ಶೋಷಣೆಯನ್ನು ಸುಗಮಗೊಳಿಸುವ ಉದ್ದೇಶವನ್ನು ಕಾರ್ಮಿಕ ಸಂಹಿತೆ ಹೊಂದಿವೆ.

ಉದಾಹರಣೆಗೆ, ಇತ್ತೀಚಿನ ವರ್ಷಗಳಲ್ಲಿ, ಮೋದಿ ಸರ್ಕಾರವು ಬಾಯ್ಲರ್ ಕಾಯ್ದೆ, ಅರಣ್ಯ ಕಾಯ್ದೆ, ಚಹಾ ಕಾಯ್ದೆ, ರಬ್ಬರ್ ಕಾಯ್ದೆ, ಹಲವಾರು ಔಷಧೀಯ ವಲಯಕ್ಕೆ ಸಂಬಂಧಿಸಿದ ಶಾಸನಗಳು ಇತ್ಯಾದಿ ಸೇರಿದಂತೆ 41 ಕಾನೂನುಗಳ ಅಡಿಯಲ್ಲಿ ಕಾರ್ಪೊರೇಟ್‌ಗಳ 180 ಅಪರಾಧಗಳನ್ನು ಜನ್ ವಿಶ್ವಾಸ್ ಕಾಯ್ದೆಯ ನಿಬಂಧನೆಗಳ ಪ್ರಕಾರ ಅವರನ್ನು ಅಪರಾಧದಿಂದ ಮುಕ್ತಗೊಳಿಸಿದೆ. ಕಾರ್ಪೊರೇಟ್‌ಗಳು ಕಾನೂನುಗಳನ್ನು ಉಲ್ಲಂಘಿಸಿದ್ದ ಪಕ್ಷದಲ್ಲಿ, ಅವರಿಗೆ ಜೈಲು ಶಿಕ್ಷೆಯಾಗುತ್ತಿತ್ತು. ಅದನ್ನು ಹೊಸ ಶಾಸನಗಳನ್ನು ಜಾರಿ ಮಾಡುವ ಮೂಲಕ ಹಿಂತೆಗೆದುಕೊಳ್ಳಲಾಗಿದೆ. ಬದಲಿಗೆ, ಕೇವಲ ದಂಡ ಪಾವತಿಸುವುದಕ್ಕೆ ಮಾತ್ರ ಶಿಕ್ಷೆಯನ್ನು ಸೀಮಿತಗೊಳಿಸಲಾಗಿದೆ. ಇತ್ತೀಚಿನ ಕೇಂದ್ರ ಬಜೆಟ್‌ನಲ್ಲಿ 100ಕ್ಕೂ ಹೆಚ್ಚು ಅಪರಾಧಗಳನ್ನು ಶಿಕ್ಷೆಯಿಂದ ಮುಕ್ತಗೊಳಿಸಲಾಗಿದೆ. ಅಂದರೆ, ಕಾರ್ಮಿಕ ಕಾನೂನುಗಳನ್ನು ಉಲ್ಲಂಘನೆ ಮಾಡಿದ ಕಾರ್ಪೊರೇಟರ್‌ಗಳನ್ನು ಶಿಕ್ಷಾರ್ಹತೆಯಿಂದ ಮುಕ್ತಗೊಳಿಸಲು ನೀಡಿರುವ ನೇರ ಪರವಾನಗಿ ಇದಾಗಿದೆ. ಇದು ಕಾರ್ಮಿಕ ಕಾನೂನುಗಳ ಉಲ್ಲಂಘನೆ ಮಾತ್ರವಲ್ಲದೆ, ಬೇರೇನೂ ಅಲ್ಲ. ಶ್ರಮ ಸಮಾಧಾನ ಮತ್ತು ಶ್ರಮ ಸುವಿಧಾ ಪೋರ್ಟಲ್‌ಗಳು ದೂರು ಆಧಾರಿತ ತಪಾಸಣೆಯನ್ನು ಪ್ರಾಯೋಗಿಕವಾಗಿ ತೆಗೆದುಹಾಕಿ, ಕಾರ್ಪೋರೇಟ್‌ಗಳ ಅನುಕೂಲಕ್ಕಾಗಿ ಕಾರ್ಮಿಕ ಕಾನೂನುಗಳ ಉಲಂಘನೆ ಮಾಡಲಾಗಿದೆ ಎಂಬುದು ಇದರಿಂದ ಸ್ಪಷ್ಟಗೊಳ್ಳುತ್ತದೆ. ಇದು ಮೋದಿ ಆಡಳಿತ ಮತ್ತು ಕಾರ್ಪೊರೇಟ್‌ಗಳ ನಡುವಿನ ಶಾಮೀಲು ಅಥವಾ ಕ್ರೋನಿ ಕ್ಯಾಪಿಟಲಿಸಂ ನೀತಿಗಳ ಭಾಗವಾಗಿದೆ.

ಮತ್ತೊಂದೆಡೆ, ಕಾರ್ಮಿಕರು ತಮ್ಮ ಶ್ರಮಶಕ್ತಿಯ ಮೂಲಕ ಗಳಿಸಿಕೊಂಡಿರುವ ಹಕ್ಕುಗಳನ್ನು ಪ್ರತಿಪಾದಿಸಲು, ಕಾರ್ಮಿಕರು ಮಾಡುವ ಸಾಮೂಹಿಕ ಹೋರಾಟಗಳು, ಪ್ರತಿರೋಧಗಳಂತಹ ಕ್ರಮಗಳನ್ನು ಅಪರಾಧೀಕರಿಸಲಾಗುತ್ತಿದೆ.

ಎಷ್ಟರಮಟ್ಟಿಗೆ ಎಂದರೆ, ಕಾರ್ಮಿಕರು ಮತ್ತು ಅವರ ಸಂಘಗಳು ಸಾಮೂಹಿಕವಾಗಿ ದೂರು ನೀಡುವುದನ್ನು ಬಿಎನ್‌ಎಸ್ (ಭಾರತೀಯ ನ್ಯಾಯ ಸಂಹಿತಾ) ಸೆಕ್ಷನ್ 111 ರ ಅಡಿಯಲ್ಲಿ "ಸಂಘಟಿತ ಅಪರಾಧ" ಎಂದು ವ್ಯಾಖ್ಯಾನಿಸಲು ಪ್ರಯತ್ನಿಸಲಾಗುತ್ತಿದೆ. ಇದು ಜಾಮೀನುರಹಿತ ಜೈಲು ಶಿಕ್ಷೆ ಸೇರಿದಂತೆ ಪೊಲೀಸ್ ಕ್ರಮಕ್ಕೆ ಕಾರಣವಾಗುತ್ತದೆ. ಈಗಾಗಲೇ ಹಲವಾರು ರಾಜ್ಯಗಳಲ್ಲಿ ಟ್ರೇಡ್ ಯೂನಿಯನ್ ನಾಯಕರು ಕಾರ್ಮಿಕರ ಕುಂದುಕೊರತೆಗಳನ್ನು ಆಡಳಿತ ಮಂಡಳಿ ಅಥವಾ ಕಾರ್ಮಿಕ ಇಲಾಖೆಗೆ ಪ್ರತಿನಿಧಿಸಿದ್ದಕ್ಕಾಗಿ ಆರೋಪ ಎಂದು ಪರಿಗಣಿಸಲಾಗುತ್ತಿದೆ. ಕಾರ್ಮಿಕ ಸಂಹಿತೆಗಳನ್ನು ಜಾರಿಗೆ ತರುವ ಮೊದಲೇ, ಗೇಟ್ ಸಭೆಗಳು, ಇಲಾಖಾ ಸಭೆಗಳು, ಕರಪತ್ರಗಳ ವಿತರಣೆ, ಜ್ಞಾಪಕ ಪತ್ರ', ಮನವಿ ಪತ್ರಗಳನ್ನು ಸಲ್ಲಿಸುವುದು ಮುಂತಾದ ಹಲವಾರು ದಿನ ನಿತ್ಯದ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು, ವಿಶೇಷವಾಗಿ ಸರ್ಕಾರಿ ಸಂಸ್ಥೆಗಳು/ಇಲಾಖೆಗಳಲ್ಲಿ, ವಾಸ್ತವಿಕವಾಗಿ ನಿಷೇಧಿಸಲಾಗಿದೆ. ಇವು ಕಾರ್ಮಿಕರಲ್ಲಿ ಭಯದ ವಾತಾವರಣವನ್ನು ಸೃಷ್ಟಿಸುವ ಉದ್ದೇಶವನ್ನು ಹೊಂದಿವೆ.

ಸಂಘಟಿತ ಮತ್ತು ಅಸಂಘಟಿತ ವಲಯಗಳಲ್ಲಿನ ಉದ್ಯೋಗ ಸಂಬಂಧಗಳನ್ನು ದುರ್ಬಲ ಮತ್ತು ಅನಿಶ್ಚಿತ ಉದ್ಯೋಗವನ್ನು ಉತ್ತೇಜಿಸಲು ಪುನರ್ರಚಿಸಲಾಗುತ್ತಿದೆ. ಇದು ಕೇವಲ ಕಾರ್ಮಿಕ ವೆಚ್ಚವನ್ನು ಕಡಿಮೆ ಮಾಡುವುದು ಮಾತ್ರವಲ್ಲದೆ, ಮುಖ್ಯವಾಗಿ ಕಾರ್ಮಿಕ ಸಂಘಗಳನ್ನು ದುರ್ಬಲಗೊಳಿಸುವುದು ಮತ್ತು ನಿರ್ಮೂಲನೆ ಮಾಡುವುದು ಇವರ ಮೂಲ ಉದ್ದೇಶಗಳಾಗಿವೆ. ಈ ಪ್ರಕ್ರಿಯೆಯನ್ನು ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸುವ ಮೂಲಕ ಸುಗಮಗೊಳಿಸುತ್ತವೆ. ಶಾಶ್ವತ ಉದ್ಯೋಗಗಳು ಶಾಶ್ವತವಾಗಿ ಮುಚ್ಚಲ್ಪಡುತ್ತಿವೆ. ಸಾಮೂಹಿಕ ಹೊರಗುತ್ತಿಗೆ, ಅಪ್ರೆಂಟಿಸ್‌ಗಳು, ತರಬೇತಿದಾರರು, ಇಂಟರ್ನ್‌ಗಳು ಇತ್ಯಾದಿಗಳು ಇಂದಿನ ನೇಮಕಾತಿಯ ಕ್ರಮಗಳಾಗಿವೆ. ಕಾರ್ಮಿಕ ಕಾನೂನುಗಳ ವ್ಯಾಪ್ತಿಯಿಂದ ಕಾರ್ಮಿಕರನ್ನು ಹೊರಗಿಡಲು ನವೀನ ಪರಿಭಾಷೆಯನ್ನು ಕಾರ್ಮಿಕ ಸಂಹಿತೆಯ ಮೂಲಕ ಬಳಸಲಾಗುತ್ತದೆ.

ಆರ್ಥಿಕ ನಿರ್ವಹಣೆ, ರಾಜಕೀಯ ಆಡಳಿತದ ನಿರ್ವಹಣೆ ಮತ್ತು ಸಮಾಜದ ಮೇಲೆ ವಿಷಕಾರಿ–ವಿಭಜನಾ ಕುತಂತ್ರಗಳಲ್ಲಿ ಅವರ ವಿಕೃತ ಅಪರಾಧವನ್ನು ಯಾವುದೇ ಅಡೆತಡೆಗಳಿಲ್ಲದೆ ಸಾಗಿಸಲು ಕಾರ್ಮಿಕ ಸಂಹಿತೆಗಳ ಅನುಷ್ಠಾನವನ್ನು ಸುಗಮಗೊಳಿಸಲು ಬಂಡವಾಳಶಾಹಿ ವರ್ಗವು ಇಡೀ ಆಡಳಿತ ಪ್ರಕ್ರಿಯೆಯಲ್ಲಿ ಇಕೋ–ಸಿಸ್ಟಂ ಅಂದರೆ, 'ಪ್ರತಿಧ್ವನಿ ವ್ಯವಸ್ಥೆ'ಯನ್ನು ಬೆಳೆಸಲು ಪ್ರಯತ್ನಿಸುತ್ತಿದೆ.

ಮೋದಿ ಸರ್ಕಾರವು ಸಾಮಾನ್ಯ ಜನರ ಮೇಲಿನ ತೆರಿಗೆ ಹೊರೆಯನ್ನು ಹೇರಿ, ಅದರಿಂದ ಉತ್ಪತ್ತಿಯಾಗಿ, ತುಂಬಿದ ಸಾರ್ವಜನಿಕ ಖಜಾನೆಯನ್ನು ತನ್ನ ಬೆರಳೆಣಿಕೆಯಷ್ಟು ಆಪ್ತರು ಲೂಟಿ ಮತ್ತು ದೋಚಲು ತೆರೆದಿಟ್ಟಿದೆ. ಉತ್ಪಾದನೆಗೆ ಸಂಬಂಧಿಸಿದ ಪ್ರೋತ್ಸಾಹಧನ, ಬಂಡವಾಳದ ಪ್ರೋತ್ಸಾಹಧನ, ಉದ್ಯೋಗಕ್ಕೆ ಸಂಬಂಧಿಸಿದ ಪ್ರೋತ್ಸಾಹಧನ ಮುಂತಾದ ಯೋಜನೆಗಳು, ಈ ಕಾರ್ಪೊರೇಟ್‌ಗಳ ಉತ್ಪಾದನಾ ವೆಚ್ಚಕ್ಕಾಗಿ, ಅಂದರೆ, ಅಸ್ಥಿರ ಬಂಡವಾಳ ವೆಚ್ಚಕ್ಕಾಗಿ, ಅದರೊಂದಿಗೆ ಕಾರ್ಮಿಕ ವೆಚ್ಚಗಳನ್ನು ಪೂರೈಸಲು ಬಳಸುವ ಕೊಳವೆ ಮಾರ್ಗಗಳಲ್ಲದೆ ಬೇರೇನೂ ಅಲ್ಲ, ಹೆಚ್ಚಾಗಿ ಏಕಸ್ವಾಮ್ಯ ಕಂಪನಿಗಳು ಸರ್ಕಾರಕ್ಕೆ ಯಾವುದೇ ಲಾಭ ಅಥವಾ ಉದ್ಯೋಗ ಸೃಷ್ಟಿಯನ್ನು ನೀಡುವುದಿಲ್ಲ. ಮತ್ತೊಂದೆಡೆ, ಸರ್ಕಾರವು MNREGA, ಆರೋಗ್ಯ, ಶಿಕ್ಷಣ ಮತ್ತು ಬಡವರಿಗೆ ಪ್ರಯೋಜನಕಾರಿಯಾದ ಇತರ ಕಲ್ಯಾಣ ಯೋಜನೆಗಳಿಗೆ ಹಂಚಿಕೆಗಳನ್ನು ಕಡಿತಗೊಳಿಸಲಾಗಿದೆ.

ಬಂಡವಾಳಶಾಹಿಯ ಉಲ್ಬಣಗೊಳ್ಳುತ್ತಿರುವ ವ್ಯವಸ್ಥಿತ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ, ನವ–ಫ್ಯಾಸಿಸ್ಟ್ ದೃಷ್ಟಿಕೋನದೊಂದಿಗೆ ಹೆಚ್ಚು ಉಗ್ರ ಸರ್ವಾಧಿಕಾರಿ ಮಾದರಿಯ ಕಡೆಗೆ ನವ ಉದಾರವಾದದ ಬದಲಾವಣೆಯನ್ನು ಇವೆಲ್ಲವೂ ಸೂಚಿಸುತ್ತವೆ. ಯುಎಪಿಎ, ಪಿಎಂಎಲ್ಎ, ಬಿಎನ್‌ಎಸ್ ಜೊತೆಗೆ ಹಲವಾರು ಆಡಳಿತಾತ್ಮಕ ಪುಟ 14 ಕ್ಕೆ

ಸುಂಕ–ದಾಳಿ: ಬರಿದೇ ಟ್ರಂಪ್ 'ಹುಚ್ಚುತನ'ವಲ್ಲ!



ಟ್ರಂಪ್ ಸುಂಕ ಯುದ್ಧವನ್ನು ಹರಿಯಬಿಡಲು ಅವರ "ಹುಚ್ಚುತನ" ಅಥವಾ ಪ್ರಪಂಚದ ಉಳಿದ ದೇಶಗಳ ಬಗ್ಗೆ ಅವರು ಹೊಂದಿರುವ "ತಿರಸ್ಕಾರ" ಮುಂತಾದ ಕಾರಣಗಳನ್ನು ಕೊಡಲಾಗುತ್ತದೆ. ಆದರೆ, ವಾಸ್ತವವಾಗಿ ಇದು ಬಂಡವಾಳಶಾಹಿಯ ಬೆಳವಣಿಗೆಯಲ್ಲೇ ಆಳವಾಗಿ ಬೇರೂರಿರುವ ವೈರುಧ್ಯಗಳಿಂದಲೇ ಹೊಮ್ಮಿರುವಂತದ್ದು. ಈ ಸುಂಕ–ದಾಳಿ ಒಂದು ಮಹತ್ವದ ಅಂಶವನ್ನು, ಆರ್ಥಿಕ ಚಟುವಟಿಕೆಗಳನ್ನು ಅಮೆರಿಕದಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪಸರಿಸುವ ಯುಗ ಅಂತ್ಯವಾಗಿದೆ ಎಂಬುದನ್ನು ಸೂಚಿಸುತ್ತದೆ. ಆ ಮೂಲಕ ನವ ಉದಾರವಾದಿ ನೀತಿಯನ್ನು ಅನುಸರಿಸುವುದಕ್ಕೆ ಈಗ ತಾರ್ಕಿಕ ಆಧಾರವೂ ಕೊನೆಗೊಂಡಿದೆ. ಭಾರತದಂತಹ ದೇಶಗಳು ತಮ್ಮ ಮುನ್ನಡೆಯ ದಿಕ್ಪಥವನ್ನು ಬದಲಾಯಿಸಬೇಕಾದ ಸಮಯ ಈಗ ಬಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಸ್ತುತ ಕಾಲಘಟ್ಟದಲ್ಲಿ ಭಾರತದಂತಹ ದೇಶಗಳಿಗೆ ಸಮತೆಯ, ಜನ ಕಲ್ಯಾಣದ, ಆಂತರಿಕ ಮಾರುಕಟ್ಟೆ–ಆಧಾರಿತ ಮತ್ತು ಪ್ರಭುತ್ವ–ಪೋಷಿತ ಅಭಿವೃದ್ಧಿಯ ಕಾರ್ಯತಂತ್ರವನ್ನು ಅನುಸರಿಸುವುದಲ್ಲದೆ ಬೇರೆ ಪರ್ಯಾಯವಿಲ್ಲ ಎಂಬ ಅಂಶದತ್ತ ಟ್ರಂಪ್ ಸುಂಕಗಳು ಜನರ ಕಣ್ಣು ತೆರೆಸಬೇಕು.

ಪ್ರೊ.ಪ್ರಭಾತ್ ಪಟ್ನಾಯಕ್
ಅನು:ಕೆ.ಎಂ.ನಾಗರಾಜ್

ಒಂದು ಬೌದ್ಧಿಕ ನಿಲುವು ಸರಿಯಾಗಿರಬೇಕು. ಅಷ್ಟೇ ಅಲ್ಲ, ಅದು ಸರಿಯಾದ ಕಾರಣಗಳಿಗಾಗಿ ಸರಿಯಾಗಿರುವುದು ಕೂಡ ಮುಖ್ಯವಾಗುತ್ತದೆ. ಸುಂಕಗಳ ಹೇರಿಕೆಯ ಡೊನಾಲ್ಡ್ ಟ್ರಂಪ್‌ರ ಆಕ್ರಮಣಕಾರಿ ನಿಲುವಿಗೆ ಸಾರ್ವತ್ರಿಕವಾಗಿ ಖಂಡನೆ ವ್ಯಕ್ತವಾಗಿದೆ. ಈ ಖಂಡನೆಯು ಸರಿಯಾಗಿಯೇ ಇದ್ದರೂ, ಅದಕ್ಕೆ ಕೊಡುತ್ತಿರುವ ಕಾರಣಗಳು ಮಾತ್ರ ತಪ್ಪಾಗಿವೆ. ಈ ಖಂಡನೆಗಳಲ್ಲಿ, ನಿರ್ಬಂಧಗಳಿಲ್ಲದ ವ್ಯಾಪಾರವು ಸಂಬಂಧಪಟ್ಟ ಎಲ್ಲರಿಗೂ ಒಳ್ಳೆಯದು, ಮತ್ತು ಟ್ರಂಪ್ ಈ ಸೂಕ್ತಿಯನ್ನು ಧಿಕ್ಕರಿಸಿರುವ ಒಬ್ಬ ದುಷ್ಟ ಹಾಗೂ ಪೆದ್ದ ಕೂಡ ಎಂಬ ಭಾವನೆ ವ್ಯಾಪಕವಾಗಿ ಕಾಣುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಟ್ರಂಪ್ ಅವರ ಕಾರ್ಯತಂತ್ರದ ಬಗೆಗಿನ ಬಹುತೇಕ ಟೀಕೆಯು ಡೇವಿಡ್ ರಿಕಾರ್ಡೊ ಅವರ ಕಾಲದಿಂದಲೂ ಒಪ್ಪಿಕೊಂಡು ಬಂದಿರುವ ಮುಕ್ತ ವ್ಯಾಪಾರದ ತರ್ಕದ ಮೇಲೆ ನಿಂತಿದೆ. ಆದರೆ, ಈ ತರ್ಕ ಸಂಪೂರ್ಣವಾಗಿ ತಪ್ಪು.

ಮುಕ್ತ ವ್ಯಾಪಾರ ತರ್ಕವು ಜೀನ್ ಬ್ಯಾಪ್ಟಿಸ್ಟ್ ಸೇ ಎಂಬವರು ಪ್ರತಿಪಾದಿಸಿರುವ ನಿಯಮವನ್ನು ಆಧರಿಸಿದೆ. ಈ ನಿಯಮದ ಪ್ರಕಾರ, ಒಂದು ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಎಂದಿಗೂ ಬೇಡಿಕೆಯ ಇತಿಮಿತಿಯ ಸಮಸ್ಯೆಗಳು ಇದಿರಾಗುವುದಿಲ್ಲ. ಇದು ಒಂದು ಅಸಂಬದ್ಧ ಪ್ರತಿಪಾದನೆ. ಈ ನಿಯಮದಿಂದ ನಾವು ಒಮ್ಮೆ ದೂರ ಸರಿದು ನೋಡಿದರೆ, ಆಗ ವ್ಯಾಪಾರ ನೀತಿ, ಅಂದರೆ ಮುಕ್ತ ವ್ಯಾಪಾರವನ್ನು ಅನುಸರಿಸಬೇಕೋ ಅಥವ ಸುಂಕಗಳನ್ನು ಹೇರಬೇಕೋ ಎಂಬುದು ಒಂದು ದೇಶದ ಉತ್ಪಾದಕರಿಗಾಗಿ ಒಂದು ದೊಡ್ಡ ಮಾರುಕಟ್ಟೆಯನ್ನು ಹಿಡಿಯಲು ಇತರ ದೇಶಗಳಿಗೆ ನಷ್ಟವನ್ನುಂಟು ಮಾಡಿಯಾದರೂ ಹೇಗೆ ರೂಪಿಸುವುದು ಎಂಬುದನ್ನು ಅವಲಂಬಿಸಿರುತ್ತದೆ ಎಂಬುದು ತಿಳಿಯುತ್ತದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಮುಕ್ತ ವ್ಯಾಪಾರವು ಎಲ್ಲರಿಗೂ ಪ್ರಯೋಜನವಾಗುವಂತದ್ದೇನೂ ಅಲ್ಲ, ಮತ್ತು ಇಂತಹ ಮುಕ್ತ ವ್ಯಾಪಾರದಿಂದ ದೂರ ಸರಿದಿದ್ದಾರೆ ಎಂದು ಟ್ರಂಪ್‌ರನ್ನು ದೂಷಿಸುವುದು, ಅವರನ್ನು ತಪ್ಪು ಕಾರಣಗಳಿಗಾಗಿ ದೂಷಿಸಿದಂತಾಗುತ್ತದೆ.

ಸಾಮ್ರಾಜ್ಯಶಾಹಿ ಮತ್ತು ವ್ಯಾಪಾರನೀತಿ

ಪ್ರಗತಿಶೀಲ ವಲಯಗಳಲ್ಲಿ ಟ್ರಂಪ್ ವ್ಯಾಪಾರ ನೀತಿಯ ವಿರುದ್ಧ ಒಂದು ಸಂಪೂರ್ಣವಾಗಿ ವಿಭಿನ್ನವಾದ ವಾದವನ್ನು ಮಂಡಿಸಲಾಗಿದೆ: ಒಂದು ಪ್ರಮುಖ ಮಹಾನಗರೀಯ (ಮೆಟ್ರೋಪಾಲಿಟನ್– ಅಂದರೆ, ಮುಂದುವರೆದ ಬಂಡವಾಳಶಾಹಿ ವ್ಯವಸ್ಥೆ–ಅನು) ಅರ್ಥವ್ಯವಸ್ಥೆಯಾದ ಅಮೆರಿಕವು, ಒಂದೆಡೆಯಲ್ಲಿ ಜಾಗತಿಕ ದಕ್ಷಿಣವನ್ನು(ಅಭಿವೃದ್ಧಿ ಹೊಂದುತ್ತಿರುವ–ಅನು) ಮುಕ್ತ ವ್ಯಾಪಾರಕ್ಕೆ ಒಳಪಡಿಸುತ್ತಲೇ, ತಾನು ಮಾತ್ರ ಸುಂಕಗಳನ್ನು ವಿಧಿಸುತ್ತಿರುವುದು ಒಂದು ಸಾಮ್ರಾಜ್ಯಶಾಹೀ ಕೃತ್ಯವೇ. ಏಕೆಂದರೆ, ಜಾಗತಿಕ ದಕ್ಷಿಣದಿಂದ ಬರುವ ಆಮದುಗಳಿಗೆ ಅದು ಬಾಗಿಲು ಮುಚ್ಚುವ ಮೂಲಕ ಜಾಗತಿಕ ದಕ್ಷಿಣಕ್ಕೆ ತನ್ನ ನಿರುದ್ಯೋಗವನ್ನು ರಫ್ತು ಮಾಡುತ್ತದೆ ಎಂದು ಈ ವಾದ ಹೇಳುತ್ತದೆ. ತಕ್ಷಣದ ಸಂದರ್ಭದಲ್ಲಿ, ಈ ವಾದವು ಸಮಂಜಸವಾಗಿ ಕಂಡರೂ ಸಹ, ಇದು ಸಾಮ್ರಾಜ್ಯಶಾಹಿಯ ಒಂದು ನಿರ್ಣಾಯಕ ಲಕ್ಷಣವೇನೂ ಅಲ್ಲ. ಉದಾಹರಣೆಗೆ, ವಸಾಹತುಶಾಹಿ ಅವಧಿಯ ಉತ್ತರಾರ್ಧದಲ್ಲಿ, ಆಗಿನ ಪ್ರಧಾನ ಮಹಾನಗರೀಯ (ಮೆಟ್ರೋಪಾಲಿಟನ್) ಅರ್ಥವ್ಯವಸ್ಥೆಯಾದ ಬ್ರಿಟನ್ ಜಾಗತಿಕ ದಕ್ಷಿಣದ ಮೇಲೆ ಮುಕ್ತ ವ್ಯಾಪಾರವನ್ನು ಹೇರಿದ ಜೊತೆಯಲ್ಲೇ, ತಾನೂ ಮುಕ್ತ ವ್ಯಾಪಾರವನ್ನು ಅನುಸರಿಸುತ್ತಿತ್ತು. ಆ ಮುಕ್ತ ವ್ಯಾಪಾರ ನೀತಿಯ ಹೇರಿಕೆಯು ಭಾರತ ಮತ್ತು ಚೀನಾದಂತಹ ಅರ್ಥವ್ಯವಸ್ಥೆಗಳನ್ನು ಕೈಗಾರಿಕಾ ಕ್ರಾಂತಿಯ ತರುವಾಯ ಬ್ರಿಟನ್‌ನಿಂದ ರಫ್ತು ಮಾಡಲಾದ ಅಗ್ಗದ ತಯಾರಿಕಾ ಸರಕುಗಳಿಗೆ ಮುಕ್ತಗೊಳಿಸಿತು ಮತ್ತು ಬಂಡವಾಳಶಾಹಿಗಿಂತ ಮೊದಲಿದ್ದ ಉತ್ಪಾದಕರನ್ನು ಸ್ಥಳಾಂತರಿಸುವ ಮೂಲಕ ಈ ಅರ್ಥವ್ಯವಸ್ಥೆಗಳಲ್ಲಿ ಇದ್ದ ಕೈಗಾರಿಕೆಗಳ ನಾಶ (ಅಪ–ಕೈಗಾರಿಕೀಕರಣ) ಉಂಟಾಗಲು ಕಾರಣವಾಯಿತು.

ಜಾಗತಿಕ ದಕ್ಷಿಣದ ಮೇಲೆ ಮುಕ್ತ ವ್ಯಾಪಾರವನ್ನು ಹೇರುವ ಈ ಪರಿಸ್ಥಿತಿಯು ಎರಡು ಮಹಾಯುದ್ಧಗಳ ನಡೆದ ಅವಧಿಯವರೆಗೂ ಮುಂದುವರೆಯಿತು. ಆರ್ಥಿಕ ಮಹಾಕುಸಿತದ ಸನ್ನಿವೇಶದಲ್ಲಿ ಲ್ಯಾಟಿನ್ ಅಮೆರಿಕಾದಾದ್ಯಂತ ಬೀಸಿದ ರಾಜಕೀಯ ಅಲೆಯ ಪರಿಣಾಮವಾಗಿ ಹೊಸ ರೀತಿಯ ಆಳ್ವಿಕೆಯ ಒಂದು ಇಡೀ ಸಮೂಹವೇ ಹೊರಹೊಮ್ಮಿತು. ಈ ದೇಶಗಳು ರಕ್ಷಣಾತ್ಮಕ ವ್ಯಾಪಾರ ಕ್ರಮಗಳನ್ನು ಜಾರಿಗೆ ತಂದವು. ಸುಂಕದ ಗೋಡೆಗಳನ್ನು ನಿರ್ಮಿಸಿಕೊಂಡವು. ಸುಂಕದ ರಕ್ಷಣೆಯೊಂದಿಗೆ ಕೈಗಾರಿಕೀಕರಣವನ್ನು ಪ್ರಾರಂಭಿಸಿದವು. ಭಾರತದಲ್ಲಿಯೂ ಸಹ ವಸಾಹತುಶಾಹಿ ಆಳ್ವಿಕೆಯು ಇದೇ ಅವಧಿಯಲ್ಲಿ ಒಲ್ಲದ ಮನಸ್ಸಿನಿಂದ (ಇಲ್ಲಿ ಆಗಿನ್ನೂ ಕೈಗಾರಿಕೆಗಳು 'ಶೈಶವಾವಸ್ಥೆ'ಯಲ್ಲಿದ್ದವು ಎಂಬ ತರ್ಕವೊಡ್ಡಿ) ಸಣ್ಣ ಶ್ರೇಣಿಯ ಕೈಗಾರಿಕೆಗಳಿಗೆ ಮತ್ತು ದೇಶೀಯ ಬೂರ್ಜ್ವಾಗಳಿಗೂ ಅಭಿವೃದ್ಧಿ ಹೊಂದುವ ಸ್ವಲ್ಪ ಅವಕಾಶ ನೀಡುವ ಒಂದು "ತಾರತಮ್ಯದ ರಕ್ಷಣೆ"ಯ ನೀತಿಯನ್ನು ಪರಿಚಯಿಸಬೇಕಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಸಾಮ್ರಾಜ್ಯಶಾಹಿ ವ್ಯಾಪಾರನೀತಿಯು ಮೂರ್ತ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

'ನವ–ಉದಾರವಾದ'ದ ಸೇಲ್

ಇತ್ತೀಚಿನ ಅವಧಿಯಲ್ಲಿ, ಮಹಾನಗರೀಯ ಬಂಡವಾಳವು ಜಾಗತಿಕ ದಕ್ಷಿಣದಲ್ಲಿನ ಕಡಿಮೆ ಸಂಬಳದ ಪ್ರಯೋಜನ ಪಡೆದು ಅಲ್ಲಿ ಕಾರ್ಖಾನೆಗಳನ್ನು ನೆಲೆಗೊಳಿಸಬೇಕೆಂದು ಬಯಸುವಾಗ, ಇದರಿಂದಾಗಿ, ಅನಿರ್ಬಂಧಿತ ವ್ಯಾಪಾರದ ಪರಿಸ್ಥಿತಿಗಳಲ್ಲಿ, ಜಾಗತಿಕ ದಕ್ಷಿಣಕ್ಕೆ ನಿರುದ್ಯೋಗದ ರಫ್ತಲ್ಲ, ಉದ್ಯೋಗವನ್ನು ರಫ್ತು ಮಾಡಿದಂತಾಗಿದೆ. ನಿಜವಾಗಿ ಹೇಳುವುದಾದರೆ, ಬಂಡವಾಳದ ಹರಿದಾಟಕ್ಕೆ ಇರುವ ಎಲ್ಲಾ ಅಡೆತಡೆಗಳನ್ನೂ ತೆಗೆದುಹಾಕಿದರೆ ಉತ್ಪಾದನಾ ಚಟುವಟಿಕೆಗಳು ಜಾಗತಿಕ ಉತ್ತರದಿಂದ ಸ್ಥಳಾಂತರಗೊಳ್ಳುವ ಮೂಲಕ, ಜಾಗತಿಕ ದಕ್ಷಿಣದ ಅರ್ಥವ್ಯವಸ್ಥೆಗಳಲ್ಲಿ ಉದ್ಯೋಗಗಳು ಹೆಚ್ಚುತ್ತವೆ ಎಂಬ ತರ್ಕದ ಮೇಲೆ ನವ ಉದಾರವಾದಿ ನೀತಿಗಳನ್ನು ಭಾರತದಂತಹ ದೇಶಗಳಿಗೆ ಮಾರಾಟ ಮಾಡಲಾಯಿತು. ಟ್ರಂಪ್ ಈಗ ಈ ವಿದ್ಯಮಾನವನ್ನು ಕೊನೆಗೊಳಿಸಬೇಕೆಂದಿದ್ದಾರೆ.

ಟ್ರಂಪ್ ಅವರ ರಕ್ಷಣಾತ್ಮಕ ವ್ಯಾಪಾರ ನೀತಿಗೆ ಜಾಗತಿಕ ದಕ್ಷಿಣದಿಂದ, ವಿಶೇಷವಾಗಿ ಚೀನಾದಿಂದ, ಉದ್ಯೋಗವನ್ನು ಕಸಿದುಕೊಳ್ಳುವ ಬಯಕೆ ಮಾತ್ರವೇ ಪ್ರೇರಣೆಯಲ್ಲ. ವ್ಯಾಪಾರದ ಬಾಕಿ (ಬ್ಯಾಲನ್ಸ್ ಆಫ್ ಪೇಮೆಂಟ್ಸ್) ಇತ್ಯರ್ಥಕ್ಕೆ ಸಂಬಂಧಿಸಿದಂತೆ ಅಮೆರಿಕದ ಚಾಲ್ತಿ ಖಾತೆಯ ಕೊರತೆಯು (ಕರೆಂಟ್ ಅಕೌಂಟ್ ಡೆಫಿಸಿಟ್) ಮುಂದುವರಿಯುತ್ತಿರುವುದು ಒಂದು ಬಲವಾದ ಹೆಚ್ಚುವರಿ ಕಾರಣವಾಗಿದ್ದು, ಅದು ಅಮೆರಿಕವನ್ನು ವಿಶ್ವದ ಅತಿದೊಡ್ಡ ಸಾಲಗಾರ ದೇಶವನ್ನಾಗಿ ಮಾಡಿದೆ. ಈ ಹದಗೆಟ್ಟ ಪರಿಸ್ಥಿತಿಯನ್ನು ರಕ್ಷಣಾತ್ಮಕ ವ್ಯಾಪಾರ ನೀತಿಯು ಸರಿಪಡಿಸುತ್ತದೆ ಎಂದು ಟ್ರಂಪ್ ಆಶಿಸುತ್ತಾರೆ.

ಆದರೆ, ಇಲ್ಲೊಂದು ವೈರುಧ್ಯವಿದೆ. ಸಾಮಾನ್ಯವಾಗಿ ಅದನ್ನು ಗಮನಿಸುವುದಿಲ್ಲ.



ಬಂಡವಾಳಶಾಹಿ ಜಗತ್ತಿನ ತನ್ನ ಪ್ರತಿಸ್ಪರ್ಧಿ ದೇಶಗಳ ಹೆಬ್ಬಯಕೆಗಳಿಗೆ ಎಡೆ ಮಾಡಿಕೊಡುವಂತಾಗಲು ಮತ್ತು ತನ್ನ ನಾಯಕತ್ವದ ಪಾತ್ರವನ್ನು ಉಳಿಸಿಕೊಳ್ಳಲು, ಪ್ರತಿಸ್ಪರ್ಧಿ ದೇಶಗಳಿಗೆ ಎದುರಾಗಿ ತನ್ನ ಚಾಲ್ತಿ ಖಾತೆಯಲ್ಲಿ ಕೊರತೆಯನ್ನು ಸಹಿಸಿಕೊಳ್ಳುವುದು ಬಂಡವಾಳಶಾಹಿ ಜಗತ್ತಿನ ಒಬ್ಬ ನಾಯಕನ ಲಕ್ಷಣವಾಗುತ್ತದೆ. ಮೊದಲ ಮಹಾಯುದ್ಧದ ಮೊದಲು ಬಂಡವಾಳಶಾಹಿ ಜಗತ್ತಿನ ನಾಯಕನಾಗಿದ್ದ ಬ್ರಿಟನ್, ಪ್ರತಿಸ್ಪರ್ಧಿಗಳಾಗಿ ಆಗ ತಾನೇ ಹೊಸದಾಗಿ ಹೊಮ್ಮುತ್ತಿದ್ದ ಯುರೋಪಿನ ಇತರ ದೇಶಗಳ ಮತ್ತು ಅಮೆರಿಕದ ಮಹತ್ವಾಕಾಂಕ್ಷೆಗಳನ್ನು ಈಡೇರಿಸಲು ಮತ್ತು ಬಂಡವಾಳಶಾಹಿ ಜಗತ್ತಿನ ತನ್ನ ನಾಯಕತ್ವದ ವಿರುದ್ಧ ಈ ದೇಶಗಳು ಬಂಡಾಯಕ್ಕಿಳಿಯದಂತೆ ತಡೆಯಲು, ಈ ಪ್ರತಿಸ್ಪರ್ಧಿ ದೇಶಗಳಿಗೆ ಎದುರಾಗಿ ತನ್ನ ಚಾಲ್ತಿ ಖಾತೆಯಲ್ಲಿ ಕೊರತೆಯನ್ನು ನಿರಂತರವಾಗಿ ಬ್ರಿಟನ್ ಸಹಿಸಿಕೊಂಡಿತ್ತು.

ಬ್ರಿಟನ್ ಸಾಲಗಾರ ದೇಶವಾಗಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ, ಯಾವ ದೇಶಗಳಿಗೆ ಎದುರಾಗಿ ತನ್ನ ಚಾಲ್ತಿ ಖಾತೆಯಲ್ಲಿ ಕೊರತೆಯನ್ನು ಹೊಂದಿ ಅದನ್ನು ಸಹಿಸಿಕೊಂಡಿತ್ತೋ, ಆ ದೇಶಗಳಿಗೇ ಬಂಡವಾಳವನ್ನು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುವ ಪ್ರಮುಖ ಸಾಲದಾತ ದೇಶವಾಗಿ ಬ್ರಿಟನ್ ಹೊರಹೊಮ್ಮಿತು. ಏಕೆಂದರೆ, ಅದನ್ನು ಸಾಧ್ಯವಾಗಿಸುವ ಸನ್ನಿವೇಶವೂ ಇತ್ತು. ಅಂದರೆ, ಉಷ್ಣವಲಯದ ಮತ್ತು ಉಪೋಷ್ಣವಲಯದ ತನ್ನ ವಸಾಹತುಗಳ ಎಲ್ಲ ನಿವ್ವಳ ರಫ್ತು ಗಳಿಕೆಗಳನ್ನೂ (ಮಿಗುತಾಯವನ್ನು 'ಬಸಿಯುವ' ಮೂಲಕ) ಪುಕ್ಕಟೆಯಾಗಿ ಸ್ವಾಹಾ ಮಾಡಿಕೊಳ್ಳಬಹುದಾದ ಮತ್ತು ಅವುಗಳಿಗೆ, ಅವುಗಳ ಕೈಗಾರಿಕೆಗಳನ್ನು ಮುಚ್ಚುವಂತೆ ಮಾಡುವ ("ಅಪ–ಕೈಗಾರಿಕೀಕರಣ'ಗೊಳಿಸುವ) ರಫ್ತುಗಳನ್ನು ಮಾಡಬಹುದಾದ ಅನುಕೂಲತೆ ಅದಕ್ಕೆ ಲಭ್ಯವಿತ್ತು. ಈ ವಸಾಹತುಗಳು ಅದಕ್ಕೆ ನಿಜಕ್ಕೂ "ಬೇಕಾದಾಗ ಬಳಸಿಕೊಳ್ಳಬಹುದಾದ ಮಾರುಕಟ್ಟೆ"ಗಳಾಗಿದ್ದವು (ಆರ್ಥಿಕ ಇತಿಹಾಸಕಾರ ಎಸ್‌ಬಿ ಸೌಲ್ ವರ್ಣಿಸಿರುವಂತೆ). ಅಂದಿನ ಬ್ರಿಟನ್ ಹೊಂದಿದ್ದ ಮತ್ತು ಇಂದಿನ ಅಮೆರಿಕ ಹೊಂದಿರುವ ಅನುಕೂಲಗಳ ನಡುವೆ ಇರುವ ಒಂದು ಮೂಲಭೂತ ವ್ಯತ್ಯಾಸವೆಂದರೆ, ಜಾಗತಿಕ ದಕ್ಷಿಣದಿಂದ ನಿವ್ವಳ ರಫ್ತು ಗಳಿಕೆಯನ್ನು 'ಬಸಿಯುವ' (ಡ್ರೈನ್) ಅನುಕೂಲತೆ ಇಂದಿನ ಅಮೆರಿಕಕ್ಕೆ ಲಭ್ಯವಿಲ್ಲ, ಮತ್ತು ಅದರ ಮೇಲೆ "ಅಪ–ಕೈಗಾರಿಕೀಕರಣ"ವನ್ನು ಹೇರುವ ಸಾಧ್ಯತೆಗಳೂ ಇಂದಿನ ಅಮೆರಿಕಕ್ಕೆ ಲಭ್ಯವಿಲ್ಲ.

ಇವೆರಡಕ್ಕೂ ಕಾರಣ, ಇಂದು ನಾವು ಕಾಣುತ್ತಿರುವ ಸಾಮ್ರಾಜ್ಯಶಾಹಿಗೆ ವಸಾಹತುಗಳಿಲ್ಲದಿರುವುದು. ಒಂದು ವೇಳೆ ವಸಾಹತುಗಳು ಇದ್ದಿದ್ದರೂ ಸಹ, ಅವುಗಳಿಂದ ಒಂದು ವ್ಯವಸ್ಥೆಯನ್ನು ಎಷ್ಟರ ಮಟ್ಟಿಗೆ ನಡೆಸಿಕೊಂಡು ಹೋಗಬಹುದು ಎಂಬುದಕ್ಕೂ ಒಂದು ಮಿತಿಯಿರುತ್ತಿತ್ತು. ಏಕೆಂದರೆ ಹೆಚ್ಚೆಚ್ಚು ಬಂಡವಾಳಶಾಹಿ–ಪೂರ್ವದ ಉತ್ಪಾದಕರನ್ನು ಹೊರದಬ್ಬಿದಂತೆ, "ಅಪ–ಕೈಗಾರಿಕೀಕರಣ"ದ ಅವಕಾಶ ಕುಗ್ಗುತ್ತ ಹೋಗುತ್ತದೆ ಮತ್ತು ಸ್ಥಗಿತಗೊಂಡ ವಸಾಹತುಶಾಹೀ ಅರ್ಥವ್ಯವಸ್ಥೆಗಳಿಂದ ಮಿಗುತಾಯವನ್ನು ಹೆಚ್ಚೆಚ್ಚಾಗಿ ಹಿಂಡುತ್ತ ಹೋದಂತೆ ಪುಟ 15 ಕ್ಕೆ



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕೇರಳದ ಧರ್ಮದಂ: ಮೊದಲ ಕಡುಬಡತನ–ಮುಕ್ತ ವಿಧಾನಸಭಾ ಕ್ಷೇತ್ರ



ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರತಿನಿಧಿಸುವ ಧರ್ಮದಂ ವಿಧಾನಸಭಾ ಕ್ಷೇತ್ರ ದೇಶದ ಮೊದಲ ಕಡುಬಡತನ–ಮುಕ್ತ ಮತಕ್ಷೇತ್ರವೆಂಬ ಹೆಗ್ಗಳಿಕೆ ಗಳಿಸಿದೆ. ಇದನ್ನು ಮುಖ್ಯಮಂತ್ರಿಗಳು ಏಪ್ರಿಲ್ 13ರಂದು ಸಾರ್ವಜನಿಕ ಸಮಾರಂಭವೊಂದರಲ್ಲಿ ಅಧಿಕೃತವಾಗಿ ಘೋಷಿಸಿದ್ದಾರೆ. ಇದು ಕಡುಬಡತನವನ್ನು ನಿರ್ಮೂಲಗೊಳಿಸುವತ್ತ ಒಂದು ದೊಡ್ಡ ನೆಗೆತ ಎಂದು ಈ ಸಂದರ್ಭದಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ ಕಡುಬಡತನದಲ್ಲಿ ಬದುಕುತ್ತಿದ್ದಾರೆ ಎಂದು ಗುರುತಿಸಲಾದ 64,006 ಕುಟುಂಬಗಳಲ್ಲಿ 50,401 ಕುಟುಂಬಗಳನ್ನು, ಅಂದರೆ ಶೇ. 78.74 ಕುಟುಂಬಗಳನ್ನು ಯಶಸ್ವಿಯಾಗಿ ಕಡುಬಡತನದಿಂದ ಮೇಲಕ್ಕೆತ್ತಲಾಗಿದೆ ಎಂದು ಎಲ್‌ಡಿಎಫ್ ಸರಕಾರ ಹೇಳಿದೆ. ಕೇರಳ ರಾಜ್ಯೋತ್ಸವ ದಿನವಾದ ನವಂಬರ್ 1 ರ ವೇಳೆಗೆ ಇಡೀ ಕೇರಳ ರಾಜ್ಯ ದೇಶದ ಮೊತ್ತ ಮೊದಲ ಕಡುಬಡತನ–ಮುಕ್ತ ರಾಜ್ಯವಾಗುವ ಗುರಿಯನ್ನು ತಲುಪುತ್ತದೆ ಎಂದು ಅವರು ಹೇಳಿದರು.

ಸ್ಥಳೀಯ ಸಂಸ್ಥೆಗಳು ರೂಪಿಸಿ ಅಭಿವೃದ್ಧಿ ಪಡಿಸಿದ ಯೋಜನೆಗಳ ಮೂಲಕ ಈ ಕುಟುಂಬಗಳು ಮನೆಗಳನ್ನು (ಲೈಫ್ ಮಿಶನ್ ಮೂಲಕ), ಆರೋಗ್ಯಪಾಲನೆ, ಶಿಕ್ಷಣ ಮತ್ತು ಅಗತ್ಯ ದಾಖಲೆಗಳನ್ನು ಪಡೆದಿದ್ದಾರೆ. ರಾಜ್ಯದ 'ಕುಡುಂಬಶ್ರೀ ಮಿಷನ್'ನ 'ಉಜ್ಜೀವನಂ' ಅಭಿಯಾನ ಸಾವಿರಾರು ಮಂದಿಗೆ ಹಣಕಾಸು ನೆರವು ಮತ್ತು ಕೌಶಲ ತರಬೇತಿ ಒದಗಿಸುವ ಮೂಲಕ ಬೆಂಬಲ ನೀಡಿದೆ. ಈಗ ಸರಕಾರದ ಗಮನ ಉಳಿದ ಸುಮಾರು ಶೇ.22 ಕುಟುಂಬಗಳಿಗೆ ಸುಸ್ಥಿರ ಆದಾಯ ಮೂಲಗಳನ್ನು ಮತ್ತು ವಸತಿಯನ್ನು ಒದಗಿಸುವುದರ ಮೇಲಿರುತ್ತದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಭೂಮಿ ಇದ್ದು ಮನೆಯಿಲ್ಲದವರಿಗೆ ಮನೆ, ಮತ್ತು ಎರಡೂ ಇಲ್ಲದವರಿಗೆ ಎರಡನ್ನೂ ಒದಗಿಸಲಾಗುತ್ತದೆ. ಭೂಮಿ ಒದಗಿಸಲು 'ಮನಸ್ಸೋಡಿತ್ರಿ ಮನ್ನು' ಅಭಿಯಾನದ ಅಡಿಯಲ್ಲಿ ಮತ್ತು ರೆವಿನ್ಯೂ ಇಲಾಖೆಯ ಮುತುವರ್ಜಿಯಿಂದ ಭೂಮಿಯನ್ನು ಗುರುತಿಸುವ ಕೆಲಸ ಸಾಗಿದೆ.

ಅಡೆ–ತಡೆಯಿಲ್ಲದೆ ಆಹಾರ ಮತ್ತು ಆರೋಗ್ಯಪಾಲನೆ ಲಭ್ಯವಾಗುವಂತೆ ಮಾಡುವುದು ಬಡತನ ನಿರ್ಮೂಲನೆ ಅಭಿಯಾನದ ಕೇಂದ್ರ ಬಿಂದು. ಇದರಲ್ಲಿ ರಾಜ್ಯ ಸರಕಾರ ಮತ್ತು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳು ಸಕ್ರಿಯವಾಗಿವೆ.

ನವಂಬರ್ 2023ರಲ್ಲಿ ಅಂತ್ಯಗೊಂಡ ಈ ಅಭಿಯಾನದ ಮೊದಲ ಹಂತದಲ್ಲಿ ಪೋಷಕ ಆಹಾರ, ಆರೋಗ್ಯಪಾಲನೆ ಮತ್ತು ಅಗತ್ಯ ಸೇವೆಗಳನ್ನು ಒದಗಿಸಿ 30,658 ಕುಟುಂಬಗಳನ್ನು (ಶೇ.47.89) ಕಡುಬಡತನದಿಂದ ಮೇಲಕ್ಕೆತ್ತಲಾಯಿತು. ಈಗ ನಡೆಯುತ್ತಿರುವ ಎರಡನೇ ಹಂತದಲ್ಲಿ ಜೀವನೋಪಾಯಗಳ ಸೃಷ್ಟಿ, ಸ್ಥಿರ ವಸತಿ, ಮತ್ತು ದೀರ್ಘಕಾಲೀನ ಸಬಲೀಕರಣದ ಮೇಲೆ ಗಮನ ಹರಿಸಲಾಗಿದೆ ಎಂದು ಎಲ್‌ಡಿಎಫ್ ಹೇಳಿದೆ.

ನವ–ಫ್ಯಾಸಿಸಂ ಚರ್ಚೆಯ ಸುತ್ತ....... ಪುಟ 8 ರಿಂದ

ಬಿಕ್ಕಟ್ಟಿನಲ್ಲಿ ನವ–ಉದಾರವಾದಿ ಬಂಡವಾಳದ ಬೆಳವಣಿಗೆ

1930ರ ದಶಕದಲ್ಲಿ ಜಾಗತಿಕ ಹಣಕಾಸು ಬಂಡವಾಳದ ಉದಯದೊಂದಿಗೆ ಸಾಮ್ರಾಜ್ಯಶಾಹಿಗಳ ನಡುವಿನ ಸಂಘರ್ಷಗಳು ಫ್ಯಾಸಿಸಂನ ಬೆಳವಣಿಗೆಗೆ ಕಾರಣವಾಗಿ ಯುದ್ಧಗಳು ಸಂಭವಿಸಿದವು. ಎರಡನೇ ಮಹಾಯುದ್ಧದ ನಂತರ ದೀರ್ಘಕಾಲ ಮೌನವಾಗಿದ್ದ ಈ ಸಂಘರ್ಷಗಳು ಇಂದು ಜಾಗತಿಕವಾಗಿ ವಿಸ್ತರಿಸಿಕೊಳ್ಳುತ್ತಿವೆ. ರಾಷ್ಟ್ರ–ಪ್ರಭುತ್ವಗಳ ನೆಲೆಯಿಂದ ಕಾರ್ಯಾಚರಣೆ ಮಾಡುತ್ತಿದ್ದ ಏಕಸ್ವಾಮ್ಯ ಬಂಡವಾಳದ ಸ್ವರೂಪವು ಈಗ ನವ–ಉದಾರವಾದಿ ಏಕಸ್ವಾಮ್ಯ ಬಂಡವಾಳದ ಸ್ವರೂಪವನ್ನು ಪಡೆದುಕೊಂಡಿದೆ. ಜಗತ್ತಿನೆಲ್ಲೆಡೆ ನವ–ಉದಾರವಾದಿ ಬಂಡವಾಳದ ಬೆಳವಣಿಗೆಯು ಬಿಕ್ಕಟ್ಟಿಗೆ ಒಳಗಾಗಿದೆ. ವ್ಯಾಪಕವಾದ ನಿರುದ್ಯೋಗ, ಬಡತನ, ಅಸಮಾನತೆಗಳು ಈ ಬಿಕ್ಕಟ್ಟಿನ ಲಕ್ಷಣಗಳಾಗಿವೆ. ಈ ಬಿಕ್ಕಟ್ಟಿನ ಪರಿಹಾರಕ್ಕೆ ನವ–ಉದಾರವಾದಿ ಬಂಡವಾಳ ಮತ್ತು ಫ್ಯಾಸಿಸ್ಟ್ ಶಕ್ತಿಗಳ ನಡುವಿನ ಪರಸ್ಪರ ಬೆಂಬಲ ಮತ್ತು ಸಹಕಾರ ಆಳಗೊಂಡಿದೆ ಮತ್ತು ಇದನ್ನೇ ಸಾಧಾರಣವಾಗಿ ನವ–ಫ್ಯಾಸಿಸಂ ಎಂದು ಕರೆಯಲಾಗುತ್ತಿದೆ.

ನವ–ಫ್ಯಾಸಿಸ್ಟ್ ಶಕ್ತಿಗಳು ಜನರನ್ನು ಮರುಳು ಮಾಡಲು ಪ್ರಯತ್ನಿಸುತ್ತವೆ

ನವ–ಫ್ಯಾಸಿಸಂ ಸ್ವರೂಪದಲ್ಲಿ ನವೀನವಾದದ್ದು ಏನೆಂಬುದನ್ನು ಗಮನಿಸಬೇಕಾಗಿದೆ. ನವ–ಫ್ಯಾಸಿಸ್ಟ್ ಆಡಳಿತಗಳು ಸಾಮ್ರಾಜ್ಯಶಾಹಿಯ ಭಾಗವಾಗಿ ಯುದ್ಧಕ್ಕೆ ಹೋಗುವುದಿಲ್ಲ. ನವ–ಉದಾರವಾದಿ ಬಿಕ್ಕಟ್ಟು ಮತ್ತು ಜನರಲ್ಲಿ ಉಂಟಾಗುವ ಅಸಮಾಧಾನವನ್ನು ಉಗ್ರ–ಬಲಪಂಥೀಯ ದಿಕ್ಕಿನತ್ತ ತಿರುಗಿಸಲು ಪ್ರಯತ್ನಿಸುತ್ತವೆ.

ನವ–ಫ್ಯಾಸಿಸ್ಟ್ ಶಕ್ತಿಗಳು ಜನರನ್ನು ಮರುಳು ಮಾಡಲು ಪ್ರಯತ್ನಿಸುತ್ತವೆ. ಆದರೆ ಅವು ಅಧಿಕಾರಕ್ಕೆ ಬಂದಾಗ ನವ–ಉದಾರವಾದಿ ನೀತಿಗಳನ್ನು ನಿಲ್ಲಿಸುವುದಿಲ್ಲ. ಬದಲಿಗೆ, ದೊಡ್ಡ ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಅನುಗುಣವಾಗಿರುವ ನೀತಿಗಳನ್ನೇ ಅನುಸರಿಸುತ್ತವೆ.

ಕ್ಲಾಸಿಕಲ್ ಫ್ಯಾಸಿಸಂನೊಂದಿಗಿನ ಇನ್ನೊಂದು ವ್ಯತ್ಯಾಸವೆಂದರೆ, ನವ–ಫ್ಯಾಸಿಸ್ಟ್ ಪಕ್ಷಗಳು ತಮ್ಮ ರಾಜಕೀಯ ಯೋಜನೆಯನ್ನು ಮುನ್ನಡೆಸಲು ಚುನಾವಣೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತವೆ ಮತ್ತು ಅವು ಅಧಿಕಾರಕ್ಕೆ ಬಂದರೂ ಸಹ ಚುನಾವಣಾ ವ್ಯವಸ್ಥೆಯನ್ನು ಕಿತ್ತು ಹಾಕುವುದಿಲ್ಲ. ಅವು ಚುನಾವಣಾ ವ್ಯವಸ್ಥೆಯನ್ನು ಉಳಿಸಿಕೊಳ್ಳುತ್ತವೆ.

ವಿರೋಧವನ್ನು ನಿಗ್ರಹಿಸಲು ಮತ್ತು ಲಾಭ ಪಡೆಯಲು ಸರ್ವಾಧಿಕಾರಿ ವಿಧಾನಗಳನ್ನು ಬಳಸುತ್ತವೆ. ಒಳಗಿನಿಂದ ಕೆಲಸ ಮಾಡುವ ಮೂಲಕ ದೀರ್ಘ ಕಾಲದವರೆಗೆ ಪ್ರಭುತ್ವ ರಚನೆಯಲ್ಲಿ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತವೆ ಎಂದು ಸಿಪಿಐ(ಎಂ) ವಿಶ್ಲೇಷಿಸುತ್ತದೆ.

ಬಿಜೆಪಿ–ಆರ್‌ಎಸ್‌ಎಸ್ ಅಡಿಯಲ್ಲಿ ಪ್ರಸ್ತುತ ರಾಜಕೀಯ ವ್ಯವಸ್ಥೆಯು "ನವ–ಫ್ಯಾಸಿಸ್ಟ್ ಗುಣ ಲಕ್ಷಣಗಳನ್ನು ಪ್ರರ್ಶಿಸುವ" ಹಿಂದುತ್ವ–ಕಾರ್ಪೊರೇಟ್ ಸರ್ವಾಧಿಕಾರಿ ಆಡಳಿತವಾಗಿದೆ ಎಂದು ಸಿಪಿಐ(ಎಂ) ಹೇಳಿದೆ. ಮೋದಿ ಸರ್ಕಾರವನ್ನು ಫ್ಯಾಸಿಸ್ಟ್ ಅಥವಾ ನವ–ಫ್ಯಾಸಿಸ್ಟ್ ಆಗಿದೆ ಎಂದಾಗಲೀ, ಭಾರತದ ಪ್ರಭುತ್ವವನ್ನು ನವ–ಫ್ಯಾಸಿಸ್ಟ್ ಪ್ರಭುತ್ವವಾಗಿದೆ ಎಂದಾಗಲೀ ಸಿಪಿಐ(ಎಂ) ನಿರೂಪಿಸುತ್ತಿಲ್ಲ. ಬದಲಿಗೆ ಆ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ವಿಶ್ಲೇಷಣೆ ಮಾಡಿದೆ. ಆರ್‌ಎಸ್‌ಎಸ್‌ನ ರಾಜಕೀಯ ವಿಭಾಗವಾದ ಬಿಜೆಪಿಯ ಹತ್ತು ವರ್ಷಗಳ ನಿರಂತರ ಆಡಳಿತದ ನಂತರ, ಬಿಜೆಪಿ–ಆರ್‌ಎಸ್‌ಎಸ್ ಕೈಯಲ್ಲಿ ರಾಜಕೀಯ ಅಧಿಕಾರದ ಕ್ರೋಢೀಕರಣವಾಗಿದೆ ಮತ್ತು ಇದು "ನವ–ಫ್ಯಾಸಿಸ್ಟ್ ಗುಣಲಕ್ಷಣಗಳ ಅಭಿವ್ಯಕ್ತಿಗೆ ಕಾರಣವಾಗಿದೆ ಎಂದು ಸಿಪಿಐ(ಎಂ) ಪ್ರತಿಪಾದಿಸಿದೆ. 'ಗುಣಲಕ್ಷಣಗಳು' ಎಂಬ ಪದದ ಅರ್ಥ ಲಕ್ಷಣಗಳು ಅಥವಾ ಪ್ರವೃತ್ತಿಗಳು. ಅವು ನವ–ಫ್ಯಾಸಿಸ್ಟ್ ಸರ್ಕಾರ ಮತ್ತು ರಾಜಕೀಯ ವ್ಯವಸ್ಥೆಯಾಗಿ ಪೂರ್ಣವಾಗಿ ಬೆಳೆದಿಲ್ಲ. ಆದ್ದರಿಂದ, ಬಿಜೆಪಿ–ಆರ್‌ಎಸ್‌ಎಸ್ ಅನ್ನು ಎಲ್ಲಾ ರೀತಿಯಲ್ಲೂ ಹಿಮ್ಮೆಟ್ಟಿಸದಿದ್ದರೆ ಮತ್ತು ಸೋಲಿಸದಿದ್ದರೆ, ಹಿಂದುತ್ವ–ಕಾರ್ಪೊರೇಟ್ ಸರ್ವಾಧಿಕಾರವು ನವ–ಫ್ಯಾಸಿಸಂ ಕಡೆಗೆ ಹೋಗುವ ಅಪಾಯವಿದೆ ಎಂಬುದರ ಬಗ್ಗೆ ಸಿಪಿಐ(ಎಂ) ರಾಜಕೀಯ ನಿರ್ಣಯವು ಮಾತನಾಡುತ್ತದೆ.

ಇಂತಹ ಕೂದಲು ಸೀಳುವ ವಿಶ್ಲೇಷಣೆಯ ಅಗತ್ಯವಿದೆಯೇ ಎಂದು ಕೆಲವು ಪ್ರಜ್ಞಾವಂತ ಜನರು ಪ್ರಶ್ನೆ ಮಾಡಿದ್ದಾರೆ. ಇಂತಹ ವಿಶ್ಲೇಷಣೆಗಳಿಂದ ಫ್ಯಾಸಿಸಂ ವಿರೋಧಿ ಹೋರಾಟವನ್ನು ದುರ್ಬಲಗೊಳಿಸಿದಂತಾಗುತ್ತದೆ ಎಂದು ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಜನತೆಯ ಪರವಾಗಿ ಯೋಚಿಸುವವರ ಇಂತಹ ಆತಂಕಗಳನ್ನು ಅಭಿಪ್ರಾಯಗಳನ್ನು ಸಿಪಿಐ(ಎಂ) ಕಡೆಗಣಿಸುವುದಿಲ್ಲ. ಆದರೆ ಭಾರತದ ಜನತೆಯ ಪ್ರಜಾಪ್ರಭುತ್ವ ಮತ್ತು ಸಮತೆಯ ಆಶಯಗಳನ್ನು ಬಯಸುವವರು, ತಾವು ಎದುರಿಸಬೇಕಾದ ಶತ್ರುಗಳ ಸ್ವರೂಪವನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಅಗತ್ಯವಾಗಿದೆ. ಫ್ಯಾಸಿಸಂ ವಿರೋಧಿ ಹೋರಾಟವನ್ನು ಫ್ಯಾಸಿಸಂನ ಸಮರ್ಪಕ ವಿಶ್ಲೇಷಣೆಯಿಲ್ಲದೆ ನಡೆಸುವುದು ಕಷ್ಟ. ಭಾರತದ ಜನತೆ ನಡೆಸಬೇಕಾದ ಹೋರಾಟದ ದಿಕ್ಕು, ಫ್ಯಾಸಿಸಂ ಪೂರ್ಣವಾಗಿ ಜಾರಿಯಲ್ಲಿದ್ದರೆ ಒಂದು ರೀತಿ ಇರುತ್ತದೆ, ಜಾರಿಯಾಗುವ ನಿಟ್ಟಿನಲ್ಲಿ ಸಾಗುತ್ತಿದ್ದರೆ ಮತ್ತೊಂದು ರೀತಿ ಇರುತ್ತದೆ ಎಂಬುದನ್ನು ಸಿಪಿಐ(ಎಂ) ಹೇಳಲು ಬಯಸುತ್ತಿದೆ. ಸಮಸ್ಯೆಯ ಸ್ವರೂಪ, ಪ್ರಮಾಣ ಮತ್ತು ಹಂತ ಇವುಗಳನ್ನು ಅನುಸರಿಸಿ ಚಿಕಿತ್ಸೆ ನೀಡುವುದು ಸೂಕ್ತ. ಮುಂದೆ ಸಮಸ್ಯೆ ಬರಲಾರದ ಹಾಗೆ ಗಮನಿಸುವುದು ಅಗತ್ಯ ಎಂಬ ನೆಲೆಯಲ್ಲಿ ಸಿಪಿಐ(ಎಂ) 'ನವ–ಫ್ಯಾಸಿಸಂ' ಕುರಿತು ವಿಶ್ಲೇಷಣೆ ಮಾಡಿದೆ.

ಹೀಗಾಗಿ ಹಿಂದುತ್ವ–ಕೋಮುವಾದವನ್ನು ಮತ್ತು ಕಾರ್ಪೊರೇಟ್ ಲೂಟಿಯನ್ನು ಒಟ್ಟೊಟ್ಟಿಗೆ ಎದುರಿಸುವ ಕಣ್ಣೋಟವನ್ನು ಹೊಂದಿದ್ದರೆ ಮಾತ್ರ ನವ–ಫ್ಯಾಸಿಸಂ ಅನ್ನು ಎದುರಿಸಲು ಮತ್ತು ಸೋಲಿಸಲು ಸಾಧ್ಯ. ನವ–ಉದಾರವಾದಿ ನೀತಿಗಳು ಮತ್ತು ಅದು ಉಂಟು ಮಾಡುತ್ತಿರುವ ಬಿಕ್ಕಟ್ಟುಗಳ ಬಗ್ಗೆ ಕಣ್ಣು ಮುಚ್ಚಿಕೊಂಡು ಫ್ಯಾಸಿಸಂ ಅನ್ನು ಎದುರಿಸಬಯಸುವ ಎಲ್ಲರೂ ಈ ಅಂಶಗಳನ್ನು ಗಮನಿಸಬೇಕೆಂಬುದು ಸಿಪಿಐ(ಎಂ)ನ ಆಶಯವಾಗಿದೆ.

ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ..... ಪುಟ 12 ರಿಂದ

ಮತ್ತು ಕಾರ್ಯನಿರ್ವಾಹಕ ಕ್ರಮಗಳು ಫ್ಯಾಸಿಸ್ಟ್ ಉದ್ದೇಶದೊಂದಿಗೆ ಉಗ್ರ ಸರ್ವಾಧಿಕಾರತ್ವವನ್ನು ಪ್ರದರ್ಶಿಸುತ್ತವೆ.

ಹೀಗಾಗಿ, ಈ ಸಂದೇಶವನ್ನು ಕಾರ್ಮಿಕರ ಸಮೂಹಕ್ಕೆ ಕೊಂಡೊಯ್ಯಬೇಕು ಮತ್ತು ಇಂತಹ ದಾಳಿಗಳನ್ನು ವಿರೋಧಿಸಲು ಮತ್ತು ಅವರು ಕಷ್ಟಪಟ್ಟುಗಳಿಸಿದ ಹಕ್ಕುಗಳನ್ನು ಮಾತ್ರವಲ್ಲದೆ ಇಡೀ ಸಮಾಜ ಮತ್ತು ರಾಷ್ಟ್ರವನ್ನು ಕಾರ್ಪೊರೇಟ್ ಕೋಮು ಆಡಳಿತದ ವಿಕೃತ ಕುತಂತ್ರಗಳಿಂದ ರಕ್ಷಿಸಲು ಕಾರ್ಮಿಕರನ್ನು ಸಜ್ಜುಗೊಳಿಸಬೇಕು. ಈ ಸಾರ್ವತ್ರಿಕ ಮುಷ್ಕರವು ನಮ್ಮ ರಾಷ್ಟ್ರದ ಆರ್ಥಿಕ ಸಾರ್ವಭೌಮತ್ವ ಉಳಿಸುವ ಪ್ರಮುಖ ಭಾಗವಾಗಿದೆ ಎಂದು ಅವರಿಗೆ ಅರಿವು ಮೂಡಿಸಬೇಕು.

ನವ–ಫ್ಯಾಸಿಸ್ಟ್ ಗುಣಲಕ್ಷಣಗಳ ಅಧಿಕೃತ ಆಗಮನದ ನಂತರ, ನಮ್ಮ ದೇಶದ ಕಾರ್ಮಿಕ ವರ್ಗವು ಇಲ್ಲಿಯವರೆಗೂ ನಡೆಸಿರುವ ಸಾರ್ವತ್ರಿಕ ಮುಷ್ಕರಗಳ ಸರಣಿಯಲ್ಲಿನ ಮತ್ತೊಂದು ಮುಷ್ಕರವೆಂದು ಪರಿಗಣಿಸಬಾರದು. ಈ ಮುಷ್ಕರವು ಕಾರ್ಮಿಕ ಸಂಹಿತೆಗಳ ಅನುಷ್ಠಾನವನ್ನು ತಡೆಯಲು ತೀವ್ರಗೊಂಡ ಪ್ರತಿಭಟನೆ ಮತ್ತು ಪ್ರತಿರೋಧದ ಹೋರಾಟಗಳ ಉನ್ನತ ಹಂತದ ಆರಂಭವೆಂದು ಅರ್ಥೈಸಿಕೊಳ್ಳಬೇಕು ಮತ್ತು ಆ ಪ್ರಕ್ರಿಯೆಯ ಮೂಲಕ ಆಡಳಿತ ವರ್ಗದ ಸಂಪೂರ್ಣ ಸರ್ವಾಧಿಕಾರಿ ಯೋಜನೆಯನ್ನು ಹಿಮ್ಮೆಟ್ಟಿಸಬೇಕು. ನವ–ಫ್ಯಾಸಿಸ್ಟ್ ಉದಾರವಾದದ ವಿರುದ್ಧದ ಒಗ್ಗಟ್ಟಿನ ಹೋರಾಟಗಳನ್ನು ಕಾರ್ಮಿಕ ವರ್ಗವು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ತಳಮಟ್ಟದ ನೆಲವನ್ನು ಸಿದ್ಧಪಡಿಸಬೇಕು. ಈ ಮೂಲಕ ಕಾರ್ಮಿಕ ವರ್ಗವು ತನ್ನ ಐತಿಹಾಸಿಕ ಪಾತ್ರದ ಬಗ್ಗೆ ಹೆಚ್ಚು ಜಾಗೃತವಾಗಿರಬೇಕು.

ಅನು: ನಾಗರಾಜ ನಂಜುಂಡಯ್ಯ

ವಿಕಸಿತ ಭಾರತದ ಪುಂಗಿ: ಕಾರ್ಖಾನೆಗಳಲ್ಲಿ ಕಾಣದ ಮಹಿಳೆಯರು

ಅಂಕಿ ಸಂಖ್ಯೆ ನೋಡುವುದಾದರೆ, 2015ರಲ್ಲಿ ಸಂಘಟಿತ ವಲಯದಲ್ಲಿ ಶೇ. 20.9ರಷ್ಟು ಮಹಿಳೆಯರಿದ್ದರು. 2022–23ರಲ್ಲಿ ಈ ಪ್ರಮಾಣ ಶೇ.18.9ಕ್ಕೆ ಕುಸಿಯಿತು (8.34 ದಶಲಕ್ಷ ಕೆಲಸಗಾರರಲ್ಲಿ 1.57 ದಶಲಕ್ಷವಷ್ಟೇ ಮಹಿಳೆಯರು). ಎದ್ದು ಕಾಣುವ ವಿಷಯವೆಂದರೆ, ಇಡೀ ದೇಶದಲ್ಲಿ ಸಂಘಟಿತ ಅಥವ ಔಪಚಾರಿಕ ಉತ್ಪಾದನಾ ವಲಯದಲ್ಲಿ ದುಡಿಯುತ್ತಿರುವ ಒಟ್ಟು ಮಹಿಳಾ ಕಾರ್ಮಿಕರಲ್ಲಿ ಶೇ.41 ತಮಿಳುನಾಡಿನಲ್ಲಿ, ಶೇ.15 ಕರ್ನಾಟಕದಲ್ಲಿ, ಶೇ.6 ಆಂಧ್ರಪ್ರದೇಶದಲ್ಲಿ, ಶೇ.6 ಮಹಾರಾಷ್ಟ್ರದಲ್ಲಿ ಮತ್ತು ಗುಜರಾತಿನಲ್ಲಿ ಶೇ.5. ಅಂದರೆ ಮುಕ್ಕಾಲು ಪಾಲು ಈ ಐದು ರಾಜ್ಯಗಳಿಗೇ ಸೇರಿದವರು. ಇದೆ ರೀತಿ ಅಸಂಘಟಿತ ಅಥವ ಅನೌಪಚಾರಿಕ ಉತ್ಪಾದನಾ ವಲಯದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರಲ್ಲಿ ಸುಮಾರು ಅರ್ಧದಷ್ಟು ಪಶ್ಚಿಮ ಬಂಗಾಳ (ಶೇ.16), ಉತ್ತರ ಪ್ರದೇಶ (ಶೇ.11), ತಮಿಳುನಾಡು (ಶೇ.9), ಮಹಾರಾಷ್ಟ್ರ ಮತ್ತು ತೆಲಂಗಾಣ (ತಲಾ ಶೇ.7) ದಲ್ಲಿ ದುಡಿಯುತ್ತಿದ್ದಾರೆ.

ಅಸಂಘಟಿತ ವಲಯದಲ್ಲಿನ ಈ ಶೇ.43ರಷ್ಟು ಮಹಿಳೆಯರ ಸಂಬಳ ಮತ್ತು ಅನುಕೂಲತೆಗಳು

> **ವಿಕಸಿತ ಭಾರತಕ್ಕೆ ಉತ್ಪಾದನೆ ಬಹಳ ಮುಖ್ಯ. ವಿಕಸಿತ ಭಾರತದ ಬೆನ್ನೆಲುಬು ನಾರಿ (ಮಹಿಳೆ). ಆದರೆ ಇಂದಿನ ಭಾರತದ ಕಾರ್ಖಾನೆಗಳ ನೆಲದಲ್ಲಿ ಮಹಿಳೆಯರು ಕಾಣುವುದಿಲ್ಲ!! ನಿಮ್ಮ ತಕರಾರು ಗೊತ್ತಾಯಿತು. ಕಾಣಬೇಕಾದ ಪ್ರಮಾಣದಲ್ಲಿ ಕಾಣುವುದಿಲ್ಲ ಎನ್ನೋಣ. ಸರಿಯೇ? ಇನ್ನೂ ಇದನ್ನು ಸರಿಯಾಗಿ ಹೇಳುವುದಾದರೆ ನಮ್ಮ ಪಕ್ಕದ ಬಾಂಗ್ಲಾದೇಶ ಅಥವಾ ವಿಯೆಟ್ನಾಂ ದೇಶಗಳಲ್ಲಿರುವ ಪ್ರಮಾಣದಲ್ಲೂ ಭಾರತದಲ್ಲಿ ಇಲ್ಲ.**

ಗಮನಾರ್ಹವಾಗಿ ಕಡಿಮೆ ಇರುತ್ತದೆ. ದೇಶದ ಒಟ್ಟು ಉತ್ಪಾದನೆಯ ಶೇ.20ರಷ್ಟು ಸರಕು ಉತ್ಪಾದನೆಯಿಂದ ಬರುತ್ತದೆ. ಭಾರತದ ಆರ್ಥಿಕತೆಗೆ ಇದು ಮುಖ್ಯ ವಲಯವಾಗಿ ಉದ್ಭವಿಸಿದೆ. ಆದರೂ ಮಹಿಳೆಯರ ಭಾಗವಹಿಸುವಿಕೆ ಬಹಳ ಕಡಿಮೆ ಇದೆ.

ಹೀಗೆ ಉದ್ಯೋಗ ನೀಡುವಲ್ಲಿನ ಲಿಂಗ ಅಸಮಾನತೆಯನ್ನು ನೋಡುವುದಾದರೆ, ಬಿಹಾರ, ಪಶ್ಚಿಮ ಬಂಗಾಳ, ಛತ್ತೀಸ್‌ಘಢ ಮತ್ತು ಹರಿಯಾಣ ಅತ್ಯಂತ ಹೆಚ್ಚಿನ ಲಿಂಗ ಅಸಮಾನತೆ ಹೊಂದಿವೆ. ಸಂಘಟಿತ ವಲಯದಲ್ಲಿ ಬರೀ ಶೇ.6ರಷ್ಟು ಮಹಿಳೆಯರಿದ್ದಾರೆ. ಮಹಿಳೆಯರು ಎಂತಹ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಾರೆಂದು ನೋಡಿದರೆ, ಶೇ.60ರಷ್ಟು ಮಹಿಳೆಯರು ಜವಳಿ, ಸಿದ್ದ ಉಡುಪು, ಆಹಾರ ಸಂಸ್ಕರಣೆ ಉದ್ದಿಮೆಗಳಲ್ಲಿ ಇದ್ದಾರೆ. ಅಸಂಘಟಿತ ವಲಯ ನೋಡಿದರೆ ಮಹಿಳೆಯರು ಸಿದ್ದ ಉಡುಪು ಮತ್ತು ತಂಬಾಕು ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ತಂಬಾಕು ಉದ್ದಿಮೆಯಲ್ಲಿ ಮಹಿಳೆಯರೇ ದೊಡ್ಡ ಪ್ರಮಾಣದಲ್ಲಿದ್ದಾರೆ. ಸುಮಾರು ಶೇ.90ರಷ್ಟು ಕೆಲಸಗಾರರು ಮಹಿಳೆಯರೇ ಆಗಿದ್ದಾರೆ. ಇದರರ್ಥ ತಂಬಾಕು ಉದ್ಯಮದಂತಹ ಕಡಿಮೆ ಸಂಬಳ ಮತ್ತು ಕಡಿಮೆ ಅನುಕೂಲತೆಗಳು ಇರುವ ಕೆಲಸಗಳಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬುದು.

ಮಹಿಳೆಯರಲ್ಲಿ ಕಡಿಮೆ ಕೌಶಲ್ಯವಿದೆ ಎಂಬುದೂ ಇಂಥ ಪರಿಸ್ಥಿತಿಗೆ ಒಂದು ಕಾರಣ. ಮಹಿಳೆಯರಿಗೆ ಕೌಶಲ್ಯ ತರಬೇತಿ ನೀಡುವ ಅವಶ್ಯಕತೆ ಇದೆ. ಪಿಎಲ್‌ಎಫ್‌ಎಸ್‌ನ ಸಮೀಕ್ಷೆ ಪ್ರಕಾರ ಶೇ.6ರಷ್ಟು ಮಹಿಳೆಯರಿಗೆ ಮಾತ್ರ ಕೌಶಲ್ಯ ತರಬೇತಿ ದೊರೆತಿದೆ. ಮಹಿಳೆಯರಲ್ಲಿ ಶಿಕ್ಷಣ ಕಡಿಮೆ ಇರುವುದೂ ಇನ್ನೊಂದು ಕಾರಣ. ಪ್ರೌಢ ಮತ್ತು ಅದರ ಮೇಲಿನ ಶಿಕ್ಷಣವು ಪುರುಷರಲ್ಲಿ ಶೇ.47ರಷ್ಟು ಜನರಿಗೆ ಸಿಕ್ಕಿದ್ದರೆ, ಮಹಿಳೆಯರಲ್ಲಿ ಶೇ.30ರಷ್ಟು ಜನರಿಗೆ ಮಾತ್ರ ದೊರೆತಿದೆ. ವೈವಿಧ್ಯಮಯ ಉದ್ದಿಮೆಗಳಲ್ಲಿ ಮಹಿಳೆಯರಿಗೆ ಅವಕಾಶ ಕೊಡುವ ಅವಶ್ಯಕತೆಯೂ ಇದೆ. ಇನ್ನೊಂದು ಬಹುಮುಖ್ಯ ಅಂಶವೆಂದರೆ ಕೆಲಸದ ಸ್ಥಳವನ್ನು ಮಹಿಳೆಯರಿಗೆ ಸುರಕ್ಷಿತಗೊಳಿಸುವ ಕೆಲಸ ಎಲ್ಲ ಕಡೆಗಳಲ್ಲಿಯೂ ಅವಶ್ಯವಾಗಿ ಆಗಬೇಕಾಗಿದೆ. ತಮಿಳುನಾಡಿನಲ್ಲಿ ದುಡಿವ ಮಹಿಳೆಯರ ವಸತಿಗೃಹಗಳನ್ನು ಪ್ರಾರಂಬಿಸಲಾಗಿದೆ. ಇಂತಹ ಕ್ರಮಗಳು ಎಲ್ಲ ರಾಜ್ಯಗಳಲ್ಲೂ ಆಗಬೇಕಾಗಿದೆ.

ವಿಕಸಿತ ಭಾರತದ ಪುಂಗಿಯನ್ನು ಎಲ್ಲೆಂದರಲ್ಲಿ ಊದುವ "ವಿಶ್ವಗುರುಗಳಿಗೆ" ವಿಕಸಿತ ಭಾರತ ಕಟ್ಟಲು ಪುರುಷ ಮತ್ತು ಮಹಿಳೆಯರಿಬ್ಬರೂ ಸಮನಾಗಿ ಕೆಲಸ ಮಾಡುವ ಮತ್ತು ಇರುವ ಪ್ರತಿಭೆಗಳನ್ನು ಸಮರ್ಥವಾಗಿ ಬಳಸಬೇಕು ಎಂಬ ಸಾಮಾನ್ಯ ತಿಳುವಳಿಕೆ ಇರಬೇಡವೆ? ಸದಾ ವಿಭಜನೆಯ ರಾಜಕಾರಣ ಮಾಡುತ್ತಾ ಬೇರೆಯವರಿಗೆ ಬುದ್ಧಿ ಹೇಳುವ ಈ ನಾಯಕರುಗಳಿಗೆ ದೇಶ ಕಟ್ಟಲು ಬೇಕಾದ ಸದ್ಬುದ್ಧಿ ಇರಬೇಡವೆ?

ಅನು: ಜಿ.ಎಸ್.ಮಣಿ (*ಕೃಪೆ: ದಿ ಹಿಂದು*)

ಸುಂಕ–ದಾಳಿ: ಬರಿದೇ ಟ್ರಂಪ್ 'ಹುಚ್ಚುತನ'ವಲ್ಲ.....

ಪುಟ 13 ರಿಂದ

"ಬಸಿಯುವ", ಪ್ರಮಾಣವೂ ಕುಗ್ಗುತ್ತ ಹೋಗುತ್ತದೆ. ಇವುಗಳಲ್ಲಿ ಅಪ–ಕೈಗಾರೀಕರಣದ ಅವಕಾಶ ಕುಗ್ಗುತ್ತ ಹೋಗುವ ಬಗ್ಗೆ ರೋಸಾ ಲಕ್ಸೆಂಬರ್ಗ್ ಗಮನ ಸೆಳೆದಿದ್ದರು. ಸಾಮ್ರಾಜ್ಯಶಾಹಿಗೆ ಕಾರಣವಾಗುವ ಅಂಶಗಳ ಬಗ್ಗೆ ಅವರ ತರ್ಕಗಳು ಅದರದ್ದೇ ಆದ ಮಿತಿಗಳನ್ನು ಹೊಂದಿದ್ದರೂ ಸಹ, ಮಹಾನಗರೀಯ ಬಂಡವಾಳಶಾಹಿಯು ತಾನು ಅಭಿವೃದ್ಧಿ ಹೊಂದುತ್ತಿದ್ದಂತೆಯೇ ಹೆಚ್ಚು ಹೆಚ್ಚು ತೊಂದರೆಗಳನ್ನು ಎದುರಿಸಬೇಕಾಗಿ ಬಂದಿದೆ ಎಂಬುದನ್ನು ಅವರು ಗುರುತಿಸಿದ್ದರು ಎಂಬ ಹೆಗ್ಗಳಿಕೆಯೂ ಇದೆ.

ಪೊಳ್ಳು ವಿವರಣೆ

ಟ್ರಂಪ್ ಸುಂಕ ಯುದ್ಧವನ್ನು ಹರಿಯ ಬಿಡಲು ಅವರ "ಹುಚ್ಚುತನ" ಅಥವಾ ಪ್ರಪಂಚದ ಉಳಿದ ದೇಶಗಳ ಬಗ್ಗೆ ಅವರು ಹೊಂದಿರುವ "ತಿರಸ್ಕಾರ" ಮುಂತಾದ ಕಾರಣಗಳನ್ನು ಕೊಡಲಾಗುತ್ತದೆ. ಆದರೆ, ವಾಸ್ತವವಾಗಿ ಇದು ಬಂಡವಾಳಶಾಹಿಯು ಪ್ರೌಡಾವಸ್ಥೆಗೆ ಬರುತ್ತಿರುವಂತೆಯೇ, ಆ ಬೆಳವಣಿಗೆಯಲ್ಲೇ ಆಳವಾಗಿ ಬೇರೂರಿರುವ ವೈರುಧ್ಯಗಳಿಂದಲೇ ಹೊಮ್ಮಿರುವಂತದ್ದು. ಟ್ರಂಪ್ ಅವರ "ಹುಚ್ಚುತನ" ಅದನ್ನು ಹರಿಯಬಿಟ್ಟಿದೆ ಎಂದು ಹೇಳುವುದು ಒಂದು ಅತ್ಯಂತ ಪೊಳ್ಳು ವಿವರಣೆಯಾಗುತ್ತದೆ. ವಿಪರ್ಯಾಸವೆಂದರೆ, ಟ್ರಂಪ್ ಆಡಳಿತವು ಸುಂಕಗಳನ್ನು ವಿಧಿಸುವುದರಿಂದ, ಉದ್ಯೋಗವನ್ನು ಹೆಚ್ಚಿಸುವ ಮತ್ತು ಅದರ ಚಾಲ್ತಿ ಖಾತೆಯ ಕೊರತೆಯನ್ನು ಇಳಿಕೆ ಮಾಡುವ ಈ ಎರಡೂ ವಿಧಾನಗಳ ಮೂಲಕ ಅಮೆರಿಕ ಪ್ರಯೋಜನ ಪಡೆಯಬಹುದು. ಆದರೆ ಇದು ಇತರ ದೇಶಗಳು ತಮ್ಮ ಸುಂಕಗಳನ್ನು ಏರಿಸುವ ಮೂಲಕ ಪ್ರತೀಕಾರ ತೀರಿಸಿಕೊಳ್ಳದಿದ್ದರೆ ಮಾತ್ರ ಸಾಧ್ಯ. ಬೇರೆ ದೇಶಗಳು ಪ್ರತೀಕಾರಕ್ಕೆ ಇಳಿದರೆ, ಈ ಸುಂಕಗಳಿಂದ ಅಮೆರಿಕಕ್ಕೆ ಯಾವ ಪ್ರಯೋಜನವೂ ಲಭಿಸುವುದಿಲ್ಲ ಮಾತ್ರವಲ್ಲ, ಇಂತಹ ಪ್ರತೀಕಾರದ ಸನ್ನಿವೇಶದಲ್ಲಿ ಇಡೀ ಬಂಡವಾಳಶಾಹಿ ಜಗತ್ತಿನ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ.

ಎಲ್ಲೆಡೆಯೂ ಏರಿಕೆಯಾದ ಸುಂಕಗಳು, ಹಣ ವೇತನಗಳಿಗೆ ಹೋಲಿಸಿದರೆ, ಸರಕು ಸಾಮಗ್ರಿಗಳ ಬೆಲೆಗಳನ್ನು ಏರಿಸುತ್ತವೆ. ಹಾಗಾಗಿ ಲಾಭದ ಗಾತ್ರ ಹೆಚ್ಚುತ್ತದೆ. ಆದ್ದರಿಂದ ವೇತನದಿಂದ ಲಾಭದತ್ತ ಪಲ್ಲಟ ಉಂಟಾಗುತ್ತದೆ. ಈ ಪಲ್ಲಟವು ಒಟ್ಟು ಬೇಡಿಕೆಯ ಪ್ರಮಾಣವನ್ನು ಇಳಿಸುತ್ತದೆ. ಏಕೆಂದರೆ ಲಾಭದ ಬಹು ದೊಡ್ಡ ಭಾಗವು ಬಳಕೆಯಾಗುವುದಿಲ್ಲ; ಆದರೆ, ವೇತನದ ಭಾಗವು ಬಹುತೇಕ ಇಡಿಯಾಗಿ ಬಳಕೆಯಾಗುತ್ತದೆ. ಈ ಅಂಶವು, ಉತ್ಪಾದನೆಯು ಯಾವುದೇ ನಿರ್ದಿಷ್ಟ ಮಟ್ಟದಲ್ಲಿರಲಿ, ಬಳಕೆಯ ಮಟ್ಟವನ್ನು ಇಳಿಕೆ ಮಾಡುತ್ತದೆ. ಹಾಗಾಗಿ, ಇದು ವಿಶ್ವ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಯ ಮತ್ತು ಉದ್ಯೋಗಗಳ ಇಳಿಕೆಗೆ ಕಾರಣವಾಗುತ್ತದೆ. ಇದನ್ನು ನಿಜಕ್ಕೂ ತಡೆಯಬಹುದು. ಶ್ರೀಮಂತರ ಮೇಲಿನ ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಒದಗಿಸಿಕೊಂಡ ಹಣವನ್ನು ಅಥವಾ ಒಂದು ಬೃಹತ್ ವಿತ್ತೀಯ ಕೊರತೆಯ ಮೂಲಕ ಒದಗಿಸಿಕೊಂಡ ಹಣವನ್ನು ಪ್ರಭುತ್ವವು ತನ್ನ ವೆಚ್ಚಗಳ ಮೂಲಕ ಬಳಕೆಮಾಡಿದಾಗ ಮಾತ್ರ ಇದು ಸಾಧ್ಯ. ಆದರೆ, ಪ್ರಭುತ್ವವು ತನ್ನ ವೆಚ್ಚಗಳಿಗೆ ಹಣ ಒದಗಿಸಿಕೊಳ್ಳುವ ಈ ಎರಡೂ ವಿಧಾನಗಳನ್ನೂ ಜಾಗತೀಕರಣಗೊಂಡ ಹಣಕಾಸು ವ್ಯವಸ್ಥೆಯು ಸಹಿಸುವುದಿಲ್ಲ. ಹಾಗಾಗಿ, ವಿಶ್ವಾದ್ಯಂತ ಸುಂಕ ಏರಿಕೆ ಅಲೆಯು ವಿಶ್ವ ಬಂಡವಾಳಶಾಹಿಯ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತದೆ. ಆದರೆ ಅಂತಹ ಒಂದು ಬೆಳವಣಿಗೆ ಸಂಭವಿಸಿದರೂ, ಅದು ಡೊನಾಲ್ಡ್ ಟ್ರಂಪ್‌ನ "ಹುಚ್ಚುತನ"ದಿಂದ ಉಂಟಾಗುವ ಫಲಿತಾಂಶಕ್ಕಿಂತ ಹೆಚ್ಚಾಗಿ ವಿಶ್ವ ಬಂಡವಾಳಶಾಹಿಯಲ್ಲಿನ ಮೂಲಭೂತ ವೈರುಧ್ಯಗಳ ಅಭಿವ್ಯಕ್ತಿಯೇ.

ಪರ್ಯಾಯ ದಾರಿ


ನಮ್ಮ ಮುಂದಿರುವ ಪ್ರಶ್ನೆ 'ಟ್ರಂಪ್‌ರ ಸುಂಕ' ಏರಿಕೆಗೆ ಹೇಗೆ ಪ್ರತಿಕ್ರಿಯಿಸಬೇಕು ಎಂಬುದು. ಟ್ರಂಪ್‌ರ ಈ ದಾಳಿ ಒಂದು ಮಹತ್ವದ ಅಂಶವನ್ನು, ಅಮೆರಿಕದಿಂದ ಜಾಗತಿಕ ದಕ್ಷಿಣಕ್ಕೆ ಚಟುವಟಿಕೆಗಳನ್ನು ಪಸರಿಸುವ ಯುಗ ಅಂತ್ಯವಾಗಿದೆ ಎಂಬುದನ್ನು ಸೂಚಿಸುತ್ತದೆ. ಆ ಮೂಲಕ ನವ ಉದಾರವಾದಿ ನೀತಿಯನ್ನು ಅನುಸರಿಸುವುದಕ್ಕೆ ತಾರ್ಕಿಕ ಆಧಾರವೂ ಔಪಚಾರಿಕವಾಗಿ ಅಂತ್ಯಗೊಂಡಿದೆ. ಭಾರತದಂತಹ ದೇಶಗಳು ತಮ್ಮ ಮುನ್ನಡೆಯ ದಿಕ್ಪಥವನ್ನು ಬದಲಾಯಿಸಬೇಕಾದ ಸಮಯ ಈಗ ಬಂದಿದೆ.



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, @ ಫೇಸ್‌ಬುಕ್

ಈ ಬದಲಾವಣೆಯು ಅರ್ಥವ್ಯವಸ್ಥೆಯನ್ನು ರಕ್ಷಿಸುವ ಮತ್ತು ದೇಶೀಯ ಮಾರುಕಟ್ಟೆಯನ್ನು ವಿಸ್ತರಿಸುವ ಮೂಲಕ ಪ್ರಾರಂಭವಾಗಬೇಕು. ಅರ್ಥವ್ಯವಸ್ಥೆಯ ರಕ್ಷಣೆಯೊಂದೇ ಸಾಲದು. ಅದರೊಂದಿಗೆ ಜನಕಲ್ಯಾಣ ಕಾರ್ಯಗಳನ್ನು ಹೆಚ್ಚಿಸಲು, ಕೃಷಿ ಮತ್ತು ಸಣ್ಣ ಕೈಗಾರಿಕೆಗಳ ಬೆಳವಣಿಗೆಯನ್ನು ಉತ್ತೇಜಿಸಲು ಪ್ರಭುತ್ವವು ಹೆಚ್ಚು ಹೆಚ್ಚು ವೆಚ್ಚಗಳನ್ನು ಕೈಗೊಳ್ಳಬೇಕು. ಅದಕ್ಕಾಗಿ ಸಂಪತ್ತು ತೆರಿಗೆಯನ್ನು ವಿಧಿಸಬೇಕು. ಆ ಮೂಲಕ ಒದಗಿಸಿಕೊಂಡ ಹಣದಿಂದ ಈ ವೆಚ್ಚಗಳನ್ನು ಕೈಗೊಂಡಾಗ ಮಾತ್ರವೇ ಆಂತರಿಕ ಮಾರುಕಟ್ಟೆಯ ಗಾತ್ರವೂ ಸಹ ಅದೇ ಸಮಯದಲ್ಲಿ ವೃದ್ಧಿಸುತ್ತದೆ.

ಈ ಉದ್ದೇಶದ ಈಡೇರಿಕೆಗಾಗಿ ಸರ್ಕಾರವು ಕಾರ್ಯಪ್ರವೃತ್ತವಾದಾಗ ಅದು ಹಣಕಾಸು ಬಂಡವಾಳದ ಹೊರಹರಿವಿಗೆ ಕಾರಣವಾಗಬಹುದು. ಈ ಹೊರಹರಿವನ್ನು ತಡೆಯಲು, ಬಂಡವಾಳ ನಿಯಂತ್ರಣಗಳನ್ನು ಜಾರಿಗೆ ತರಬೇಕು. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಸ್ತುತ ಕಾಲಘಟ್ಟದಲ್ಲಿ ಭಾರತದಂತಹ ದೇಶಗಳಿಗೆ ಸಮತೆಯ, ಜನ ಕಲ್ಯಾಣದ, ಆಂತರಿಕ ಮಾರುಕಟ್ಟೆ–ಆಧಾರಿತ, ಮತ್ತು ಪ್ರಭುತ್ವ–ಪೋಷಿತ ಅಭಿವೃದ್ಧಿಯ ಕಾರ್ಯತಂತ್ರವನ್ನು ಅನುಸರಿಸುವುದಲ್ಲದೆ ಬೇರೆ ಪರ್ಯಾಯವಿಲ್ಲ ಎಂಬ ಅಂಶದತ್ತ ಟ್ರಂಪ್ ಸುಂಕಗಳು ಜನರ ಕಣ್ಣು ತೆರೆಸಲಿ.



ವ್ಯಂಗ್ಯಚಿತ್ರ: ಮಂಜುಲ್, @ ಫೇಸ್‌ಬುಕ್

NEW No. MAG(3)/NPP/205/2021-2022
JANASHAKTHI KANNADA VARA PATRIKE April 21-27, 2025 Price: Rs. 10/- Date of Publication: 18 April 2025 RNI No. KARKAN/2006/17926 Posted on 22-04-2025
Posted at BG PSO, BG - 560026 **Posted at Periodical Rate -** Rs. 2

ಮಾರ್ಚ್ 27 ‘ಬೀದಿ ರಂಗಭೂಮಿ ದಿನ’

ನನ್ನ ಬೊಗಸೆ ಖಾಲಿಯಾಗಿಯೇ ಉಳಿಯಿತು

ನಮ್ಮೆಲ್ಲರ ಪ್ರೀತಿಯ ಸಫ್ದರ್ ಹಷ್ಮಿ ಅವರನ್ನು ಅವರ ನಿರ್ದೇಶನದ ‘ಹಲ್ಲಾ ಬೋಲ್’ ಪ್ರದರ್ಶನದ ವೇಳೆ ಹಲ್ಲೆ ಮಾಡಿ ಕೊಲೆ ಮಾಡಲಾಯಿತು. ಬೀದಿ ನಾಟಕ `Short in length, Strong in statement' ನಂತೆ. ನಾನೂ ಸಹಾ ಬೀದಿ ನಾಟಕಗಳ ಚಳವಳಿಯ ಒಳಗೆ ಬೆರೆತವನು. ಬೀದಿ ನಾಟಕ ಕುರಿತು ಪುಸ್ತಕ ಪ್ರಕಟಿಸಿದವನು. ನನ್ನನ್ನು ಇನ್ನಿಲ್ಲದಂತೆ ಕಾಡಿದ ಅನುಭವ ಇಲ್ಲಿದೆ.

ಜಿ.ಎನ್. ಮೋಹನ್

ಬೀದಿ ನಾಟಕದ ಶಕ್ತಿ, ಸಾಮರ್ಥ್ಯದ ಕುರಿತು ಅನುಭವ ಕಥನ, ಹುತಾತ್ಮ ಸಫ್ದರ್ ಹಷ್ಮಿ ಯವರ ಜನ್ಮದಿನದ ಸಂದರ್ಭದಲ್ಲಿ.

ಸಿಕ್ಕಾಪಟ್ಟೆ ಕುಡಿದಿದ್ದೆ ನಿಲ್ಲಲಾಗುತ್ತಿರಲಿಲ್ಲ.. ತೂರಾಡುತ್ತಿದ್ದೆ.. ಮನೆಗೆ ಬಂದವನೇ ಕೈಗೆ ಸಿಕ್ಕಿದ್ದು ತೆಗೆದುಕೊಂಡು ಅವಳಿಗೆ ಬಡಿಯಲು ಶುರು ಮಾಡಿದೆ. ಅವಳು ನನ್ನ ಮೇಲೆ ಖಂಡಿತಾ ಕೈಯೆತ್ತಲಿಲ್ಲ, ಚೀರಲಿಲ್ಲ, ನೆರೆಯವರಿಗೆ ಕೇಳಿಸಲೂ ಬಾರದು ಎನ್ನುವಂತೆ ಬಿಕ್ಕಿದಳು.. ನನಗೆ ಅದರ ಕೇರೇ ಇರಲಿಲ್ಲ. ಇದ್ದ ಬುದ್ಧಿಯನ್ನು ಬದಿಗೆ ಬಿಸಾಡಿ ಅವಳನ್ನು ಬಡಿಯುತ್ತಾ ಹೋದೆ, ಬಡಿದೇ ಬಡಿದೆ.

ಇಷ್ಟೆಲ್ಲಾ ಆಗಿದ್ದು ದೂರದ ಕನಕಪುರದ ಆಚೆಯ ಒಂದು ಹಳ್ಳಿಯಲ್ಲಿ. ನಾನು ಕುಡುಕ ಗಂಡನ ವೇಷದಲ್ಲಿದ್ದೆ. ನನ್ನೆದುರು ಇದ್ದಾಕೆ ದಿನವಿಡೀ ದುಡಿದು ಸುಸ್ತಾಗಿ ಹೋಗಿದ್ದ ಹೆಣ್ಣು.

ಆಕೆ ಕೂಲಿಯ ಹೆಣ್ಣು,
ಆಕೆ ಕಾರ್ಖಾನೆಯ ಹೆಣ್ಣು,
ಆಕೆ ಕಾರ್ಪೊರೇಟ್ ಹೆಣ್ಣು,
ಆಕೆ ‘ಹೆಣ್ಣು’

ಅದು ಬೀದಿ ನಾಟಕ, ಸಾಂಸ್ಕೃತಿಕ ಜಾಥಾ ಅದು. ಊರಿಂದೂರಿಗೆ ತಿರುಗುತ್ತಾ, ಹಳ್ಳಿ, ಗಲ್ಲಿ, ಕಚೇರಿ ಎದುರು ಫ್ಯಾಕ್ಟರಿ ಮುಂದೆ ನಾಟಕ ಆಡುತ್ತಾ ಆಡುತ್ತಾ ಬರುತ್ತಿದ್ದೆವು. ಆಗ ನಡೆದು ಹೋಯಿತು ಒಂದು ಅಚ್ಚರಿ. ನಾನು ಕಲ್ಲಾಗಿ ನಿಂತುಬಿಟ್ಟೆ. ನನ್ನೊಳಗೆ ಅರಿವು ಬಿತ್ತಿದ ಘಟನೆ ಅದು. ಬೀದಿ ನಾಟಕ ಮುಗಿದು ಆದ ನಂತರ ಜಾಥಾದ ಖರ್ಚಿಗಾಗಿ ನಾಟಕ ನೋಡುತ್ತಿದ್ದವರಿಂದಲೇ ಹಣ ಸಂಗ್ರಹಿಸುತ್ತಿದ್ದೆವು. ನಾಟಕ ಮುಗಿದ ತಕ್ಷಣ ಎಲ್ಲಾ ನಟರೂ ಒಂದು ಟವೆಲ್ ಹಿಡಿದು ದೊಂಬರಾಟದವರ ರೀತಿ ಎಲ್ಲರ ಮುಂದೆ ಒಂದು ಸುತ್ತು ಹಾದು ಬರುತ್ತಿದ್ದೆವು. ನಾಟಕ ನೋಡಿದವರು ತಮ್ಮಲ್ಲಿದ್ದ ಪುಡಿಗಾಸಿನಿಂದ ಹಿಡಿದು ದೊಡ್ಡ ನೋಟಿನವರೆಗೆ ತಮ್ಮ ಕೈಲಾದಷ್ಟು ಆ ಟವೆಲ್ ನೊಳಗೆ ಸೇರಿಸುತ್ತಿದ್ದರು.

ಆಗ ಆಯಿತು ನೋಡಿ ಈ ಮ್ಯಾಜಿಕ್. ಎಲ್ಲಾ ನಟರೂ ಒಂದೆಡೆ ಸೇರಿ ತಮ್ಮ ಬಳಿ ಸಂಗ್ರಹವಾದ ಹಣವನ್ನು ಕೂಡಿಸಿ ತಂಡಕ್ಕೆ ಕೊಡಲು ಕುಳಿತರು. ನನ್ನ ಟವಲ್‌ನಲ್ಲಿ ಒಂದೇ ಒಂದು ಪೈಸೆ ಬಿದ್ದಿರಲಿಲ್ಲ. ನಾನೂ ಎಲ್ಲರಂತೆ ಪ್ರತಿಯೊಬ್ಬರ ಮುಂದೂ ಟವೆಲ್ ಹಿಡಿದು ತಿರುಗಿದ್ದೆ. ಆದರೆ ಒಬ್ಬರೆಂದರೆ ಒಬ್ಬರೂ ದುಡ್ಡು ಹಾಕಿರಲಿಲ್ಲ. ನನ್ನ ಕೈನಲ್ಲಿ ಇದ್ದದ್ದು ಖಾಲಿ ಟವೆಲ್ ಮಾತ್ರ.

ಆದರೆ ಇನ್ನೂ ಒಂದು ಮ್ಯಾಜಿಕ್ ಆಗಿಹೋಗಿತ್ತು. ಅದು ಇನ್ನೊಂದೇ ಹೊಸ ಪಾಠ. ಅದೇ ಕೂಲಿ ಹೆಣ್ಣಿನ ಮುಂದೆ ಇದ್ದ ಟವೆಲ್‌ನಲ್ಲಿ ಇನ್ನಿಲ್ಲದಷ್ಟು ಹಣ. ಆಕೆಯ ಟವೆಲ್ ಮೀರಿ ದುಡ್ಡು ಆಚೆ ತುಳುಕುತ್ತಿತ್ತು. ಕೇವಲ ಐದತ್ತು ನಿಮಿಷದಲ್ಲಿ ಜನ ಇತಿಹಾಸ ಬರೆದಿದ್ದರು. ಕುಡುಕನ, ಪೀಡಕನ, ಬುದ್ದಿ ಇಲ್ಲದವನ ಹಣೆಬರಹ ನಿರ್ಧರಿಸಿಬಿಟ್ಟಿದ್ದರು. ಅದೇ ವೇಳೆ ಬದುಕು ಕಟ್ಟಲು ಹೆಣಗಾಡುತ್ತಿದ್ದ ಮಹಿಳೆಯ ಭವಿಷ್ಯಕ್ಕೂ ಕೈ ಜೋಡಿಸಿದ್ದರು.

ಇದನ್ನು ಬರೆದದ್ದು ಆಹಾರ ಇಲಾಖೆಯನ್ನು ಎಡತಾಕಲಾಗದ, ಒಂದಿಷ್ಟು ರೇಷನ್ ಮುಖವನ್ನೂ ನೋಡಲಾಗದ, ಇನ್ನೂ ಹೆಬ್ಬೆಟ್ಟಾಗಿಯೇ ಉಳಿದಿರುವ, ಕಾರ್ಖಾನೆಗಳಲ್ಲಿ ದುಡಿದು ಮಕ್ಕಳ ಕನಸಿಗೆ ಬುನಾದಿ ಹಾಕಿ ಕೊಡುತ್ತಿದ್ದ, ಕಣ್ಣೀರಲ್ಲಿ ಕೈ ತೊಳೆದರೂ ಸ್ವಾಭಿಮಾನದಿಂದ ಬದುಕುತ್ತಿದ್ದ, ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ದುಡಿಯುತ್ತಿದ್ದ, ಗೋಡೆಗೆ ಸುಣ್ಣ ಹೊಡೆಯುತ್ತಿದ್ದ... ಈ ಎಲ್ಲಕ್ಕಿಂತ ಹೆಚ್ಚಾಗಿ ತಾವೂ ಕುಡುಕ ಗಂಡನನ್ನು ಪಡೆದಿದ್ದ, ಒದೆತ ತಿಂದಿದ್ದ ಬಿಕ್ಕಿದ್ದ ಜೀವಗಳು, ಜಗತ್ತು ಗೊತ್ತಿಲ್ಲದ, ಸೈಬರ್ ಲೋಕದಲ್ಲಿ ಉಸಿರೂ ಇಲ್ಲದ, ಯಾರ ಲೆಕ್ಕಕ್ಕೂ ಇಲ್ಲದ ಜೀವಗಳು, ಸಮಯ ಬಂದಾಗ ತಮ್ಮ ‘ಪವಾಡ’ ತೋರಿಸಿದ್ದವು. ಎಂತಹ ಮಾತಿಗೂ ಮರುಳಾಗದೆ ತಮ್ಮೊಳಗಿಗೆ ತಾವೇ ದಣಿಯಾಗಿದ್ದವು.



****

ಇನ್ನೊಮ್ಮೆ ಹೀಗೆ ಆಗಿತ್ತು.

‘ಪತ್ರೆ ಸಂಗಪ್ಪ’ ಅಂತ ಒಬ್ಬ ಇದ್ದ. ಬೇಡ ಬೇಡವೆಂದರೂ ಜೀತಕ್ಕೆಳೆದುಕೊಂಡು ಹೋದರು. ಚಿಕ್ಕ ಪುಟ್ಟ ಕಾರಣಕ್ಕೆ ಚಿತ್ರಹಿಂಸೆ, ಕೊನೆಗೆ ಆತನ ಕೊಲೆಯೇ ಆಗಿ ಹೋಯ್ತು. ಆ ನಾಟಕ ನಡೆಯುತ್ತಿತ್ತು. ಗೌಡ ಪತ್ರೆ ಸಂಗಪ್ಪನನ್ನು ಒದ್ದು ಬಡಿದು ಮಾಡುತ್ತಿದ್ದ. ಆ ನಾಟಕ ನೋಡುತ್ತಾ ಕುಳಿತಿದ್ದ ಹಣ್ಣು ಹಣ್ಣು ಮುದುಕಿ ‘ಅವನ ಪೊಗರು ನೋಡು..’ ಅಂತ ಎದ್ದೇ ಬಿಟ್ಟಳು.

ಜನ ಎಲ್ಲಾ ಅವಳ ಕಡೆ ತಿರುಗಿದರು. ಅಜ್ಜಿ ಪುನಃ ದನಿ ಏನೂ ಎತ್ತಲಿಲ್ಲ. ಆದರೆ ಇಡೀ ನಾಟಕದುದ್ದಕ್ಕೂ ಆಕೆಯ ನಿಟುಸಿರು ಕೇಳುತ್ತಿತ್ತು. ಇನ್ನೇನು ನಾಟಕ ಮುಗಿಯುತ್ತಾ ಬಂತು. ತನ್ನ ಹತ್ತಿರದಲ್ಲೇ ನಿಂತಿದ್ದ ನಾಟಕ ಮಾಡುತ್ತಿದ್ದ ಒಬ್ಬನನ್ನು ಕರೆದಳು. ಆತ ನಾಟಕ ಮಾಡುತ್ತಿದ್ದ. ಕೈ ಸನ್ನೆ ಮಾಡಿ ಬರಲಾಗುವುದಿಲ್ಲ ಎಂದರೂ ಅಜ್ಜಿ ಸುಮ್ಮನೆ ಬಿಡುತ್ತಿಲ್ಲ. ಅಂತೂ ಮತ್ತೇನಾದರೂ ಅವಾಂತರವಾದರೆ ಎಂದು ಆತ ಯಾರಿಗೂ ಕಾಣದಂತೆ ಅಜ್ಜಿಯ ಬಳಿ ಬಂದ.

ಆ ಅಜ್ಜಿ ಸೀರೆಯ ಸೆರಗಿನಲ್ಲಿ ಪಾಪ ತನ್ನ ಮೊಮ್ಮಕ್ಕಳಿಗಾಗಿ ಎಂದು ಕಟ್ಟಿಕೊಂಡಿತ್ತೇನೋ ಒಂದು ಚಾಕಲೇಟ್ ತೆಗೆದು ಕೊಟ್ಟಿತು. ನರಳುತ್ತಾ ಬಿದ್ದಿದ್ದ ಪತ್ರೆ ಸಂಗಪ್ಪನನ್ನ ತೋರಿಸಿದವಳೇ ಅವನಿಗೆ ಕೊಡು ಅಂದಳು. ನಾಟಕ ನಡೆಯುತ್ತಿತ್ತು. ಇನ್ನೇನು ಗೌಡ ಪತ್ರೆ ಸಂಗಪ್ಪನನ್ನು ಕೊಲೆ ಮಾಡಿಯೇ ಬಿಡಬೇಕು. ಜನ ಉಸಿರುಗಟ್ಟಿ ನೋಡುತ್ತಿದ್ದರು. ಅಂತಹ ಜನಜಂಗುಳಿಯಲ್ಲೂ ಸಾಸಿವೆ ಬಿದ್ದರೆ ಸದ್ದಾಗುವಷ್ಟು ಮೌನ. ಆಗಲೇ ಆ ಅಜ್ಜಿ ದೊಡ್ಡದಾಗಿ ದನಿ ಎತ್ತೇಬಿಟ್ಟಿತು

‘ನಾನು ಕೊಟ್ಟಿದ್ದು ನಿನಗಲ್ಲ ಆ ಸಂಗಪ್ಪನಿಗೆ ಕೊಡು’ ಅಂತ

ಆ ಸಂಗಪ್ಪನೂ, ಆ ಗೌಡನೂ, ಆ ಎಲ್ಲಾ ನಟರೂ ನಾಟಕ ಎನ್ನುವುದನ್ನೂ ಮರೆತು ಇದೇನಪ್ಪಾ ಎಂದು ಅಜ್ಜಿಯ ಕಡೆ ತಿರುಗಿದರು. ಪತ್ರೆ ಸಂಗಪ್ಪನ ಬಳಿ ಹೋಗಿ ಆತ ಚಾಕಲೇಟ್ ಮುಟ್ಟಿಸುವವರೆಗೆ ನಾಟಕ ನಡೆಯಲೇ ಇಲ್ಲ. ಆಮೇಲೆಯೇ ಅಜ್ಜಿ ಸುಮ್ಮನಾಗಿದ್ದು, ನಾಟಕ ಮುಂದುವರೆದಿದ್ದು

****

‘ಆಕಾಶವಾಣಿಯ ಈರಣ್ಣ’ ಎ.ಎಸ್. ಮೂರ್ತಿ ಕಂಚಿನ ಕಂಠದಲ್ಲಿ ಧಿಕ್ಕಾರದ ಘೋಷಣೆ ಕೂಗುತ್ತಿದ್ದರು. ಪ್ರತಿಯೊಂದು ಅವಶ್ಯಕ ವಸ್ತುವಿನ ಬೆಲೆ ಆಕಾಶಕ್ಕೇರಿತ್ತು. ಜನರ ಬಡ ಬಾನಲವನ್ನು ಸುಟ್ಟು ಹಾಕಿತ್ತು. ಸೀಮೆಎಣ್ಣೆಯನ್ನೂ ಬಿಟ್ಟಿರಲಿಲ್ಲ

ಎ.ಎಸ್. ಮೂರ್ತಿಗಳು ಧಿಕ್ಕಾರ ಧಿಕ್ಕಾರ ಎಂದು ಕೂಗಿದರಷ್ಟೇ. ಬೀದಿ ನಾಟಕದಲ್ಲಿದ್ದ ಅಷ್ಟೂ ಜನರೂ ಮರು ದನಿ ನೀಡಿದರು. ನೋಡ ನೋಡುತ್ತಾ ಮೆರವಣಿಗೆ ಹೊರಟಿತು ಬೆಲೆ ಇಳಿಸದ ಸರ್ಕಾರದ ವಿರುದ್ಧ. ಮೆರವಣಿಗೆ ಒಂದು ಹಂತಕ್ಕೆ ಬಂದಿತು. ಮೂರ್ತಿಗಳು ನೋಡುತ್ತಾರೆ, ತಾವು ಕರೆ ತಂದದ್ದು 13 ಕಲಾವಿದರನ್ನು ಆದರೆ ಅದು ಇಪ್ಪತ್ತಾಗಿ ನಿಂತಿದೆ. ಇದೇನಪ್ಪಾ ಎಂದು ಅಂತಹ ಎ.ಎಸ್. ಮೂರ್ತಿಯವರೇ ಬೆರಗಾಗಿ ನೋಡಿದರೆ, ಅವರೆಲ್ಲಾ ನಾಟಕ ನೋಡುತ್ತಾ ಕುಳಿತ ಜನ. ಅವರ ಮನೆಯಲ್ಲೂ ಸೀಮೆ ಎಣ್ಣೆ ಸಮಸ್ಯೆ ಇತ್ತು. ಸರಿ ಇವರು ನಾಟಕದಲ್ಲಿ ತೆಗೆದ ಮೆರವಣಿಗೆಯಲ್ಲಿ ಧಿಕ್ಕಾರ ಕೂಗುತ್ತ ತಾವೂ ಸೇರಿಹೋಗಿದ್ದರು

****

‘ಕೋಟಿ ಕೋಟಿ ಬಾಧೆಗಳಲ್ಲಿ
ಲಕ್ಷಾಂತರ ನೋವುಗಳಲ್ಲಿ
ನೀ ಹುಟ್ಟಿ ಬೆಳೆದೆಯಮ್ಮ
ನನ್ನ ತಂಗಿ
ಅನಸೂಯ..’

ಎಂದು ದನಿ ತೆಗೆದದ್ದು ಮಾಲೂರು ತಾಲೂಕು ಟೇಕಲ್ ಹೋಬಳಿ ಹುಣಸೀಕೋಟೆಯಲ್ಲಿ ನಡೆದ ಅತ್ಯಾಚಾರದ ನಂತರ. ನಟರು ಬೀದಿಗಿಳಿದಿದ್ದರು ಅನಸೂಯಳ ಮೇಲೆ ನಡೆದ ಅತ್ಯಾಚಾರದ ನೋವು ಎಲ್ಲರಿಗೂ ತಟ್ಟಿತ್ತು

‘ಬೆಲ್ಚಿ’ ನಾಟಕ ನಡೆದಿತ್ತು. 11 ಜನ ದಲಿತರನ್ನು ಹಾಡಹಗಲೇ ಸುಟ್ಟು ಹಾಕಿದ ಪ್ರಕರಣ ಅದು. ಆ ನಾಟಕದಲ್ಲಿ ಒಂದು ಸಂಭಾಷಣೆ ಬರುತ್ತದೆ. ಈ ಘಟನೆ ನಡೆದ ಎಷ್ಟೋ ಕಾಲದ ನಂತರ ದೊಡ್ಡ ಬೆಂಗಾವಲಲ್ಲಿ ಇಂದಿರಾ ಬರುತ್ತಾರೆ..

ಹೇಗೆ ಬಂದ್ರು ಅಂತೀರಾ

ಆನೆ ಮೇಲೆ ಬಂದ್ಲು.. ಅಂಬಾರೀನಲ್ಲಿ ಬಂದ್ಲು.. ಅಂತ ಯಾವಾಗ ಆ ಡೈಲಾಗ್ ಬಂತೋ– ಈ ಸಲಾನೂ ಬರ್ತಾಳೇನು ಆಕಿ. ಬರ್ಲಿ ಎಲ್ಲಾ ತಯಾರು ಮಾಡಿ ಇಟ್ಕೊಂಡೇವಿ. ಆಕಿ ಒಂದ್ಕಡಿ... ಚಪ್ಪಾ ಒಂದ್ಕಡಿ ಮಾಡ್ತೀವಿ ಅಂತ ಎದ್ದು ನಿಂತೇಬಿಟ್ಟರು.

ಇದೇ ನಾಟಕ ನೋಡುತ್ತಿದ್ದ ಮದೀನಾಬಿ ಕಣ್ಣೀರು ಹಾಕುತ್ತಾ ಕುಳಿತಿದ್ದಳು. ಯಾಕವ್ವಾ ಅಂತ ಕೇಳಿದ್ರೆ

‘ಈ ನಾಡ ಮಣ್ಣಿನಲ್ಲಿ ಮಣ್ಣಾದ ಜನಗಳ ಕಥೆಯ
ಕಥೆಯೊಂದ ಹೇಳತೀವಿ
ಸಾರಿ ಸಾರಿ ಹೇಳತೀವಿ
ಕಿವಿಗೊಟ್ಟು ಕೇಳಿರಣ್ಣಾ ನೋವಿನಾ ರಾಗವನ್ನು’

ಅನ್ನುವ ಹಾಡು ಅವಳನ್ನು ಕದಲಿಸಿಹಾಕಿತ್ತು. ಚಲೋ ಹಾಡು ಹೇಳ್ತೀರಿ ಅರ್ಥ ಆಗೋ ಮಂದಿಗೆ ಅರ್ಥ ಆಗ್ತಾವ ಅಂತ ನಿಟ್ಟುಸಿರಿಟ್ಟಳು.

**

ಪತ್ರೆ ಸಂಗಪ್ಪ ಇನ್ನೊಂದೆಡೆ ಇನ್ನೇನು ಕೊಲೆಯಾಗಲು ಸಜ್ಜಾಗಿದ್ದ. ಊರಿನ ಗೌಡ ಗುಟುರು ಹಾಕುತ್ತಿದ್ದ. ಏನು ಮಾಡ್ಲಿ, ಊರಿಗೆ ಹೋದ್ರೆ ಗೌಡ ನನ್ನ ಕೊಲೆ ಮಾಡಿಸಿಬಿಡ್ತಾನೆ ಅಂತ ಭಯದಿಂದ ನಿಟ್ಟುಸಿರಿಟ್ಟ ಅವನು ಹಾಗೆ ಅಂದ ಅಷ್ಟೇ, ನಾಟಕ ನೋಡುತ್ತಿದ್ದ ಒಬ್ಬ ಎದ್ದು ನಿಂತೇ ಬಿಟ್ಟ. ಹಸಿಬಿಸಿ ರಕ್ತದ ಹುಡುಗ.

‘ಯಾಕೆ ನಾನಿಲ್ವಾ, ಏನು ಮಾಡ್ತಾನೆ ನೋಡೇ ಬಿಡ್ತೀನಿ ನಡಿ ಹೋಗೋಣ’ ಎಂದು ನಿಂತೇ ಬಿಟ್ಟ. ನಾಟಕ ಆಡುತ್ತಿದ್ದವರೂ ನೋಡುತ್ತಿದ್ದವರೂ ಇವನೆಡೆಗೆ ತಿರುಗಿದರು. ಎಲ್ಲರೂ ತನ್ನತ್ತಲೇ ನೋಡುತ್ತಿದ್ದುದನ್ನು ನೋಡಿ ಆತ ಹಾಗೇ ಸುಮ್ಮನೆ ಕುಳಿತ. ನಾಟಕ ಮುಂದುವರೆಯಿತು. ಪತ್ರೆ ಸಂಗಪ್ಪನ ಕೊಲೆಯೂ ಆಯಿತು.

‘ಸಾಯ್ಸಿಬಿಟ್ರಾ ಅಯ್ಯೋ ನನ್ನ ಮಕ್ಕಳಾ ಎಲ್ಲರೂ ಹಂಗೇನಾ..’ ಅಂತ ಕೂಗಿದ

****

ನಾನು ಮತ್ತೆ ನಿಂತಿದ್ದೆ ಬೀದಿಯಲ್ಲಿ.

ತುರ್ತು ಪರಿಸ್ಥಿತಿಯ ಕರಾಳ ದಿನಗಳ ಬಗ್ಗೆ ನಾಟಕ. ಪ್ರತೀ ಪೊಲೀಸ್ ಸ್ಟೇಷನ್ ನರಕಕ್ಕೆ ಹೆಬ್ಬಾಗಿಲು ತೆರೆದಿದ್ದವು. ಪೊಲೀಸ್ ಸ್ಟೇಷನ್ ಮಾತಿರಲಿ, ಭಾರತಕ್ಕೆ ಭಾರತವೇ ನರಕವಾಗಿ ಹೋಗಿತ್ತು. ‘ಭಾರತ ದರ್ಶನ’ ನಾಟಕ ಬೀದಿಯಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತಿತ್ತು. ತುರ್ತು ಪರಿಸ್ಥಿಯನ್ನು ವಿರೋಧಿಸಿದವನ ಮೇಲೆ ಪೊಲೀಸರು ಲಾಠಿ ಬೀಸುತ್ತಿದ್ದಾರೆ. ಮುಖ ಜಜ್ಜಿ ಹಾಕುತ್ತಿದ್ದಾರೆ ಖಾರದ ಪುಡಿ ಎರಚುತ್ತಿದ್ದಾರೆ.

ನಾನು ಇನ್ನೇನು ಕೊನೆಯ ಬಾರಿಗೆ ಎನ್ನುವಂತೆ ಲಾಠಿ ಎತ್ತಬೇಕು. ಗುಂಪಿನಿಂದ ಜಿಗಿದ ಒಬ್ಬ ಬೀಸುತ್ತಿದ್ದ ಲಾಠಿಯನ್ನು ಹಿಡಿದೇ ಬಿಟ್ಟ. ‘ಅವನ ಮೇಲೆ ಕೈ ಮಾಡಿ ನೋಡು..’ ಅಂತ ಕೆಂಗಣ್ಣು ಬೀರಿದ. ನಾನು ಇದೇನಾಗಿ ಹೋಗುತ್ತಿದೆ ಎಂದು ನೋಡುವಷ್ಟರಲ್ಲಿ ನನ್ನ ಕಾಲರ್ ಪಟ್ಟಿ ಅವನ ಮುಷ್ಟಿಯಲ್ಲಿತ್ತು

****

ಇವರು ನಾನು ಒಡ್ಡಿದ್ದ ಬೊಗಸೆಗೆ ಚಿಲ್ಲರೆ ಬಿಡಿಗಾಸು ಹಾಕದೆ ಹೋಗಿರಬಹುದು. ಆದರೆ ತಮ್ಮ ನೋವುಗಳನ್ನು ಸುರಿದಿದ್ದರು. ಅವರು ನನ್ನ ಬೊಗಸೆಯತ್ತ ಕಣ್ಣೆತ್ತಿಯೂ ನೋಡದಿರಬಹುದು. ಆದರೆ ಕಣ್ಣೀರು ತುಂಬಿದ್ದರು. ಅವರು ನಾನು ಒಡ್ಡಿದ್ದ ಬೊಗಸೆಯನ್ನು ತಿರಸ್ಕರಿಸಿರಬಹುದು. ಆದರೆ ಅರಿವಿನ ನೋಟವನ್ನು ತುಂಬಿದ್ದರು.

ಕೃಪೆ: ಲೇಖಕರ ಫೇಸ್ ಬುಕ್ ನಿಂದ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**